ಐಕ್ಯರಂಗ 50

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 34 ಆಗಸ್ಟ್ 18-24, 1997 ಬೆಲೆ ರೂ. 2.00

# ಸ್ವಾತಂತ್ರ್ಯದ ಸ್ವರ್ಣ ಜಯಂತಿ: ಸಡಗರದ ಆರಂಭ

**ಬ್ರಿಟಿಶ್ ವಸಾಹತುಶಾಹಿಯಿಂದ ದೇಶ ವಿಮೋಚನೆಗೊಂಡ ೫೦ನೇ ವಾರ್ಷಿಕೋತ್ಸವ ವನ್ನು ದೇಶದ ರಾಜಧಾನಿ ಮತ್ತು ಇತರೆಡೆ ಭಾರೀ ಸಡಗರ, ಸಂಭ್ರಮದಿಂದ ಆಚರಿಸಲಾಗಿದೆ. ದಿಲ್ಲಿಯಲ್ಲಿ ಆಗಸ್ಟ್ ೧೪ ರ ಸಂಜೆಯಿಂದಲೇ ಸ್ವರ್ಣಜಯಂತಿ ಆಚರಣೆಯ ಸಡಗರ ಆರಂಭವಾಯಿತು. ಈ ಸಂಭ್ರಮದ ನಡುವೆ ರಾಷ್ಟ್ರಪತಿ, ಪ್ರಧಾನ ಮಂತ್ರಿಗಳು ದೇಶ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳತ್ತವೂ ಮುಖ್ಯವಾಗಿ ಭ್ರಷ್ಟಾಚಾರದತ್ತ ದೇಶ ಬಾಂಧವರ ಗಮನ ಸೆಳೆದಿದ್ದಾರೆ.**


ಆಗಸ್ಟ್ 14 ರ ಸಂಜೆಯಾಗುತ್ತಿದ್ದಂತೆ ಸಿಂಗಾರಗೊಂಡು ನಿಂತಂತಿದ್ದ ನವದೆಹಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಲೇಸರ್ ಪ್ರದರ್ಶನವನ್ನು ಕಂಡಿತು. 50 ವರ್ಷಗಳ ಹಿಂದೆ ಆಗಸ್ಟ್ 14-15 ರ ಮಧ್ಯರಾತ್ರಿ ಭಾರತದ ಮೇಲೆ ಬ್ರಿಟಿಶ್ ವಸಾಹತುಶಾಹಿ ಆಳ್ವಿಕೆಯ ಅಂತ್ಯವನ್ನು ಅಧಿಕೃತವಾಗಿ ಸಾರಿದ ವಿಶೇಷ ಸಮಾರಂಭ ನಡೆದ ಸ್ಥಳದಲ್ಲೇ ಅದೇ ವೇಳೆಗೆ ಸಂಸತ್ತಿನ ವಿಶೇಷ ಅಧಿವೇಶನ ವನ್ನುದ್ದೇಶಿಸಿ ರಾಷ್ಟ್ರಪತಿ ನಾರಾಯಣನ್ ಮಾತನಾಡಿದರೆ, ಮರುದಿನ ಮುಂಜಾನೆ ಕೆಂಪುಕೋಟೆಯಲ್ಲಿ ರಾಷ್ಟ್ರೀಯ ಬಾವುಟ ವನ್ನು ಹಾರಿಸಿ ಪ್ರಧಾನ ಮಂತ್ರಿ ಗುಜ್ರಾಲ್ ದೇಶವನ್ನುದ್ದೇಶಿಸಿ ಮಾತನಾಡಿದರು.

ಎರಡೂ ಭಾಷಣಗಳಲ್ಲಿ ನಿರೀಕ್ಷಿಸಿದಂತೆ ಸ್ವಾತಂತ್ರ್ಯದ ಹೋರಾಟದ ನೆನಪು ಗಾಂಧೀಜಿ, ನೆಹರೂ ಇತ್ಯಾದಿಯವರ ಪಾತ್ರಗಳ ಸ್ಮರಣೆಯಿತ್ತು. ನೇತಾಜಿ, ಭಗತ್ ಸಿಂಗ್ ರಂತಹ ಭಿನ್ನಹಾದಿ ಹಿಡಿದು ಹುತಾತ್ಮರಾದವರ ನೆನಪೂ ಸ್ವಲ್ಪಮಟ್ಟಿಗೆ ಇತ್ತು. ನಿರೀಕ್ಷಿಸಿದಂತೆ ಕಾರ್ಮಿಕ ವರ್ಗ, ರೈತಾಪಿ ವರ್ಗದ ಐತಿಹಾಸಿಕ ಪಾತ್ರದ ಉಲ್ಲೇಖ ಇರಲಿಲ್ಲ. ಇತಿಹಾಸದ ನೆನಪಿನೊಂದಿಗೆ ವರ್ತಮಾನದ ಪರಿಸ್ಥಿತಿಯ ಬಗ್ಗೆಯೂ ಈ ಎರಡೂ ಭಾಷಣಗಳು ಪ್ರಸ್ತಾಪಿಸಿದವು. ರಾಷ್ಟ್ರಪತಿಗಳು ಭ್ರಷ್ಟಾಚಾರ, ಕೋಮುವಾದ, ಜಾತಿವಾದ ಹಾಗೂ ರಾಜಕೀಯ ಅಪರಾಧೀಕರಣ ಇವನ್ನು ಪ್ರಮುಖ ಅನಿಷ್ಟಗಳು ಎಂದು ಗುರುತಿಸಿ ಅವುಗಳ ವಿರುದ್ಧ ಹೋರಾಡಬೇಕಿದೆ ಎಂದರು. ಪ್ರಧಾನ ಮಂತ್ರಿಗಳು ಭ್ರಷ್ಟಾಚಾರದ ವಿರುದ್ಧ ಸತ್ಯಾಗ್ರಹವನ್ನೇ ಆರಂಭಿಸಬೇಕೆಂದು ಕರೆ ನೀಡಿದರು. ಆದರೆ ಎರಡೂ ಭಾಷಣಗಳಲ್ಲಿ ಐವತ್ತು ವರ್ಷಗಳ ನಂತರ ದೇಶ ಈ ಗಂಭೀರ ಸಮಸ್ಯೆಗಳನ್ನು ಏಕೆ ಎದುರಿಸಬೇಕಾಗಿ ಬಂತು ಎಂಬ ಬಗ್ಗೆ ಪ್ರಸ್ತಾಪ ಕಾಣಲಿಲ್ಲ. 1991 ರ ನಂತರದ 'ಸುಧಾರಣೆ'ಗಳ ಬಗ್ಗೆ ಮಾತ್ರ ಪ್ರಸಾಪಿಸಲು ಎರಡೂ ಭಾಷಣಗಳೂ ಮರೆಯಲಿಲ್ಲ.

ಕಳೆದ ತಿಂಗಳಷ್ಟೇ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಈ ಭಾಷಣಗಳಲ್ಲಿ ಗುರುತಿಸಿದ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗುವಂತೆ ಸಂಯುಕ್ತ ರಂಗ ಸರಕಾರದ ಮೇಲೆ ಒತ್ತಡ ತರಲು ಹದಿನೈದು ದಿನಗಳ ರಾಷ್ಟ್ರೀಯ ಪ್ರಚಾರಾಂದೋಲನ ನಡೆಸಿದ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳೂ ಸ್ವಾತಂತ್ರ್ಯದ ಸ್ವರ್ಣಜಯಂತಿಯ ಆಚರಣೆಯನ್ನು ಆರಂಭಿಸಿವೆ. 1947 ರಲ್ಲಿ ಕೊನೆಗೂ ಭಾರತ ಪಡೆದ ಸ್ವಾತಂತ್ರ್ಯ ತಮ್ಮ ಪರಿಕಲ್ಪನೆಯ ಸ್ವಾತಂತ್ರ್ಯವಲ್ಲವಾದರೂ, ವಸಾಹತುಶಾಹಿಯಿಂದ ನೇರ ಶೋಷಣೆಯ ಘಟ್ಟ ಮುಗಿದು ಶೋಷಣಾ ಮುಕ್ತ ಸಮಾಜದತ್ತ ಸಾಗುವಲ್ಲಿನ ಐತಿಹಾಸಿಕ ಹೋರಾಟದ ಪ್ರಮುಖ ಮೈಲಿಗಲ್ಲು ಇದು ಎಂದು ಆಗ ಎಡಶಕ್ತಿಗಳು ಗುರುತಿಸಿದ್ದವು. ಯಾವ ಕಾರಣಕ್ಕೆ ಇದು ತಮ್ಮ ಪರಿಕಲ್ಪನೆಯ ಸ್ವಾತಂತ್ರ್ಯ ಅಲ್ಲ ಎಂದು ಎಡಶಕ್ತಿಗಳು ಹೇಳಿದವೋ ಅವೇ ಕಾರಣಗಳೇ ಅಥವಾ ದೌರ್ಬಲ್ಯಗಳೇ ಈಗ ಐವತ್ತು ವರ್ಷಗಳ ನಂತರ ದೇಶದ ಪ್ರಮುಖ ಸಮಸ್ಯೆಗಳಾಗಿ ರೂಪು ತಳೆದು ದೇಶದ ಮುಂದೆ ನಿಂತಿವೆ. ಈ ಸಮಸ್ಯೆಗಳನ್ನು ಗುರುತಿಸಿ ಅವುಗಳ ವಿರುದ್ಧ ಹೋರಾಟದ ಕರೆ ನೀಡಿರುವ ರಾಷ್ಟ್ರಪತಿಗಳ ಭಾಷಣ, ಪ್ರಧಾನ ಮಂತ್ರಿಗಳ ಭಾಷಣಗಳು ಪ್ರಸ್ತಾಪಿಸಿದ ಪ್ರಶ್ನೆಗಳ ಬಗ್ಗೆ ಈ ಸಮಸ್ಯೆಗಳು ಏಕೆ ಉಂಟಾದವು, ಅವುಗಳ ಪರಿಹಾರ ಹೇಗೆ, ಸ್ವರಾಜ್ಯವನ್ನು, ಸಾರ್ವಭೌಮತೆ ಯನ್ನು ಉಳಿಸಿ ಬೆಳಿಸಿಕೊಳ್ಳುವುದು ಹೇಗೆ ಎಂಬಿತ್ಯಾದಿ ಪ್ರಶ್ನೆಗಳ ಬಗ್ಗೆ ಸ್ವರ್ಣ ಜಯಂತಿಯ ವರ್ಷದಲ್ಲಿ ವಸ್ತುನಿಷ್ಟ ವಿಶ್ಲೇಷಣೆ ನಡೆಯಬೇಕೆಂಬ ಆಶಯದಿಂದ ಎಡ ಶಕ್ತಿಗಳು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ದುಡಿಯುವ ಜನಗಳ ಪಾತ್ರಕ್ಕೆ ಸಲ್ಲಬೇಕಾದ ಸ್ಥಾನವನ್ನು ದೊರೆಯುವಂತೆ ಮಾಡಲು ಅವು ಪ್ರಯತ್ನಿಸುತ್ತಿವೆ.

ಮಹಿಳಾ ಮೀಸಲಾತಿ ಮಸೂದೆಗೆ ಇನ್ನೂ ಅಂಗೀಕಾರ ದೊರೆಯ ದಿರುವುದು, ಕೃಷಿ ಕಾರ್ಮಿಕರಿಗೆ ಕನಿಷ್ಟ ಸೌಲಭ್ಯಗಳ ಶಾಸನದಲ್ಲಿ ಇನ್ನೂ ವಿಳಂಬ, ಆದರೆ ಅದರ ನಡುವೆ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ಹಾಗೂ ಸಮೃದ್ಧಿಗೆ ಕಾಣಿಕೆ ನೀಡುವ ವಿಮಾ ರಂಗದ ರಾಷ್ಟ್ರೀಕರಣವನ್ನು ತಿರುಗು ಮುರುಗು ಮಾಡುವ ಮಸೂದೆಯ ಬಗ್ಗೆ ತರಾತುರಿ ಇವೆಲ್ಲಾ ಕೇವಲ ಕಳೆದ ವಾರವಷ್ಟೇ ಪ್ರಜಾಪ್ರಭುತ್ವವಾದಿಗಳ ಆತಂಕವನ್ನು ಹೆಚ್ಚಿಸಿದ ಸಂದರ್ಭಗಳು. ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಒಪ್ಪದೆ ಸಿಡಿದುಹೋದ ಪಕ್ಷದ ಮೂವರು ಮಂತ್ರಿಗಳನ್ನು ಇನ್ನೂ ಕೈಬಿಡದ ಪ್ರಧಾನ ಮಂತ್ರಿಗಳು ಭ್ರಷ್ಟಾಚಾರದ ವಿರುದ್ಧ ಸತ್ಯಾಗ್ರಹದ ಕರೆ ನೀಡಿದರೆ ಎಷ್ಟರಮಟ್ಟಿಗೆ ಜನ ಸ್ಪಂದಿಸಬಲ್ಲರು ಎಂಬುದೂ ಯೋಚಿಸಬೇಕಾದ ವಿಷಯ. ಏನೇ ಇರಲಿ ಆಗಸ್ಟ್ 14-15 ರ ರಾತ್ರಿ ಸಂಸತ್ ಭವನದಲ್ಲಿ ಮತ್ತೆ ಕೇಳಿಸಿದ ಮಹಾತ್ಮಗಾಂಧಿ, ನೆಹರೂ ಹಾಗೂ ನೇತಾಜಿಯವರ ಧ್ವನಿ (ಮುದ್ರಿಕೆ)ಗಳು ನಮ್ಮ ಜನ ಪ್ರತಿನಿಧಿಗಳಲ್ಲಿ ಸ್ವಾತಂತ್ರ್ಯದ ಆರಂಭದಲ್ಲಿ ಈ ದೇಶದ ಜನಕೋಟಿಗೆ ನೀಡಿದ ವಚನಗಳನ್ನು, ದೇಶದ ಐಕ್ಯತೆಯನ್ನು, ಕೋಮು ಸೌಹಾರ್ದತೆಯನ್ನು ಹಾಗೂ ಆರ್ಥಿಕವೂ ಸೇರಿದಂತೆ ಎಲ್ಲ ರೀತಿಯ ಸಾರ್ವಭೌಮತೆ ಯನ್ನು ಕಾಪಾಡಿಕೊಳ್ಳ ಬೇಕಾದ ಅವಶ್ಯಕತೆಯನ್ನು ನೆನಪಿಸುತ್ತವೆ ಎಂದು ದೇಶದ ಪ್ರಜಾಪ್ರಭುತ್ವ ಶಕ್ತಿಗಳು ಆಶಿಸುತ್ತಿವೆ.

ಸ್ವಾತಂತ್ರ್ಯದ ಆರಂಭದಲ್ಲಿ ಜನಗಳಿಗೆ ನೀಡಿದ್ದ ವಚನಗಳನ್ನು ನೆನಪಿಸಿದ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ರಾಷ್ಟ್ರಪತಿಗಳ ಭಾಷಣ



## ಎಡ ಪಕ್ಷಗಳ ಮೇಲೆ ಕಾಂಗ್ರೆಸ್ ಅಧ್ಯಕ್ಷರು ಏಕೆ ಹರಿಹಾಯುತ್ತಿದ್ದಾರೆ?

ಕಾಂಗ್ರೆಸ್ ಅಧ್ಯಕ್ಷರು ಈಗ ಎಡ ಪಕ್ಷಗಳ ಮೇಲೆ ಹರಿಹಾಯುತ್ತಿದ್ದಾರೆ. ಕಲ್ಕತ್ತಾದ ಕಾಂಗ್ರೆಸ್ ಅಧಿವೇಶನದ ಮೊದಲು, ಅಧಿವೇಶನದಲ್ಲಿ ಎಡ ಪಕ್ಷಗಳನ್ನು ಕಟುವಾಗಿ ಟೀಕಿಸಲಾಗಿದೆ. ಇದು ತನ್ನ ವಿಫಲತೆಗಳನ್ನು ಮುಚ್ಚಿಕೊಳ್ಳುವ ಅವರ ಹತಾಶ ಪ್ರಯತ್ನ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ವರ್ಣಿಸಿದೆ. ಎಡರಂಗ ಸರಕಾರದ ಪ್ರತಿಷ್ಠೆಗೆ ಕುಂದು ತರಲಾಗದೆ ಕಾಂಗ್ರೆಸ್ 'ಪರ್ಸನಲ್ ಲೆಡ್ಜರ್ ಖಾತೆ'ಯದ್ದು ಒಂದು ಹಗರಣ ಎಂದು ತನ್ನ ರಾಜಕೀಯ ನಿರ್ಣಯ ದಲ್ಲಿಯೂ ಪ್ರಸ್ತಾಪಿಸಿದೆ. ಈ ನಡುವೆ ಕಲ್ಕತ್ತಾ ಹೈಕೋರ್ಟ್ ಮತ್ತು ಸಿ.ಎ.ಜಿ. ಹಣದ ದುರುಪಯೋಗದ ಬಗ್ಗೆ ಶಂಕೆ ಪಡಲು ಆಧಾರಗಳಿಲ್ಲ ಎಂದು ಸೂಚಿಸಿದರೂ ಅದನ್ನು ಕಾಂಗ್ರೆಸ್ ಉದ್ದೇಶಪೂರ್ವಕವಾಗಿಯೇ ಗಮನಿಸಿದಂತಿಲ್ಲ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಕಾಂಗ್ರೆಸ್‌ನ ಕಲ್ಕತ್ತಾ ಅಧಿವೇಶನ ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಖೇದ ವ್ಯಕ್ತಪಡಿಸಿದ ಮಾತ್ರಕ್ಕೆ ಇದರಲ್ಲಿ ಕಾಂಗ್ರೆಸ್(ಐ) ಸರಕಾರದ ಹೊಣೆಗಾರಿಕೆಯೇನೂ ಕಮ್ಮಿಯಾಗುವುದಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಇದು ಬಹಳ ತಡವಾಗಿ ಬಂದಿದೆ, ನರಸಿಂಹರಾವ್ ಸರಕಾರದ ಜವಾಬ್ದಾರಿ ಯಿಂದ ನುಣುಚಿಕೊಳ್ಳುವ ಪ್ರಯತ್ನವಷ್ಟೇ ಇದು ಎಂದಿದೆ.

ಈ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕರಿಸಿದ ಆರ್ಥಿಕ ಹಾಗೂ ರಾಜಕೀಯ ನಿರ್ಣಯಗಳಲ್ಲಿಯೂ ಆತ್ಮ ವಿಮರ್ಶೆ ಯೆಂಬುದು ಇಲ್ಲ. ಪಕ್ಷವನ್ನು ಜನ ಏಕೆ ದೂರ ಮಾಡಿದರು ಎಂಬ ಬಗ್ಗೆ ಚಿಂತನೆಯೂ ಇವುಗಳಲ್ಲಿಲ್ಲ. ಈ ಪಕ್ಷ ಮತ್ತೆ ತನ್ನ ಹಿಂದಿನ ಸ್ಥಾನ ಪಡೆಯುವಂತೆ ತಾನು ಹಿಡಿಯಬೇಕಾದ ದಾರಿಯ ಮರು ನಿರೂಪಣೆ ಮಾಡುವಲ್ಲಿಯೂ ಈ ಪಕ್ಷ ವಿಫಲವಾಗಿದೆಯೆಂಬುದೇ ಈ ಕಲ್ಕತ್ತಾ ಅಧಿವೇಶನ ನೀಡುತ್ತಿರುವ ಸಂಕೇತ ಎಂದು ಸಿಪಿಐ(ಎಂ) ಹೇಳಿದೆ.

ಈ ಮೊದಲು ಬಿಹಾರ ಕುರಿತಂತೆ ಕಾಂಗ್ರೆಸ್‌ನ ನಿಲುವನ್ನು ಟೀಕಿಸುತ್ತಾ ಸಿಪಿಐ(ಎಂ) ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಬರೆದ ಲೇಖನದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು ಕೋಮುವಾದದ ವಿರುದ್ಧ ಹೋರಾಟದ ಬಗ್ಗೆ ಸಿಪಿಐ(ಎಂ)ಗೆ ಕಾಂಗ್ರೆಸ್‌ನ ಸರ್ಟಿಫಿಕೇಟ್ ಅವಶ್ಯಕತೆಯಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು.

ಬಿಹಾರದಲ್ಲಿ ಒಂದು ತಿಂಗಳೊಳಗೆ ಎರಡು ಬಾರಿ ಕಾಂಗ್ರೆಸ್ ಭ್ರಷ್ಟಾಚಾರದ ಆರೋಪಕ್ಕೊಳಗಾದ ಲಾಲೂ ಪ್ರಸಾದ್ ಯಾದವ್‌ರ ನೆರವಿಗೆ ಧಾವಿಸಿತು. ಇದಕ್ಕೆ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿಯವರು ಕೊಟ್ಟಿರುವ ತರ್ಕವೆಂದರೆ ಭ್ರಷ್ಟಾಚಾರ ಮತ್ತು ಕೋಮುವಾದದ ಮಧ್ಯೆ ಆಯ್ಕೆಯ ಪ್ರಶ್ನೆ ಬಂದರೆ ತಾನು ಭ್ರಷ್ಟಾಚಾರವನ್ನೇ ಆರಿಸಿ ಕೊಳ್ಳಬೇಕು ಎಂದು. ಅಂದರೆ ಕೋಮು ವಾದದ ವಿರುದ್ಧ ಹೋರಾಡ ಬೇಕಾದರೆ ಭ್ರಷ್ಟಾಚಾರದ ನೆರವು ಪಡೆಯ ಬೇಕು. ಏಕಕಾಲದಲ್ಲಿ ಇವೆರಡರ ವಿರುದ್ಧ ಹೋರಾಟ ಸಾಧ್ಯವಿಲ್ಲ ಎಂಬುದೇ ಅವರ ಆಶಯ.

ನಿಜ, ಕೋಮುವಾದದ ಬೆದರಿಕೆ ಬಹಳ ತೀವ್ರವಾಗಿದೆ. ಅಂದ ಮಾತ್ರಕ್ಕೆ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಹಿಂದೆಸರಿಸುವುದು ಒಳ್ಳೆಯ ರಾಜಕೀಯ ವಲ್ಲ, ಕೆಟ್ಟ ರಾಜಕೀಯ ಎಂದಿರುವ ಸುರ್ಜಿತ್‌ರವರು ಕಾಂಗ್ರೆಸ್ ಅಧ್ಯಕ್ಷರ ಈ ತರ್ಕಕ್ಕೆ ಬೇರೆಯೇ ಕಾರಣಗಳಿವೆ ಎಂದಿದ್ದಾರೆ. 1996 ರಲ್ಲಿ ಮತದಾರರು 5 ವರ್ಷಗಳಲ್ಲಿ ಭ್ರಷ್ಟಾಚಾರದ ಕಲೆಯಲ್ಲಿ ಪರಿಣತಿ ಪಡೆದ ಕಾಂಗ್ರೆಸ್ ಸರಕಾರದ ಬಗ್ಗೆ ಸ್ಪಷ್ಟ ತೀರ್ಮಾನ ನೀಡಿದರು. ಭ್ರಷ್ಟಾಚಾರದ ಮೊಕದ್ದಮೆಗಳು ಕಾಂಗ್ರೆಸ್ ಮುಖಂಡರನ್ನು ಸುತ್ತುವರಿದಾಗ ಸ್ವತಃ ಆ ಪಕ್ಷವೇ ಮುಖಂಡತ್ವದ ಬದಲಾವಣೆ ಮಾಡ ಬೇಕಾಯಿತು. ಹಾಗೆ ಅಧ್ಯಕ್ಷ ಸ್ಥಾನ ಪಡೆದ ಸೀತಾರಾಂ ಕೇಸರಿಯವರು ಭ್ರಷ್ಟಾಚಾರದ ವಿರುದ್ಧ ಹೋರಾಡಿ ಕಾಂಗ್ರೆಸ್ಸನ್ನು ಪುನರುಜ್ಜೀವನಗೊಳಿಸುವ ಪ್ರತಿಜ್ಞೆ ಮಾಡಿದರು. ಈಗೇಕೆ ಇಂತಹ ಕಸರತ್ತು ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ.

ಒಂದು ಜನವಿಭಾಗದ ಬೆಂಬಲ ಇರುವ ಒಬ್ಬ ಭ್ರಷ್ಟ ಮುಖಂಡ ಹಾಗೂ ನೀತಿಗಳು ಇವುಗಳ ನಡುವೆ ಆಯ್ಕೆಯ ಪ್ರಶ್ನೆ ಬಂದಾಗ ನಾವು ನೀತಿಗಳನ್ನು ಆಯ್ದುಕೊಳ್ಳಬೇಕು ಎಂಬುದರಲ್ಲಿ ಅನುಮಾನವೇ ಇಲ್ಲ ಎಂದಿರುವ ಸುರ್ಜಿತ್‌ರವರು ಕಾಂಗ್ರೆಸ್ ಅಧ್ಯಕ್ಷರು ಪ್ರಶ್ನೆಯನ್ನು ಗೊಂದಲಮಯ ಗೊಳಿಸಲು ಪ್ರಯತ್ನಿಸುತ್ತಿದ್ದಾರಷ್ಟೆ ಎಂದಿದ್ದಾರೆ.

ಎಡಪಕ್ಷಗಳು ಕೋಮುವಾದದ ವಿರುದ್ಧ ನಿರಂತರ ಹೋರಾಟ ನಡೆಸಿವೆ. ಅವಕ್ಕೆ ಕಾಂಗ್ರೆಸ್ ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಕ್ಷಮೆ ಕೇಳಿದಂತೆ ಯಾವ ವಿಷಯದಲ್ಲೂ ಕ್ಷಮೆ ಕೇಳುವ ಅವಶ್ಯಕತೆ ಬಂದಿಲ್ಲ. ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್‌ರ ಹೆಸರು ಮೇವು ಹಗರಣದಲ್ಲಿ ಕೇಳಿಬಂದಾಗ ಯಾವ ಹಿಂಜರಿಕೆಯೂ ಇಲ್ಲದೆ ಅವರ ರಾಜೀನಾಮೆಗೆ ಒತ್ತಾಯಿಸಿ ಎಡಪಕ್ಷಗಳು ದೊಡ್ಡ ಪ್ರಮಾಣದಲ್ಲಿ ಆಂದೋಲನಕ್ಕೆ ಇಳಿಯದಿದ್ದರೆ ಆ ಅವಕಾಶವನ್ನು ಸಮತಾ-ಬಿಜೆಪಿ ಕೂಟ ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ಹೆಚ್ಚುತ್ತಿರುವ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಜನಗಳಿಗೆ ಸಿಟ್ಟೇರುತ್ತಿದೆ. ಆದ್ದರಿಂದ ಕೆಲವರನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಸಣ್ಣ ಸಂಕೇತ ಕೊಟ್ಟರೂ ಅದು ಬಹಳ ಹಾನಿಯುಂಟು ಮಾಡುತ್ತದೆ. ಅಷ್ಟೇ ಅಲ್ಲ ಕೋಮುವಾದಿಗಳು ಅದನ್ನು ಬಳಸಿಕೊಂಡು ಬಲಗೊಳ್ಳಲು ಅವಕಾಶ ವಾಗುತ್ತದೆ. ಆದ್ದರಿಂದ ಭ್ರಷ್ಟಾಚಾರ ಮತ್ತು ಕೋಮುವಾದದ ವಿರುದ್ಧ ಹೋರಾಟ ಏಕಕಾಲದಲ್ಲೇ ನಡೆಯಬೇಕು ಎಂದು ಸುರ್ಜಿತ್ ಹೇಳಿದ್ದಾರೆ.




◀ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಮಾಜಿ ಅಧ್ಯಕ್ಷ ಜೋಸ್ಲೋವೋರ ಸಮಾಧಿಯ ಬಳಿ ಶ್ರದ್ಧಾಂಜಲಿ

# ದಕ್ಷಿಣ ಆಫ್ರಿಕಾದಲ್ಲಿ ಜ್ಯೋತಿ ಬಸು

## "ಶ್ರಮಜೀವಿಗಳ ಹೋರಾಟಶೀಲ ಮುಖಂಡ" ಎಂದು ಸ್ವಾಗತ

***ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳು ಹಾಗೂ ಸಿಪಿಐ(ಎಂ)ನ ಹಿರಿಯ ಮುಖಂಡ ಜ್ಯೋತಿಬಸು ಜುಲೈ 22 ರಿಂದ 31 ರವರೆಗೆ ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದರು. ಅಲ್ಲಿ ಎಲ್ಲೆಲ್ಲೂ ಅಭೂತಪೂರ್ವ ಸ್ವಾಗತ. ಅವರು 'ಆನಂದಮಯ ನೆನಪುಗಳೊಂದಿಗೆ" ತಾನು ಭಾರತಕ್ಕೆ ಹಿಂದಿರುಗುವುದಾಗಿ ಹೇಳಿದ್ದಾರೆ. ಈ ಭೇಟಿಯ ಬಗ್ಗೆ ಐ.ಎನ್.ಎನ್. ಸುದ್ದಿ ಸಂಸ್ಥೆ ಕಳಿಸಿರುವ ವರದಿ.***

ದಕ್ಷಿಣ ಆಫ್ರಿಕಾದ ಉಪಾಧ್ಯಕ್ಷ ಥಾಬೋ ಮೇಬೇಕೀಯವರ ಆಹ್ವಾನದ ಮೇರೆಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸುರವರು ಇತಿಹಾಸ ನಿರ್ಮಿಸಿದ ಹೋರಾಟಗಾರರ ನಾಡು ದಕ್ಷಿಣ ಆಫ್ರಿಕಾಕ್ಕೆ ಅಧಿಕೃತ ಭೇಟಿ ನೀಡಿದರು. ಇದು ಆ ದೇಶಕ್ಕೆ ಅವರ ಮೊದಲ ಭೇಟಿಯಾಗಿತ್ತು. ಸಭೆಗಳು, ಸಮಾರಂಭಗಳು, ಸ್ವಾತಂತ್ರ್ಯ-ಪ್ರಿಯ ದಕ್ಷಿಣ ಆಫ್ರಿಕಾದ ಜನರು ವೆರ್ವೋಡ್, ಬೋಥಾ ಹಾಗೂ ಡಿ ಕ್ಲರ್ಕ್‌ನ ಆಳ್ವಿಕೆಯಲ್ಲಿ ವ್ಯಕ್ತಪಡಿಸಿದ ಅಮೋಘ ಪ್ರತಿರೋಧಗಳ ಸ್ಮಾರಕಗಳಿಗೆ ಭೇಟಿ - ಹೀಗೆ ಬಹಳ ವ್ಯಸ್ತವಾದ ಕಾರ್ಯಕ್ರಮಗಳ ಭೇಟಿಯಾಗಿತ್ತು.

ಜುಲೈ 22 ರಂದು ಮುಂಜಾನೆ ಜ್ಯೋತಿ ಬಸು ಜೋಹಾನ್ಸ್ ಬರ್ಗ್‌ಗೆ ಬಂದಿಳಿದಾಗ ಹಿರಿಯ ಮಂತ್ರಿ ಎಸ್ಸೋಪ್ ಪಹಾಡ್ ಹಾಗೂ ಭಾರತದ ಹೈ ಕಮಿಷನರ್ ಗೋಪಾಲ್ ಗಾಂಧಿ ಅವರನ್ನು ಬರಮಾಡಿಕೊಂಡರು. ಅದೇ ದಿನ 12 ಗಂಟೆಗೆ ಬಸು ಅಧ್ಯಕ್ಷ ನೆಲ್ಸನ್. ಮಂಡೇಲಾ ರನ್ನು ಭೇಟಿ ಮಾಡಲು ಹೋದಾಗ ಸ್ವತಃ ಮಂಡೇಲಾರವರೇ ಹೊರಬಂದು ಬಸುರವರನ್ನು ಎದುರುಗೊಂಡು ಅವರ ಜಗತ್ಪ್ರಸಿದ್ಧ ಅಪ್ಪುಗೆಯೊಂದಿಗೆ ಬರಮಾಡಿ ಕೊಂಡದ್ದು ಎಲ್ಲರನ್ನು ಆಶ್ಚರ್ಯಚಕಿತ ಗೊಳಿಸಿತು.

"ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದ ಕುಸಿತದ ನಂತರ ಸೊರಗಿಹೋಗುತ್ತಿರುವ ಅಲಿಪ್ತ ಆಂದೋಲನಕ್ಕೆ ನೇತೃತ್ವ ನೀಡಿ" ಎಂದು ಜ್ಯೋತಿಬಸು ದಕ್ಷಿಣ ಆಫ್ರಿಕಾದ ಈ ಅತ್ಯುನ್ನತ ಮುಖಂಡನನ್ನು ಆಗ್ರಹಿಸಿದರು. ಇತ್ತೀಚಿನವರೆಗಿನ ಘಟನೆಗಳ ಕರಾಳ ಛಾಯೆಯಿಂದ ನರಳುತ್ತಿರುವ ದೇಶ ದಕ್ಷಿಣ ಆಫ್ರಿಕಾದಲ್ಲಿ ಪುನರ್ರಚನೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿರುವ ಮಂಡೇಲಾರವರ ಅವಿಶ್ರಾಂತ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಬಸು. ಭಾರತದಲ್ಲಿ ಅದರಲ್ಲೂ ಕಲ್ಕತ್ತೆಯಲ್ಲಿ ತನಗೆ ದೊರೆತ ಆತ್ಮೀಯ ಸ್ವಾಗತವನ್ನು ನೆನಪಿಸಿಕೊಂಡ ಮಂಡೇಲಾ ಇಲ್ಲಿಯ ಜನರಿಗೆ ಶುಭಾಶಯಗಳನ್ನು ತಿಳಿಸುವಂತೆ ಹೇಳಿದರು.

ಜ್ಯೋತಿ ಬಸು ನಂತರ ಥಾಬೋ ಮೆಬೇಕಿಯರನ್ನು ಭೇಟಿಯಾಗಿ ಜಾಗತೀಕರಣದ ಶಕ್ತಿಗಳಿಗೆ ಒಂದು ಬಲವಾದ ಪ್ರತಿರೋಧ ಒಡ್ಡಲು ಭಾರತ ಮತ್ತು ದಕ್ಷಿಣ ಆಫ್ರಿಕಾ ಸಂಯೋಜಿತ ಪ್ರಯತ್ನಗಳನ್ನು ನಡೆಸಬೇಕು ಎಂದರು.

ಮರುದಿನ ಪಟ್ಟಣಗಳ ವಸತಿ ಪ್ರದೇಶಗಳಲ್ಲಿ ಕೆಲವಕ್ಕೆ ಭೇಟಿ ನೀಡಿ ಅಲ್ಲಿ ಸ್ವಯಮಾಡಳಿತ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ವಿಚಾರಿಸಿದರು. ದಕ್ಷಿಣ ಆಫ್ರಿಕಾದ ಪೋಲೀಸ್ ಬೆಂಬತ್ತಿದ್ದ ಸತ್ಯಾಗ್ರಹಿಗಳಿಗೆ ಶರಣು ನೀಡುತ್ತಿದ್ದ ಗಾಂಧೀಜಿಯ ಟಾಲ್‌ಸ್ಟಾಯ್ ಫಾರ್ಮ್‌ಗೂ ಬಸು ಭೇಟಿ ನೀಡಿದರು. ಅಂದು ಸಂಜೆ ಜೋಹಾನ್ಸ್ ಬರ್ಗ್‌ನಲ್ಲಿ ಭಾರತದ ಹೈಕಮಿಷನ್‌ನಲ್ಲಿ ವಿ.ಕೆ.ಕೃಷ್ಣ ಮೆನನ್, ವಿಜಯಲಕ್ಷ್ಮಿ ಪಂಡಿತ್ ಹಾಗೂ ಎಂ.ಸಿ.ಛಾಗ್ಲಾರವರ ಪ್ರತಿಮೆಗಳ ಅನಾವರಣವನ್ನು ಮಾಡಿದರು.

ಜುಲೈ 24ರ ದಿನವಿಡೀ ಜೋಹಾನ್ಸ್ ಬರ್ಗ್‌ನಲ್ಲಿರುವ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಮುಖ್ಯ ಕಚೇರಿಯಲ್ಲಿ ಆ ಪಕ್ಷದ ಉನ್ನತ ಮುಖಂಡ ರೊಂದಿಗೆ ವಿಚಾರ ವಿನಿಮಯ, ಚರ್ಚೆಗಳು ನಡೆದವು. ಆ ಪಕ್ಷದ ಪ್ರಧಾನ ಕಾರ್ಯದರ್ಶಿ ಚಾರ್ಲ್ಸ್ ನಕಲುಲ, ಉಪ ಪ್ರಧಾನ ಕಾರ್ಯದರ್ಶಿ ಜೆರೆಮಿ ಕ್ರೋನಿನ್ ಹಾಗೂ ಪೊಲಿಟ್ ಬ್ಯೂರೋ ಸದಸ್ಯ ಎಸ್ಸೋಪ್ ಪಹಾಡ್ ಇದರಲ್ಲಿ ಭಾಗವಹಿಸಿದ್ದರು. ಭಾರತದಲ್ಲಿ ಸಂಯುಕ್ತ ರಂಗ ಸರಕಾರ, ಎಡರಂಗ ಸರಕಾರಗಳ ವಿವಿಧ ಕಾರ್ಯಕ್ರಮ ಗಳು ಹಾಗೂ ಅಂತರ್ರಾಷ್ಟ್ರೀಯ ಸನ್ನಿವೇಶಗಳ ಬಗ್ಗೆ ಚರ್ಚೆ, ವಿಚಾರವಿನಿಮಯ ನಡೆದವು. ಒಬ್ಬ. ಕಮ್ಯುನಿಸ್ಟ್ ಮಂತ್ರಿ ಸರಕಾರದಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಎನ್ನುವುದು ಈಗ ತಮ್ಮ ಪಕ್ಷದ ವಿವಿಧ ವೇದಿಕೆಗಳಲ್ಲಿ ಒಂದು ಚರ್ಚೆಯ ವಿಷಯವಾಗಿದೆ ಎಂದು ನಕಲುಲ ಹೇಳಿದರು. ಪಕ್ಷದ ಶಿಕ್ಷಣದ ಬಗ್ಗೆ ಹೆಚ್ಚು ಒತ್ತು ನೀಡುತ್ತಾ ಪುಸ್ತಕಗಳು, ಕರಪತ್ರಗಳ ಪ್ರಕಟಣೆಗೆ ವಿಶೇಷ ಗಮನ ನೀಡಲಾಗುತ್ತಿದೆ ಎಂದು ಅವರು ಹೇಳಿದರು. 80 ಸಾವಿರ ಸದಸ್ಯರಿರುವ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಒಂಭತ್ತು ಪ್ರಾಂತೀಯ ಸಮಿತಿಗಳನ್ನು ಹೊಂದಿದೆ.

ಜ್ಯೋತಿಬಸು ಕುಪ್ರಸಿದ್ಧ ರೊಬೆನ್ ದ್ವೀಪವನ್ನು ಸಂದರ್ಶಿಸಿದರು. ಇಲ್ಲಿ ದಕ್ಷಿಣ ಆಫ್ರಿಕಾದ ವರ್ಣದ್ವೇಷ ನೀತಿಯ ವಿರುದ್ಧ ಹೋರಾಟದ ಪ್ರಮುಖ ಮುಖಂಡರನ್ನು ಗಡಿಪಾರು ಮಾಡಿ ಇಡಲಾಗುತ್ತಿತ್ತು. ಮಂಡೇಲಾ, ವಾಲ್ಟರ್ ಸಿಸಲು, ಡೆಸ್ಮಂಡ್ ಟುಟು, ಮ್ಯಾಕ್ ಮಹರಾಜ್, ಟೊಕ್ಯೊ, ಸಿಕ್ಸ್‌ವಾಲ ಮುಂತಾದ ಹಿರಿಯ ಮುಖಂಡರು ಇಲ್ಲಿ ಜೈಲು ವಾಸ ಅನುಭವಿಸಿದರು. ಮಂಡೇಲಾ ತನ್ನ ಸೆರೆವಾಸದ ಹಗಲಿನಲ್ಲಿ ದುಡಿಯಲೇಬೇಕಾಗಿದ್ದ ಬೆಣಚು ಕಲ್ಲಿನ ಗಣಿಯನ್ನು ನೋಡಿದರು. ಈ ಕಲ್ಲಿನ ನುಣುಪು ಧೂಳು ಮಂಡೇಲರ ಕಣ್ಣುಗಳನ್ನು ಶಾಶ್ವತವಾಗಿ ಹಾಳುಗೆಡವಿದೆ.

ಜುಲೈ 26 ರಂದು ಡರ್ಬಾನ್ ನಗರಕ್ಕೆ ಬಂದಾಗ ಜ್ಯೋತಿ ಬಸುರವರಿಗೆ ಒಂದು ಬೃಹತ್ ಸಾಮೂಹಿಕ ಸ್ವಾಗತ ಕಾದಿತ್ತು. ನ್ಯಾಯಮಂತ್ರಿ ದುಲ್ಲಾ ಒಮರ್ ಜ್ಯೋತಿ ಬಸುರವರನ್ನು 'ಶ್ರಮಜೀವಿಗಳ ಹೋರಾಟ ಶೀಲ ಮುಖಂಡ' ಎಂದು ವರ್ಣಿಸಿ ದೀರ್ಘ ಕಾಲ ಮುಖ್ಯಮಂತ್ರಿಯಾಗಿ ಎಡರಂಗ ಸರಕಾರವನ್ನು ನಡೆಸಿ ಕೊಂಡು ಬಂದ ಮಹಾನ್ ಸಾಧನೆಗೆ ಅವರನ್ನು ಅಭಿನಂದಿಸಿದರು. ಬಸು ತಮ್ಮ ಸರಕಾರ ಹಲವು ಮಿತಿಯೊಳಗೆ ಮಾಡಲು ಸಾಧ್ಯವಾದ ಕಾರ್ಯಕ್ರಮಗಳ ಬಗ್ಗೆ ಭೂ ಸುಧಾರಣೆಗಳು ಮರುಹಂಚಿಕೆಯ ಮೂಲಕ ನ್ಯಾಯ ನೀಡಲು ಸಾಧ್ಯವಾಗಿರುವುದರ ಬಗ್ಗೆ ತಿಳಿಸಿದರು.

ಈ ದೇಶದ ಇನ್ನೊಂದು ದೊಡ್ಡ ನಗರ ಕೇಪ್‌ಟೌನಿನಲ್ಲಿ ಇನ್ನೂ ದೊಡ್ಡ ಸ್ವಾಗತ ಕಾದಿತ್ತು. ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಪ್ರಾಂತೀಯ ಮುಖಂಡರು ಹಾಗೂ ಆ ಪ್ರಾಂತದ ಆಡಳಿತದ ಉಚ್ಚ ಪ್ರತಿನಿಧಿಗಳು ಅವರ ಸ್ವಾಗತದ ಮುಂಚೂಣಿಯಲ್ಲಿದ್ದರು. ಈ ಸಮಾರಂಭವನ್ನು ಅಲ್ಲಿಯ ಟಿ.ವಿಯಲ್ಲಿ ನೇರ ಪ್ರಸಾರ ಮಾಡಲಾಯಿತು. ಅವರೊಡನೆ ಒಂದು ಸಂದರ್ಶನವನ್ನೂ ಏರ್ಪಡಿಸಲಾಗಿತ್ತು.

ಈ ಭೇಟಿಯ ಕೊನೆಯ ಹಂತದಲ್ಲಿ ಜ್ಯೋತಿ ಬಸು ವರ್ಣ ದ್ವೇಷಿ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ಕಗ್ಗೊಲೆಯಾದ ಯುವ ಕಮ್ಯುನಿಸ್ಟ್ ಮುಖಂಡ ಕ್ರಿಸ್‌ಹನಿ ಯವರ ಸಮಾಧಿಗೆ ಭೇಟಿ ನೀಡಿದರು. ಪ್ರಿಟೋರಿಯದಲ್ಲಿ ಬಸು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಮುಖಂಡರನ್ನು ಭೇಟಿಯಾದರು.

○

# ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದ ದಸ್ತಾವೇಜುಗಳ ಮೊದಲ ಐದು ಸಂಪುಟಗಳ ಬಿಡುಗಡೆ

ಭಾರತದ ಕಮ್ಯುನಿಸ್ಟ್ ಆಂದೋಲನದ ಕುರಿತಾದ ದಸ್ತಾವೇಜುಗಳನ್ನು ಸಂಗ್ರಹಿಸಿ ಪ್ರಕಟಿಸುವ ಬೃಹತ್ ಕಾರ್ಯವನ್ನು ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಘಟಕ ಕೈಗೆತ್ತಿಕೊಂಡಿದೆ. ಇದರ ಮೊದಲ ಐದು ಸಂಪುಟಗಳನ್ನು ಆಗಸ್ಟ್ 5 ರಂದು ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲಿ ಒಬ್ಬರಾದ ಮುಝಫರ್ ಅಹ್ಮದ್ ರವರ 109ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಬಿಡುಗಡೆ ಮಾಡಿದರು.

ಮುಝಫರ್ ಅಹ್ಮದ್ ಒಬ್ಬ "ಆದರ್ಶ ಕಮ್ಯುನಿಸ್ಟರು" ಎಂದು ವರ್ಣಿಸಿದ ಸುರ್ಜಿತ್, ಆ ಆರಂಭದ ಅಪಾಯಗ್ರಸ್ತ ದಿನಗಳಲ್ಲಿ ಬಂಗಾಳದ ಪರಿಚಿತ ವಾತಾವರಣಕ್ಕೇ ಸೀಮಿತಗೊಳ್ಳದೆ ದುಡ್ಡಿನ ಸಮಸ್ಯೆಯಿದ್ದರೂ ದೇಶಾದ್ಯಂತ ಸಂಚರಿಸಿದರು ಎಂದು ನೆನಪಿಸಿಕೊಂಡ ಅವರು 1920 ರ ದಶಕದ ಆರಂಭದಲ್ಲಿ ಮಾಸ್ಕೋಗೆ ಬರಲು ಅವರಿಗೆ ಆಹ್ವಾನವಿದ್ದರೂ ಹಣದ ಅಭಾವದಿಂದ ಹೋಗಲಾಗಲಿಲ್ಲ ಎಂದು ಬೇಸರದಿಂದ ಹೇಳಿದರು.

ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಬಗ್ಗೆ ಹೇಳುತ್ತಾ ಸುರ್ಜಿತ್ ಕೆಲವು ತಿಂಗಳ ಹಿಂದೆ ಈ ಬಗ್ಗೆ ರಚಿಸಿದ ರಾಷ್ಟ್ರೀಯ ಸಮಿತಿ ಇದನ್ನು ಕೇವಲ ಕಾಂಗ್ರೆಸ್ ಮತ್ತು ಗಾಂಧೀಜಿಯ ಸ್ವಾತಂತ್ರ್ಯ ಹೋರಾಟಗಳ ಆಚರಣೆಯಾಗಿ ಸೀಮಿತಗೊಳಿಸಲು ಪ್ರಯತ್ನಿಸುತ್ತಿದೆ ಎನ್ನುತ್ತಾ ಇದು ಸತ್ಯಕ್ಕೆ ಬಗೆಯುವ ಅಪಚಾರವಾಗುತ್ತದೆ ಎಂದರು.

ಏಕೆಂದರೆ ಸಾವಿರಾರು ತೊರೆಗಳು ಸೇರಿ ಸ್ವಾತಂತ್ರ್ಯ ಹೋರಾಟದ ಸಾಗರವಾಗಿ ಬ್ರಿಟಿಷರನ್ನು ಕೊಚ್ಚಿಕೊಂಡು ಹೋಯಿತು. ರಾಷ್ಟ್ರೀಯ ಸಮಿತಿ ಭಾರತ ಕಾರ್ಮಿಕ ವರ್ಗ ಮತ್ತು ಭಾರತದ ರೈತವರ್ಗದ ಉದಯದ ಪ್ರಸ್ತಾಪವನ್ನೂ ಮಾಡಿಲ್ಲ ಎಂದು ಸುರ್ಜಿತ್ ಖೇದ ವ್ಯಕ್ತಪಡಿಸಿದರು.

ಭಾರತ ಮತ್ತು ಚೀನಾದ ವಿಮೋಚನಾ ಹೋರಾಟಗಳ ವ್ಯತ್ಯಾಸವೆಂದರೆ ಇಲ್ಲಿ ಕಮ್ಯುನಿಸ್ಟರಿಗೆ ಸ್ವಾತಂತ್ರ್ಯ ಆಂದೋಲನದ ನೇತೃತ್ವ ವಹಿಸಲು ಸಾಧ್ಯವಾಗದ್ದರಿಂದ ರಾಜಕೀಯ ಮುಖಂಡತ್ವ ಬಂಡವಾಳಶಾಹಿಗಳ ಕೈಗೆ ಹೋದ ಪರಿಣಾಮಗಳ ಬಗ್ಗೆ ಅವರು ಮಾತನಾಡಿದರು.

**ಸ್ವಾತಂತ್ರ್ಯ ಸಮರದಲ್ಲಿ ಕಮ್ಯುನಿಸ್ಟರ ಪಾತ್ರ**

ಈ ಬಗ್ಗೆ ಮಾತನಾಡುತ್ತಾ ವಿಶೇಷವಾಗಿ ನವೆಂಬರ್ ಕ್ರಾಂತಿಯ ನಂತರ ಕಮ್ಯುನಿಸ್ಟರು ತಮ್ಮ ಪ್ರಧಾನ ಶತ್ರುಗಳು ಎಂದು ಗುರಿಯಿಟ್ಟು ಬ್ರಿಟಿಶರು ಅವರ ಮೇಲೆ ಹಲವಾರು ಪಿತೂರಿ ಮೊಕದ್ದಮೆಗಳನ್ನು ಹೇರಿದರು ಎಂದು ಸುರ್ಜಿತ್ ಹೇಳಿದರು. ಆದರೂ ಕಮ್ಯುನಿಸ್ಟರು ಕೋರ್ಟಿನಲ್ಲಿ ವಿಚಾರಣೆಯ ಸಂದರ್ಭವನ್ನು ಬಳಸಿ ಅದರ ರಾಜಕೀಯ ಪ್ರಯೋಜನ ಪಡೆಯಲು ತಮ್ಮ ಸಂದೇಶವನ್ನು ಇಡೀ ದೇಶದಲ್ಲಿ ಪಸರಿಸಲು ಸಾಧ್ಯ ಎಂದು ಮುಝಫರ್ ಅಹ್ಮದ್ ತೋರಿಸಿಕೊಟ್ಟರು. ಆರಂಭದ ಹಂತದಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್‌ನಲ್ಲಿ ತೀವ್ರಗಾಮಿ ಪ್ರವೃತ್ತಿಯನ್ನು ಬೆಳೆಸಿದ ಬಗ್ಗೆ, ತ್ರಿಪುರೀ ಅಧಿವೇಶನದಲ್ಲಿ ಗಾಂಧೀಜಿಯ ಅಭ್ಯರ್ಥಿಯನ್ನು ಸೋಲಿಸಿ ಸುಭಾಶ್ ಚಂದ್ರಬೋಸ್‌ರು ಗೆದ್ದ ಬಗ್ಗೆ ಸುರ್ಜಿತ್ ನೆನಪಿಸಿದರು. ಕೇರಳದಂತಹ ಕಡೆ ಕಾಂಗ್ರೆಸ್ ಸಮಾಜವಾದಿ ಪಕ್ಷದ ಇಡೀ ರಾಜ್ಯ ಘಟಕವೇ ಕಮ್ಯುನಿಸ್ಟ್ ಪಾರ್ಟಿಗೆ ಬಂದಿತು. ಆ ವೇಳೆಗಾಗಲೇ ಕಾರ್ಮಿಕರನ್ನೂ, ರೈತರನ್ನೂ ಸಂಘಟಿಸದೆ ಪೂರ್ಣ ಸ್ವರಾಜ್ಯ ಸಾಧ್ಯವಿಲ್ಲವೆಂದು ಅರಿತ 'ಭಯೋತ್ಪಾದಕ' ಕ್ರಾಂತಿಕಾರಿಗಳ ಗುಂಪುಗಳೂ ಕಮ್ಯುನಿಸ್ಟ್ ಪಕ್ಷ ಸೇರಿದವು.

**ಕಮ್ಯುನಿಸ್ಟ್ ಪರಿಕಲ್ಪನೆಯ ಸ್ವಾತಂತ್ರ್ಯದ ಸಾಧನೆಯಾಗಿಲ್ಲ**

ಸ್ವಾತಂತ್ರ್ಯಾನಂತರದ ಕಾಂಗ್ರೆಸ್ ಆಳ್ವಿಕೆಯ ತೀವ್ರ ವಿಮರ್ಶೆ ಮಾಡಿದ ಸುರ್ಜಿತ್ ಊಳಿಗಮಾನ್ಯ ವ್ಯವಸ್ಥೆಯನ್ನು ಕಳಚುವ ರಾಜಕೀಯ ಇಚ್ಛಾಶಕ್ತಿಯನ್ನು ಕೂಡಾ ಅದು ಪ್ರದರ್ಶಿಸಿಲ್ಲ ಎಂದು ಖೇದ ವ್ಯಕ್ತಪಡಿಸಿದರು. "ಸ್ವಾತಂತ್ರ್ಯ ಒಂದು ರಾಜಿಯಾಗಿತ್ತಷ್ಟೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಕಮ್ಯುನಿಸ್ಟರ ಪರಿಕಲ್ಪನೆಯ ಸ್ವಾತಂತ್ರ್ಯ ಎಂದೂ ಸಾಧಿಸಿಲ್ಲ" ಎಂದು ಅವರು ಸ್ಪಷ್ಟವಾಗಿ ಹೇಳಿದರು.

ಮುಝಫರ್ ಅಹ್ಮದ್‌ರ ಆದರ್ಶಗಳನ್ನು ಅನುಸರಿಸಿ, ಹಿಂದಿನ ತಪ್ಪುಗಳಿಂದ ಕಲಿತು ಒಂದು ಬಲಿಷ್ಠ ಪಕ್ಷವನ್ನು ಕಟ್ಟಿ ಮೂಲಭೂತ ಸಾಮಾಜಿಕ ಬದಲಾವಣೆಗಳಿಗೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕು ಎಂದು ಅವರು ಈ ಸಂದರ್ಭದಲ್ಲಿ ಕಾರ್ಯಕರ್ತರಿಗೆ ಕರೆ ನೀಡಿದರು.

ಈ ಸಮಾರಂಭದಲ್ಲಿ ಮಾತನಾಡಿದ ಜ್ಯೋತಿಬಸುರವರು ವಸಾಹತುಶಾಹಿ ಶೋಷಣೆಯ ವಾತಾವರಣದಲ್ಲಿ ಅಪರಿಚಿತವಾದ ಸಿದ್ಧಾಂತವೊಂದನ್ನು ಜನಗಳ ನಡುವೆ ಒಯ್ಯುವ ಬಹಳ ಕಷ್ಟದ ಕೆಲಸ ಮಾಡುತ್ತಾ, ಕಷ್ಟ - ನಷ್ಟಗಳನ್ನು ಎದುರಿಸುವಲ್ಲಿ ಮುಝಫರ್ ಅಹ್ಮದ್ ಅಂತವರಿಗೆ ನೆರವಾದ ಆಳವಾದ ಬದ್ಧತೆಯನ್ನು ಅರಿಯಬೇಕು, ಇತಿಹಾಸದಿಂದ ಕಲಿಯಬೇಕು ಎಂದರು. ಕೇವಲ ಮಾರ್ಕ್ಸ್‌ವಾದ-ಲೆನಿನ್ ವಾದದ ನೀತಿಗಳನ್ನು ಜಪಿಸುವುದರಿಂದ ಪ್ರಯೋಜನವಿಲ್ಲ, ಅದನ್ನು ವಸ್ತುನಿಷ್ಠ ಸನ್ನಿವೇಶದಲ್ಲಿ ಮೂಡಿಬರುವ ವಾಸ್ತವತೆಯಲ್ಲಿ ಜಾರಿಗೆ ತರಬೇಕು, ಮುಝಫರ್ ಅಹ್ಮದ್ ರ ಜೀವನ ಇದಕ್ಕೊಂದು ಉದಾಹರಣೆ ಎಂದರು.

ನಾವು ಜನಗಳ ಜತೆಗಿರುವುದರಿಂದ ಕಂಪನಿಗಳ ಒಡೆತನದ ಪತ್ರಿಕೆಗಳ ಪುಟಗಳು ನಮ್ಮ ಬಗ್ಗೆ ವಿಷಕಾರುತ್ತಿದ್ದರೂ ಅದರಿಂದ ನಮ್ಮ ಪಕ್ಷಕ್ಕಂತೂ ತೊಂದರೆಯಾಗಿಲ್ಲ ಎಂದು ಹೇಳಿದ ಜ್ಯೋತಿಬಸು 'ಅದೇ ವೇಳೆಗೆ ಕಳೆದ ಕೆಲವು ವರ್ಷಗಳಲ್ಲಿ ನಮ್ಮಲ್ಲಿ ಶೇಖರವಾಗಿರಬಹುದಾದ ಯಾವುದೇ ದೌರ್ಬಲ್ಯದ ಬಗ್ಗೆ ನಿಷ್ಟುರವಾಗಿ ಪರಿಶೀಲಿಸಿಕೊಳ್ಳಬೇಕು ಎಂದರು. "ನಾವೇ ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಸಿದ್ಧವಿಲ್ಲದಿದ್ದರೆ ಅಥವಾ ಸಾಧ್ಯವಿಲ್ಲದಿದ್ದರೆ ಬದಲಾವಣೆಗಳು ಅಗತ್ಯ ಎಂಬ ನಮ್ಮ ಮಾತನ್ನು ಜನ ಕೇಳಬೇಕೆಂದು ನಿರೀಕ್ಷಿಸುವುದು ಹೇಗೆ?" ಎಂದು ಜ್ಯೋತಿಬಸು ಕೇಳಿದರು.

ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶೈಲೇನ್ ದಾಸ್ ಗುಪ್ತಾರಲ್ಲದೆ ಬಿನೋಯ್ ಚೌಧರಿಯವರೂ ಮಾತನಾಡಿದರು. ಮಾರ್ಕ್ಸ್‌ವಾದ-ಲೆನಿನ್‌ವಾದದ ನೀತಿಗಳ ಕುರಿತಾದ ವರ್ಷದ ಅತ್ಯುತ್ತಮ ಪುಸ್ತಕಕ್ಕೆ ನೀಡುವ ಮುಝಫರ್ ಅಹ್ಮದ್ ಪ್ರಶಸ್ತಿಯನ್ನು ಈ ವರ್ಷ ಭಾರತದಲ್ಲಿ 'ಕಮ್ಯುನಿಸಂ -ಅಪ್ರಕಟಿತ ದಸ್ತಾವೇಜುಗಳು 1919-1945" ಈ ಇಂಗ್ಲೀಷ್ ಕೃತಿಯನ್ನು ರಚಿಸಿದ ಸುಭೋದ್ ರಾಯ್ ಅವರಿಗೆ ನೀಡಲಾಯಿತು. ಅವರು ಅದನ್ನು ಪಕ್ಷದ ನಿಧಿಗೆ ಅರ್ಪಿಸಿದರು.

ಅಂದು 'ಗಣಶಕ್ತಿ' ಭವನದಲ್ಲಿ ಮುಝಫರ್ ಅಹ್ಮದ್ ಸ್ಮಾರಕ ಗ್ರಂಥ ಭಂಡಾರವನ್ನೂ ಜ್ಯೋತಿ ಬಸು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ 'ಗಣಶಕ್ತಿ' ಸಂಪಾದಕ ಅನಿಲ್ ಬಿಸ್ವಾಸ್ ಮುಝಫರ್ ಅಹ್ಮದ್‌ರವರು ಪಕ್ಷದ ಸಾಹಿತ್ಯಕ್ಕೆ ನೀಡಿದ್ದ ಮಹತ್ವದ ಬಗ್ಗೆ ಮಾತನಾಡಿದರು.

ಬೀದರ್ - ಗುಲ್ಬರ್ಗಾ ವಾರ್ತಾಪತ್ರ

ಮಾರುತಿ ಮಾನ್ಪಡೆ

# ಜನರ ಸಮಸ್ಯೆಗಳತ್ತ ಗಮನ ಸೆಳೆಯಲು ಹೋರಾಟ

ಜೋಳ ತಿನ್ನುವವನಿಗೆ ಅಕ್ಕಿ ಕೊಡುವುದಿಲ್ಲ ಎನ್ನುವ ಸರಕಾರದ ತೀರ್ಮಾನ, ಬರಗಾಲದ ಕರಾಳ ಛಾಯೆ, ತೊಗರಿ ಬೆಲೆಯಲ್ಲಿ ತೀವ್ರ ಇಳಿತ-ಇವು ಈಗ ಈ ಜಿಲ್ಲೆಯ ಜನರನ್ನು ತೀವ್ರ ಸಂಕಷ್ಟಕ್ಕೆ ಗುರಿ ಮಾಡಿರುವ ಸಂಗತಿಗಳು. ಜತೆಗೆ ಯಾದಗಿರಿ ಶಹಾಪುರ ತಾಲ್ಲೂಕಿನ ಪ್ರಮುಖ ನೀರಾವರಿ ಯೋಜನೆಯಾದ ಭೀಮಾ ಏತನೀರಾವರಿ ಯೋಜನೆ ರದ್ದುಪಡಿಸಿ ಬ್ಯಾರೇಜ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಇದರಿಂದ ಸಾವಿರಾರು ಎಕರೆ ನೀರಾವರಿಗೆ ಪೆಟ್ಟು ಬೀಳಲಿದೆ.

ಜನಗಳು ಈ ಸಮಸ್ಯೆಗಳನ್ನು ಎದುರಿಸುವುದು ಹೇಗೆ ಎಂದು ಕಾತುರರಾಗಿದ್ದಾರೆ. ಆದರೆ ಜಿಲ್ಲೆಯ ಪ್ರಮುಖ ಆಳುವ ವರ್ಗಗಳ ರಾಜಕೀಯ ಪಕ್ಷಗಳು ಆ ಬಗ್ಗೆ ಏನೂ ಕಾಳಜಿ ತೋರಿಸುತ್ತಿಲ್ಲ.

ಈ ಜಿಲ್ಲೆಯಲ್ಲಿ ಜನತಾದಳವೇ ಮೊದಲ ಪಕ್ಷವೆನ್ನಬಹುದು. ಇದಕ್ಕೆ ಆಂತರಿಕ ಗುಂಪುಗಾರಿಕೆ ರಾಜಕೀಯವೇ ಮುಖ್ಯವಾಗಿದೆ. ಜನಗಳ ಸಮಸ್ಯೆಗಳತ್ತ ಗಮನ, ಆಡಳಿತಯಂತ್ರದತ್ತ ಗಮನ ಹಿಂದೆ ಸರಿದಿದೆ. ಒಂದು ಗುಂಪು ತಮ್ಮ ಬೆಂಬಲಿಗರು, ಬಂಧುಗಳಿಗೆ ಗುತ್ತಿಗೆಗಳು, ಖರೀದಿ ಆರ್ಡರುಗಳನ್ನು ಕೊಡಿಸುವಲ್ಲಿ, ಆಯಕಟ್ಟಿನ ಜಾಗಗಳಲ್ಲಿ ತಮಗೆ ಬೇಕಾದ ಅಧಿಕಾರಿಗಳ ವರ್ಗಾವಣೆ ಇವುಗಳಲ್ಲೇ ಮಗ್ನವಾಗಿದೆ. ಇದರಿಂದ ಜಿಲ್ಲಾ ಪಂಚಾಯತ್ ಆಡಳಿತ ನಿಷ್ಪ್ರಯೋಜಕಗೊಂಡಿದೆ. ಅದು ತಾಲ್ಲೂಕು ಪಂಚಾಯಿತಿಗಳ ಕೆಲಸದ ಮೇಲೂ ಪರಿಣಾಮ ಬೀರಿದೆ. ವೈಜನಾಥ ಪಾಟೀಲರು ಹೈದ್ರಾಬಾದ್ ಕರ್ನಾಟಕದ ಹಿಂದುಳಿಕೆಯ ಹೆಸರಲ್ಲಿ ಚಳುವಳಿ ಸಂಘಟಿಸುವ ಪ್ರಯತ್ನದಲ್ಲಿದ್ದಾರೆ. ಆದರೆ ಜನಸಾಮಾನ್ಯರ ಬೇಡಿಕೆಗಳನ್ನು ಬಿಟ್ಟು ಕೇವಲ ಶೈಕ್ಷಣಿಕ ಮೀಸಲಾತಿ ಬೇಡಿಕೆಗಳಿಗೆ ಮಾತ್ರ ಗಮನ ನೀಡುತ್ತಿದ್ದಾರೆ. ಇದರಿಂದ ಕಲ್ಬುರ್ಗಿ ನಗರದ ವ್ಯಾಪಾರಸ್ಥರ ಬೆಂಬಲ ಮಾತ್ರ ಪಡೆಯಲು ಅವರಿಗೆ ಸಾಧ್ಯವಾಗಿದೆ. ಕಾಂಗ್ರೆಸನಲ್ಲಿ ರಾಜ್ಯ ಮುಖಂಡತ್ವವೇ ಜಿಲ್ಲೆಯ ಮುಖಂಡತ್ವವೂ ಆಗಿದ್ದು ಜನತೆಯನ್ನು ಬಾಧಿಸುವ ಪ್ರಶ್ನೆಗಳಿಗೆ ಸ್ಪಂದಿಸುವಲ್ಲಿ ಆ ಪಕ್ಷದ ಅಸಡ್ಡೆ ಮುಂದುವರಿದಿದೆ. ಎಂದಿನಂತೆ ಗುಂಪುಗಾರಿಕೆ, ಅದಕ್ಕೆ ತೇಪೆ ಹಾಕುವ ಪ್ರಯತ್ನ ಎರಡೂ ಮುಂದುವರಿದಿದೆ. ಇಲ್ಲಿ ಈ ಪಕ್ಷದಲ್ಲಿ ಮೂರು ಗುಂಪುಗಳು ಕಾಣುತ್ತಿವೆ.

ಮತ್ತೊಂದು ಆಳುವ ವರ್ಗಗಳ ಪಕ್ಷ ಬಿಜೆಪಿ ಒಬ್ಬ ಶಾಸಕ, ಇಬ್ಬರು ಕೌನ್ಸಿಲ್ ಸದಸ್ಯರನ್ನು ಹೊಂದಿದೆ. ಗುಂಪುಗಾರಿಕೆ ಈ ಪಕ್ಷವನ್ನೂ ಬಿಟ್ಟಿಲ್ಲ. ಬಸವಣ್ಣನ ಮೂರ್ತಿಗಳನ್ನು ಸ್ಥಾಪಿಸುವುದು, ಕಲ್ಯಾಣ ಮಂಟಪಗಳಿಗೆ ದೇವಸ್ಥಾನಗಳಿಗೆ ಹಣ ನೀಡಿಕೆ ಇವೇ ಈ ಶಾಸಕರ ಪ್ರಮುಖ ಕೆಲಸದಂತಿದೆ. ಇತರ ಬೂರ್ಜ್ವಾ ಪಕ್ಷಗಳಂತೆ ಕಾಂಟ್ರಾಕ್ಟ್‌ದಾರರೊಂದಿಗೆ ಹೊಂದಾಣಿಕೆ ಇತ್ಯಾದಿಗಳು ಇವೆ.

ಜುಲೈ 11 ರಂದು ಮುಂಬೈಯಲ್ಲಿ ಅಂಬೇಡ್ಕರ್ ರವರ ಪ್ರತಿಮೆಗೆ ಅಪಚಾರವೆಸಗಿದ್ದಕ್ಕೆ ವ್ಯಾಪಕ ಪ್ರತಿಭಟನೆ ಹಾಗೂ ಜುಲೈ 2 ರಂದು ಬಂದ್ ನಡೆಯಿತು. ಈ ಸಂದರ್ಭದಲ್ಲಿ ಬಿಗುವಿನ ವಾತಾವರಣ ಸೃಷ್ಟಿಸುವ ಪ್ರಯತ್ನ ನಡೆಯಿತು. ಆದರೆ ಸಫಲವಾಗಲಿಲ್ಲ.

**ಬೀದರ್**

ಇಲ್ಲಿಯ ಜಿಲ್ಲಾ ಆಡಳಿತ ಭೂಮಾಲಕರ ಕಪಿಮುಷ್ಟಿಯಲ್ಲಿದೆ. ಭ್ರಷ್ಟಾಚಾರಕ್ಕೆ ಫಲವತ್ತಾದ ಭೂಮಿ, ಸರಕಾರದಿಂದ ಬೇರೆ ಬೇರೆ ಇಲಾಖೆಗಳಿಗೆ ಬಂದ ವಿವಿಧ ಬಾಬತ್ತುಗಳ ಹಣವನ್ನು ಎತ್ತಿ ಹಾಕುವುದೇ ಇಲ್ಲಿ ಪ್ರಮುಖ ಕೆಲಸ! ಕೈಗಾರಿಕಾ ಇಲಾಖೆಯಲ್ಲಿ ಹೆಚ್ಚುವರಿ ಹಣ ತೆಗೆದದ್ದು ಇತ್ತೀಚಿನ ಉದಾಹರಣೆ. ಇದರಲ್ಲಿ ಅಧಿಕಾರಿಗಳಿಗೆ ರಾಜಕೀಯ ಬೆಂಬಲವೂ ಇದೆ. ಇದರಿಂದಾಗಿ ರಾಜ್ಯದ ಇತರೆಡೆಗಳಿಗೆ ಹೋಲಿಸಿದರೆ ನೀರಾವರಿ, ರಸ್ತೆ, ಸಾರಿಗೆ, ಶಿಕ್ಷಣ, ಆರೋಗ್ಯ ಎಲ್ಲದರಲ್ಲೂ ಅವ್ಯವಸ್ಥೆ. ಇದರಿಂದ ರಾಜ್ಯದಲ್ಲೇ ಹಿಂದುಳಿದಿರುವ ಪ್ರದೇಶ ಇದಾಗಿದೆ.

ಈ ಗಡಿ ಜಿಲ್ಲೆಯ ನಕಲಿ ನೋಟಿನ ಕಾಂಡ ಇಡೀ ರಾಜ್ಯದ ಗಮನ ಸೆಳೆದಿದೆ. ಈ ಕಾಂಡದ ಆರೋಪಿ ಒಬ್ಬ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಿದ್ದು ತನ್ನ ಅಧಿಕಾರಾವಧಿಯನ್ನು ಆಡಳಿತ ಕೆಲಸಕ್ಕಿಂತ ನಕಲಿ ನೋಟು ಚಲಾವಣೆಗೇ ಬಳಸಿದ್ದಾರೆಂದು ಹೇಳಲಾಗುತ್ತಿದೆ. ಒಟ್ಟಿನಲ್ಲಿ ಭ್ರಷ್ಟಾಚಾರ ಈ ಜಿಲ್ಲೆಯ ಜನರ ಪ್ರಮುಖ ಸಮಸ್ಯೆ. ಗುತ್ತಿಗೆದಾರರು, ಅಧಿಕಾರಿಗಳು, ರಾಜಕಾರಣಿಗಳು ಭ್ರಷ್ಟಾಚಾರದಿಂದ ಗಳಿಸಿದ ಹಣದಿಂದ ಜನಸಾಮಾನ್ಯರ ದಮನ ಮಾಡುತ್ತಿದ್ದಾರೆ. ಬಡ ಕೂಲಿಗಾರರಿಗಾಗಿ ರೋಜ್‌ಗಾರ್ ಯೋಜನೆಯ ಹಣವನ್ನು ಲೂಟಿಹೊಡೆದು ಈ ಬಡಜನರ ಹೊಟ್ಟೆಗೇ ಹೊಡೆಯುವ ಕೆಲಸ ನಡೆಯುತ್ತಿದೆ.

ಇಲ್ಲಿಯೂ ಜನತಾದಳವೇ ಪ್ರಮುಖ ಪಕ್ಷ. ಜಿಲ್ಲಾ ಪಂಚಾಯತು, ತಾಲ್ಲೂಕು ಪಂಚಾಯತುಗಳಲ್ಲೂ ಅದರ ಆಡಳಿತ. ಮೂವರಲ್ಲಿ ಇಬ್ಬರು ಶಾಸಕರು ಒಂದು ಗುಂಪು, ಇನ್ನೊಬ್ಬ ಭಿನ್ನಮತೀಯರ ಗುಂಪಿನಲ್ಲಿ. ಅದರಿಂದ ಬಿಜೆಪಿ, ಕಾಂಗ್ರೆಸ್ ಜೊತೆ ಅನ್ಯೋನ್ಯ. ಗುಂಪುಗಾರಿಕೆಯಲ್ಲಿ ಮುಳುಗಿರುವವರಿಗೆ ಜನತೆಯ ಕಷ್ಟಗಳತ್ತ ಗಮನವೆಲ್ಲಿ, ಅಭಿವೃದ್ಧಿಯ ಕೆಲಸಗಳಲ್ಲಿ ಒಮ್ಮತವೆಲ್ಲಿ?

ಕಾಂಗ್ರೆಸ್‌ನಲ್ಲೂ ಗುಂಪುಗಾರಿಕೆ, ಮೇಲ್ಜಾತಿಯವರಲ್ಲಿ ಜಾತೀಯ ಭಾವನೆ ಕೆರಳಿಸುವಷ್ಟರಲ್ಲೇ, ಇವರ ಪೈಪೋಟಿಯೇ ಹೊರತು ಜನಗಳ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟವಿಲ್ಲ. ಬಿಜೆಪಿಯೂ ಒಬ್ಬ ಎಂ.ಪಿ., ಒಬ್ಬ ಶಾಸಕ ಹಾಗೂ ಬೀದರಿನಲ್ಲಿ ಪುರಸಭೆ ಆಡಳಿತ ಹೊಂದಿದ್ದರೂ ಗುಲ್ಬರ್ಗಾದಂತೆಯೇ ಗುಂಪುಗಾರಿಕೆಯಿಂದ ಮುಕ್ತವಾಗಿಲ್ಲ. ಬಿ.ಎಸ್.ಪಿ. ಕೂಡಾ ಒಬ್ಬ ಶಾಸಕನನ್ನು ಹೊಂದಿದೆ. ಆದರೆ ಜಿಲ್ಲೆಯ ದಲಿತರ ಮೇಲೆ ಗಣನೀಯ ಪ್ರಭಾವ ಬೀರಲು ಸಾಧ್ಯವಾಗಿಲ್ಲ. ಮುಂಬೈ ಗೋಲಿಬಾರ್ ಘಟನೆಗೆ ಪ್ರತಿಭಟನೆಯಲ್ಲಿ ಎಲ್ಲಾ ದಲಿತ ಸಂಘಟನೆಗಳೂ ಒಟ್ಟಾಗಿ ಬಂದ್ ನಡೆಸಿವೆ.

ಇಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟವೇ ಅಭಿವೃದ್ಧಿಗಾಗಿ ನಡೆಯುವ ಹೋರಾಟವೂ ಆಗುತ್ತದೆ. ಈ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿರುವ ಸಿಪಿಐ(ಎಂ) ಜಿಲ್ಲಾ ಸಮಿತಿ ಒಂದು ಹೋರಾಟದ ಕಾರ್ಯಕ್ರಮವನ್ನು ರೂಪಿಸಿದೆ. ಇದರ ಮೊದಲ ಹಂತದಲ್ಲಿ ಶಾಸಕರ ಅವ್ಯವಹಾರ ಬಯಲಿಗೆಳೆಯುವ ಕಾರ್ಯಕ್ರಮ ಹಾಕಿಕೊಂಡಿದೆ.

- ನೀರಾವರಿಗೆ ಬಂದ ಹಣವು ಸದುಪಯೋಗವಾಗಿ ಆ ಮೂಲಕ ರೈತರ ಭೂಮಿಗೆ ನೀರು ಸಿಗುವಂತಾಗಬೇಕು.
- ಜಿಲ್ಲಾ ಪಂಚಾಯತ್-ಕೆ.ಹೆಚ್.ಡಿ.ಬಿ. ಹಣದ ದುರ್ಬಳಕೆಯನ್ನು ತಡೆದು ಜನಸಾಮಾನ್ಯರಿಗೆ ಯೋಜನೆಯ ಫಲ ಸಿಗುವಂತಾಗಬೇಕು.
- ಬೀದರಿನ ನಕಲಿ ನೋಟಿನ ಅವ್ಯವಹಾರದಲ್ಲಿ ಶಾಮೀಲಾಗಿರುವ ರಾಜಕೀಯ ಮುಖಂಡನನ್ನು ಬಯಲಿಗೆಳೆಯುವುದು ಈ ಹೋರಾಟದ ಗುರಿ.

ಈ ಗುರಿಸಾಧನೆಗಾಗಿ ಸಿಪಿಐ(ಎಂ) ಜಿಲ್ಲಾ ಸಮಿತಿ ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ಚಳುವಳಿಗಳನ್ನು ಹಮ್ಮಿಕೊಂಡಿದೆ. ಈ ಹಿಂದೆ ಜುಲೈ 15-31ರ ಅವಧಿಯಲ್ಲಿ ರಾಷ್ಟ್ರೀಯ ಪ್ರಚಾರಾಂದೋಲನದಲ್ಲಿ ಈ ಪ್ರದೇಶದಲ್ಲಿ ಸಾಕಷ್ಟು ವ್ಯವಸ್ಥಿತವಾಗಿ ಪ್ರಚಾರ ನಡೆದಿತ್ತು. ಈಗ ಪಕ್ಷದ ಗ್ರಾಮೀಣ ಹಾಗೂ ನಗರ ಶಾಖೆಗಳ ಸ್ಥಳೀಯ ಹಾಗೂ ತಾಲ್ಲೂಕು ಸಮಿತಿಗಳ ಸಮ್ಮೇಳನಗಳ ಸಂದರ್ಭದಲ್ಲಿ ಜಿಲ್ಲಾ ಸಮ್ಮೇಳನದಲ್ಲಿ ಈ ಪ್ರಚಾರ ಚಳುವಳಿಯನ್ನು ಕೈಗೊಳ್ಳಲಾಗುವುದು. ಈ ಹೋರಾಟದಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಪರ್ಯಾಯ ಮಾರ್ಗವನ್ನು ರೂಪಿಸಲಾಗುವುದು.

## ರಾಜ್ಯ ಸರಕಾರಿ ನೌಕರರ ಬೃಹತ್ ರ್‍ಯಾಲಿ

ಕೇಂದ್ರದ 5ನೇ ವೇತನ ಆಯೋಗದ ವರದಿಗೆ ಸೂಕ್ತ ಮಾರ್ಪಾಡುಗಳನ್ನು ಮಾಡಿ ಜಾರಿಗೊಳಿಸುವಂತೆ ಹಾಗೂ ಈ ಸವಲತ್ತುಗಳನ್ನೇ ರಾಜ್ಯ ಸರಕಾರಿ ನೌಕರರಿಗೂ ಅನ್ವಯಿಸುವಂತೆ ಒತ್ತಾಯಿಸಿ, ಆಗಸ್ಟ್ 6ರಂದು ಬೆಂಗಳೂರಿನಲ್ಲಿ ರಾಜ್ಯ ಸರಕಾರಿ ನೌಕರರ ರಾಜ್ಯ ಮಟ್ಟದ ಬೃಹತ್ ರ್‍ಯಾಲಿಯನ್ನು ಏರ್ಪಡಿಸಲಾಯಿತು. ಈ ರ್‍ಯಾಲಿಯಲ್ಲಿ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕುಗಳಿಂದ ಸುಮಾರು 50 ಸಾವಿರ ನೌಕರರು ಭಾಗವಹಿಸಿದ್ದರು.

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಗೌರವ ಅಧ್ಯಕ್ಷರಾದ ಕಾಂ.ಎಂ.ಆರ್.ಅಪ್ಪನ್‌ರವರು ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಕೇಂದ್ರದ 5ನೇ ವೇತನ ಆಯೋಗದ ವರದಿಯ ಸಾಧಕ ಬಾಧಕಗಳನ್ನು ವಿವರಿಸಿ, ನೌಕರರ ಸಂಘಟನೆಗಳೊಂದಿಗೆ ಚರ್ಚಿಸಿ, ಸೂಕ್ತ ಮಾರ್ಪಾಡಿನೊಂದಿಗೆ ವರದಿಯನ್ನು ಜಾರಿಗೊಳಿಸುವಂತೆ ಸರಕಾರವನ್ನು ಒತ್ತಾಯಿಸಿದರು: ಈ ದಿಸೆಯಲ್ಲಿ ನೌಕರರು ಸಂಘಟಿತ ಹೋರಾಟಕ್ಕೆ ಸನ್ನದ್ಧರಾಗಬೇಕೆಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೆ.ಸಿದ್ದೇಗೌಡರು ಅಧ್ಯಕ್ಷತೆ ವಹಿಸಿ ಮಾತನಾಡಿದರು ಹಾಗೂ ಸಂಘದ ವತಿಯಿಂದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳಿಗೆ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು. ನೌಕರರ ಬೇಡಿಕೆಗಳನ್ನು ಮನಃಪೂರ್ವಕವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದಾಗಿ ಮಂತ್ರಿಗಳು ಸಭೆಗೆ ಭರವಸೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಯದೇವಪ್ಪನವರು ಕಾರ್ಯಕ್ರಮವನ್ನು ನಿರೂಪಿಸಿದರು. ಉಪಾಧ್ಯಕ್ಷರಾದ ಪಿ.ಸಿ.ಕುರುಕುರಿಯವರು ವಂದನೆ ಸಲ್ಲಿಸಿದರು.

## ದೇವದಾಸಿ ಮಹಿಳೆಯರಿಂದ ಧರಣಿ

ಬಳ್ಳಾರಿ: ಜನವಾದಿ ಮಹಿಳಾ ಸಂಘಟನೆ ಮತ್ತು ದೇವದಾಸಿ ಮಹಿಳಾ ವಿಮೋಚನಾ ಸಂಘಗಳ ನೇತೃತ್ವದಲ್ಲಿ ಜುಲೈ 30ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ದೇವದಾಸಿ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಧರಣಿ ಮತ್ತು ಪ್ರತಿಭಟನಾ ಸಭೆ ನಡೆಯಿತು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ನೀಲಾ.ಕೆ. ದೇವದಾಸಿ ಮಹಿಳೆಯರು ಅತ್ಯಂತ ಕೆಳಮಟ್ಟದಲ್ಲಿ ಜೀವನ ನಡೆಸುತ್ತಿದ್ದು, ಅವರ ಬಗ್ಗೆ ಆಳುವ ಪ್ರಭುಗಳು ಯಾವುದೇ ಕನಿಷ್ಠ ಕಾಳಜಿ ವಹಿಸುತ್ತಿಲ್ಲವೆಂದರು. ಅವರ ಅಭಿವೃದ್ಧಿಗೆಂದು ಇರುವ ಯೋಜನೆಗಳು ಮಧ್ಯವರ್ತಿಗಳ ಪಾಲಾಗುತ್ತಿದೆ ಎಂದರು. ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾಂ.ಯು.ಬಸವರಾಜ್ ಮಾತನಾಡಿ ದೇವದಾಸಿ ಮಹಿಳೆಯರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುವುದು ಅನಿವಾರ್ಯವಾಗಿದೆ ಎಂದರು.

ಧರಣಿ ಕಾರ್ಯಕ್ರಮಕ್ಕೆ ಬಳ್ಳಾರಿ ತಾಲೂಕಿನ ಕೋಳೂರು, ಕಲ್ಲುಕಂಬ, ಲಕ್ಷ್ಮಿಪುರ, ಹೆಚ್.ವೀರಾಪುರಕ, ಹೊಳಗಲ್ಲು ದದ್ದಟ್ಟಿ, ಬಿಸಲ ಹಳ್ಳಿ, ಕುಡಿತಿನಿ, ಕುರುಗೋಡು, ಸಿದ್ದಮ್ಮನ ಹಳ್ಳಿ, ಬಾದನಟ್ಟಿ ಹಾಗೂ ಕುರೇಕುಪ್ಪ ಮುಂತಾದ ಗ್ರಾಮಗಳಿಂದ 300 ಮಹಿಳೆಯರು ಪಾಲ್ಗೊಂಡಿದ್ದರು.

ಪ್ರತಿಭಟನಾ ಸಭೆಯ ನಂತರ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಈ ಕೆಳಕಂಡ ಬೇಡಿಕೆಗಳ ಮನವಿಯನ್ನು ಅರ್ಪಿಸಿತು.

1. ಎಲ್ಲಾ ದೇವದಾಸಿಯರಿಗೆ ಮನೆಗಳನ್ನು ನಿರ್ಮಿಸಿಕೊಡಬೇಕು.
2. ಪಡಿತರ ವ್ಯವಸ್ಥೆಯಡಿಯಲ್ಲಿ 16 ಅಗತ್ಯ ವಸ್ತುಗಳನ್ನು ಅರ್ಧ ಬೆಲೆಗೆ ಕೊಡಬೇಕು.
3. ವರ್ಷಪೂರ್ಣ ಕೂಲಿ ಕೆಲಸ ನೀಡಬೇಕು.
4. ದೇವದಾಸಿಯರ ಮಕ್ಕಳಿಗೆ, ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿನಿಲಯದ ಅನುವು ಮಾಡಿಕೊಡಬೇಕು.
5. ಪುನರ್ ವಸತಿ ಹಾಗೂ ಭೂಮಿ ನೀಡಬೇಕು ಮುಂತಾದ ಬೇಡಿಕೆಗಳಿದ್ದವು.

## ನೆಹರೂ ಮೈದಾನದ ಹತ್ತಿರ ಬಸ್ ನಿಲ್ದಾಣಕ್ಕೆ ಸಿಪಿಐ(ಎಂ) ಒತ್ತಾಯ

ಮಂಗಳೂರಿನ ಸರ್ವಿಸ್ ಬಸ್ ನಿಲ್ದಾಣವನ್ನು ನೆಹರೂ ಮೈದಾನಿನ ಹತ್ತಿರ ಈಗ ತಾತ್ಕಾಲಿ ವ್ಯವಸ್ಥೆಯಿರುವ ಸ್ಥಳದಲ್ಲೇ ಸುಸಜ್ಜಿತವಾಗಿ ನಿರ್ಮಿಸಬೇಕೆಂದು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿಯು ಒತ್ತಾಯಿಸಿದೆ. ಆಗಸ್ಟ್ 7ರಂದು ಜರುಗಿದ ಪಕ್ಷದ ಜಿಲ್ಲಾ ಸಮಿತಿಯ ಸಭೆಯಲ್ಲಿ ಜನಸಾಮಾನ್ಯರ ಸೌಕರ್ಯವನ್ನು ಗಮನದಲ್ಲಿಟ್ಟು ಜಿಲ್ಲಾ ಕಚೇರಿಗಳು, ಸಿಟಿ ಬಸ್ ನಿಲ್ದಾಣ, ರೈಲು ನಿಲ್ದಾಣ, ಸರಕಾರಿ ಆಸ್ಪತ್ರೆ ಮೊದಲಾದವುಗಳಿಗೆ ದಿನನಿತ್ಯ ಬರುವ ಸಾವಿರಗಟ್ಟಲೆ ಜನಸಾಮಾನ್ಯರ ಹಿತದೃಷ್ಟಿಯಿಂದ ಬಸ್ ನಿಲ್ದಾಣವನ್ನು ಈಗಿರುವಲ್ಲೇ ನಿರ್ಮಿಸಲು ಸರಕಾರವನ್ನು ಜಿಲ್ಲಾ ಸಮಿತಿ ಒತ್ತಾಯಿಸಿದೆ

## ವಿದ್ಯಾರ್ಥಿನಿಯರ ಸಮಾವೇಶ

ಮಂಗಳೂರು: ಎಸ್‌ಎಫ್‌ಐ ವಿದ್ಯಾರ್ಥಿನಿಯರ ಉಪ ಸಮಿತಿಯ ನೇತೃತ್ವದಲ್ಲಿ ದ.ಕ. ಜಿಲ್ಲಾಮಟ್ಟದ ವಿದ್ಯಾರ್ಥಿನಿಯರ ಸಮಾವೇಶವು ಜುಲೈ 17ರಂದು ನಡೆಯಿತು.

ಸಮಾವೇಶವನ್ನು ಉದ್ಘಾಟನೆ ಮಾಡಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ಮಂಜುಳಾ ಸುಕುಮಾರ್ ಪ್ರಸ್ತುತ ಸನ್ನಿವೇಶದಲ್ಲಿ ಮಹಿಳೆಯು ತುಂಬಾ ಶೋಷಣೆಯನ್ನು ಅನುಭವಿಸುತ್ತಿದ್ದಾಳೆ. ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಅವಳ ಬೆಳವಣಿಗೆಗೆ ಅವಕಾಶವಿಲ್ಲವಾಗಿದೆ. ಇದನ್ನು ಹೋಗಲಾಡಿಸಬೇಕಾದರೆ ಮಹಿಳೆಯರು ಶಿಕ್ಷಣ ಪಡೆಯುವುದರಿಂದ ವೈಜ್ಞಾನಿಕ ಚಿಂತನೆ ನಡೆಸಲು ಸಾಧ್ಯ ಎಂದರು. ಹೆಣ್ಣು ತಾನು ವಿದ್ಯಾರ್ಥಿನಿಯಾಗಿರುವ ಸಂದರ್ಭದಲ್ಲಿ ಮಹಿಳಾ ಶೋಷಣೆ ಬಗ್ಗೆ ಅರಿವು ಪಡೆದು ಪ್ರಬಲ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಉಪ ಸಮಿತಿಯ ರಾಜ್ಯ ಮುಖಂಡರಾದ ಯಮುನಾ ಗಾಂವ್ಕರ್ ಮಾತನಾಡಿ ಇಂದಿನ ಸಿನಿಮಾ ಮಾಧ್ಯಮ, ಸ್ತ್ರೀಯರನ್ನು ಮಾರಾಟದ ವಸ್ತುವಾಗಿ ಪರಿವರ್ತಿಸಿ ಪ್ರದರ್ಶಿಸುತ್ತಿರುವುದು ದುರದೃಷ್ಟಕರ ಎಂದರು. ಅತಿಥಿಗಳಾಗಿ ಡಿವೈಎಫ್‌ಐನ ವಸಂತ ಆಚಾರಿ, ರಾಮದಾಸ್.ಕೆ., ಸುನಿಲ್ ಕುಮಾರ್ ಬಜಾಲ್, ಹರಿಪ್ರಸಾದ್ ರೈ ಮುಂತಾದವರು ಉಪಸ್ಥಿತರಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಜೂಡಿ ವಿವಿಯನ್ ಮೆನೇಜಸ್ ವಹಿಸಿದ್ದರು.

ಸಮಾವೇಶ ಕೆಲವು ನಿರ್ಣಯಗಳನ್ನು ಕೈಗೊಂಡಿತು. 1. ಅಶ್ಲೀಲ ಭಿತ್ತಿ ಪತ್ರಗಳ ಹಾವಳಿ ತಡೆಗಟ್ಟಲು ಆಗ್ರಹ, 2. ಮಹಿಳಾ ಕಾಲೇಜುಗಳ ಸಮಸ್ಯೆ ಪರಿಹಾರಕ್ಕೆ ಒತ್ತಾಯ, 3. ಚಲನಚಿತ್ರ ಸೆನ್ಸಾರ್ ಮಂಡಳಿಯು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆಗ್ರಹ. ಇನ್ನೂ ಮುಂತಾದ ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು.

ಉಪ ಸಮಿತಿ ರಚನೆ: ಸಂಚಾಲಕಿಯಾಗಿ ಆಶಾ.ಡಿ., ಸಹಸಂಚಾಲಕಿಯಾಗಿ ರೇಷ್ಮಾ.ಜಿ.ಉಳ್ಳಾಲ್, ಪ್ರಿಯದರ್ಶಿನಿ, ಗಾಯತ್ರಿ ಅಲ್ಲದೆ 16 ಜನರ ಜಿಲ್ಲಾ ಮಟ್ಟದ ಸಮಿತಿಯನ್ನು ಸಮಾವೇಶ ಆಯ್ಕೆ ಮಾಡಿತು.

### ಶುಭಾಶಯಗಳು

ಕಾಮ್ರೇಡ್ ಎಲ್.ಎಸ್.ನಾಯಕ್ ಹಂಚಿನಾಳ ಇವರ ಸಹೋದರ ಸುರೇಶ್ ಅವರ ವಿವಾಹವು ಇತ್ತೀಚೆಗೆ ನೆರವೇರಿತು. ಈ ಸಂದರ್ಭದಲ್ಲಿ ನೂರು ರೂ.ಗಳನ್ನು ಐಕ್ಯರಂಗಕ್ಕೆ ದೇಣಿಗೆ ನೀಡಿರುತ್ತಾರೆ. ಅವರ ವೈವಾಹಿಕ ಬದುಕಿಗೆ ಐಕ್ಯರಂಗದ ಶುಭಾಶಯಗಳು

## ಕರ್ನಾಟಕದಲ್ಲಿ ಕಳೆದ ವಾರ

**ಆಗಸ್ಟ್ 7**

- ಕ್ಷಮಾದಾನ ಕೊಡದಿದ್ದರೆ ಒತ್ತೆಯಾಳುಗಳ ಬಿಡುಗಡೆಗೆ 8 ದಿನಗಳ ಒಳಗೆ 5 ಕೋಟಿ ರೂ. ಕೊಡಬೇಕೆಂದು ವೀರಪ್ಪನ್ ಬೇಡಿಕೆ.

**ಆಗಸ್ಟ್ 8**

- ವೀರಪ್ಪನ್ ಬೇಡಿಕೆಗೆ ರಾಜ್ಯ ಸರಕಾರ ನಕಾರ.
- 1996-97ನೇ ಸಾಲಿನ ಡಾ.ಗುಬ್ಬಿ ವೀರಣ್ಣ ಪ್ರಶಸ್ತಿಗೆ ಗಿರೀಶ್ ಕಾರ್ನಾಡ್, ಕನಕ-ಪುರಂದರ ಪ್ರಶಸ್ತಿಗೆ ಆರ್.ಕೆ.ಶ್ರೀಕಂಠನ್, ಸಂತ ಶಿಶುನಾಳ ಷರೀಫ್ ಪ್ರಶಸ್ತಿಗೆ ಸಿ.ಅಶ್ವತ್ಥ್ ಹಾಗೂ ಜಕಣಾಚಾರಿ ಪ್ರಶಸ್ತಿಗೆ ನೀಲಕಂಠಾಚಾರ್ಯ ಇವರ ಆಯ್ಕೆ.
- ಸಿಂಧನೂರು ತಾಲ್ಲೂಕನ್ನು ಕೊಪ್ಪಳ ಜಿಲ್ಲೆಗೆ ಸೇರಿಸುವುದನ್ನು ಪ್ರತಿಭಟಿಸಿ ಸಿಂಧನೂರು, ರಾಯಚೂರು, ಮಾನ್ವಿ, ಲಿಂಗಸಗೂರು, ದೇವದುರ್ಗಗಳಲ್ಲಿ ಬಂದ್.

**ಆಗಸ್ಟ್ 9**

- ಒತ್ತೆಯಾಳುಗಳನ್ನು ಬಿಡುಗಡೆ ಮಾಡಿ ಕೂಡಲೇ ಶರಣಾಗಲು ವೀರಪ್ಪನ್‌ಗೆ ಕರ್ನಾಟಕ, ತಮಿಳುನಾಡು ಮುಖ್ಯಮಂತ್ರಿಗಳ ಎಚ್ಚರಿಕೆ.
- ಪುತ್ತೂರಿನ ಕಾಲೇಜು ವಿದ್ಯಾರ್ಥಿನಿಯೊಬ್ಬಳ ಕೊಲೆಯನ್ನು ಪ್ರತಿಭಟಿಸಿ ವಿದ್ಯಾರ್ಥಿಗಳ ಬಂದ್‌ಗೆ ಹಿಂಸಾತ್ಮಕ ರೂಪ.

**ಆಗಸ್ಟ್ 10**

- ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕರ್ನಾಟಕದಿಂದ ಸ್ಪರ್ಧಿಸಿದ್ದ ಎಲ್ಲಾ ಆರು ಅಭ್ಯರ್ಥಿಗಳಿಗೂ ದಯನೀಯ ಸೋಲು.

**ಆಗಸ್ಟ್ 11**

- ಉನ್ನತ ಶಿಕ್ಷಣ ಸಚಿವ ಸೋಮಶೇಖರ್ ಕಾನೂನು ಪದವಿ ಪರೀಕ್ಷೆಯಲ್ಲಿ ಕಾಪಿ ಮಾಡಿದ್ದಾರೆ ಎಂಬ ಆಪಾದನೆಯ ಬಗ್ಗೆ ಸರಕಾರ ನ್ಯಾಯಾಂಗ ವಿಚಾರಣೆ ನಡೆಸುವುದು ಎಂದು ಮುಖ್ಯಮಂತ್ರಿಗಳ ಪ್ರಕಟಣೆ.
- ಪುತ್ತೂರಿನಲ್ಲಿ ವಿದ್ಯಾರ್ಥಿನಿಯ ಕೊಲೆಯ ಪ್ರತಿಭಟನೆಯ ಮುಂದುವರಿಕೆ, ಗಾಳಿಯಲ್ಲಿ ಗುಂಡು, ಕರ್ಫ್ಯೂ. ಸುಳ್ಯದಲ್ಲೂ ನಿಷೇಧಾಜ್ಞೆ.
- ಹೊನ್ನಾಳಿ ತಾಲ್ಲೂಕನ್ನು ಶಿವಮೊಗ್ಗಾ ಜಿಲ್ಲೆಯಿಂದ ನೂತನ ದಾವಣಗೆರೆ ಜಿಲ್ಲೆಗೆ ಸೇರಿಸುವ ಸರಕಾರದ ತೀರ್ಮಾನವನ್ನು ವಿರೋಧಿಸಿ ಪ್ರತಿಭಟನೆ-ಗಲಭೆ, ನಿಷೇಧಾಜ್ಞೆ.

**ಆಗಸ್ಟ್ 12**

- ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಉದ್ರಿಕ್ತ ಕೈದಿಗಳ ಒಂದು ಗುಂಪಿನ ದಾಂಧಲೆ.
- ಉನ್ನತ ಶಿಕ್ಷಣ ಸಚಿವ ಸೋಮಶೇಖರ್ ರಾಜೀನಾಮೆ.
- ಹೊನ್ನಾಳಿಯಲ್ಲಿ ಆರಂಭವಾದ ಗಲಭೆ ನ್ಯಾಮತಿ, ಸುರಹೊನ್ನೆಗೂ ಹರಡಿ ಉದ್ರಿಕ್ತ ಪರಿಸ್ಥಿತಿ.



81 ವರ್ಷ ವಯಸ್ಸಿನ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರದ್ದು ಸಾಹಸಮಯ, ಹೋರಾಟಮಯ ಜೀವನ. ಆದರೆ ಅವರು ಹದಿನಾರು ವರ್ಷದ ಬಾಲಕನಾಗಿದ್ದಾಗಲೇ ಕೋರ್ಟ್ ಕಟ್ಟಡದ ಮೇಲೆ ತ್ರಿವರ್ಣ ಬಾವುಟ ಹಾರಿಸಿದ 'ತಪ್ಪಿಗೆ' ನಾಲ್ಕು ವರ್ಷ ಜೈಲು ವಾಸ ಅನುಭವಿಸ ಬೇಕಾಗಿ ಬಂದಿತ್ತು ಎಂದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಸ್ವಾತಂತ್ರ್ಯದ ೫೦ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಐಎನ್ಎಸ್ ಸುದ್ದಿ ಸಂಸ್ಥೆ ಮಾಡಿದ ಈ ವಿಶೇಷ ಸಂದರ್ಶನವೊಂದರಲ್ಲಿ ಸುರ್ಜಿತ್ 65 ವರ್ಷಗಳ ಹಿಂದಿನ ಆ ದಿನವನ್ನು ನೆನಪಿಸಿಕೊಂಡಿದ್ದಾರೆ.

# "ಹಿಂದಿರುಗಿ ನೋಡಿದಾಗ ಹೆಮ್ಮೆಯೆನಿಸುತ್ತಿದೆ"

● ***ಕಾಮ್ರೇಡ್ ಸುರ್ಜಿತ್, ನೀವು ತುಂಬಾ ಚಿಕ್ಕವರಾಗಿದ್ದಾಗಲೇ ರಾಷ್ಟ್ರೀಯ ಆಂದೋಲನವನ್ನು ಸೇರಿದವರು. ನಿಮ್ಮ ಕುಟುಂಬದ ಹಿನ್ನೆಲೆ, ನಿಮ್ಮ ಬಾಲ್ಯದ ನೆನಪುಗಳು ಹಾಗೂ ನಿಮ್ಮನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆದ ಆರಂಭಿಕ ಅನುಭವಗಳ ಬಗ್ಗೆ ಹೇಳುತ್ತೀರಾ?***



ನನ್ನ ತಾತ ಒಬ್ಬ ಸಾಕಷ್ಟು ಸ್ಥಿತಿವಂತನಾಗಿದ್ದ ರೈತ. ಹಲವು ವರ್ಷ ಆಸ್ಟ್ರೇಲಿಯಾದಲ್ಲಿ ಜೀವನೋಪಾಯಕ್ಕಾಗಿ ಕೆಲಸ ಮಾಡಿ ಬಂದವರು. ಅವರ ಏಕೈಕ ಪುತ್ರ, ನನ್ನ ತಂದೆಯವರು ಆಗ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದರು. ಮೊದಲ ಮಹಾಯುದ್ಧ ಮುಗಿದಾಗ ಅವರು ಸ್ವಾತಂತ್ರ್ಯ ಆಂದೋಲನವನ್ನು ಸೇರಿದರು. ಆಗ ಅಕಾಲಿ ಪಾರ್ಟಿ ಬಹಳ ಚಟುವಟಿಕೆ ನಡೆಸುತ್ತಿತ್ತು. ಕಾಂಗ್ರೆಸ್, ಅಕಾಲಿಗಳು ಮತ್ತು ಖಿಲಾಫತ್ ನಡುವೆ ಸಂಯೋಜನೆಯಿತ್ತು. ನನ್ನ ತಾತ, ಸ್ವಂತ ಹಿತಾಸಕ್ತಿಯಿಂದ ನನ್ನ ತಂದೆಯವರು ಅಕಾಲಿ ಪಕ್ಷ ಸೇರುವುದನ್ನು ಒಪ್ಪಿರಲಿಲ್ಲ, ನನ್ನ ತಂದೆಯವರನ್ನು ಮನೆ ಬಿಟ್ಟು ಹೋಗಲು ಹೇಳಿದರು. ಮಿತ್ರರು ಮತ್ತು ಸಂಬಂಧಿಕರು ಹೇಳಿದ ಮೇಲೆ ನನ್ನ ತಂದೆಯವರಿಗೆ ಎರಡು ಎಕರೆ ಜಮೀನು ಕೊಡಲು ತಾತ ಒಪ್ಪಿದರು. ನಮ್ಮ ಆರ್ಥಿಕ ಪರಿಸ್ಥಿತಿ ಕೆಟ್ಟದಾಗಿತ್ತು. ನನ್ನ ತಾಯಿಯ ಸಂಬಂಧಿಕರ ನೆರವಿನಿಂದ ಹೇಗೋ ನಿಭಾಯಿಸುತ್ತಿದ್ದೆವು.

ನನ್ನ ತಂದೆಯವರು ಅಕಾಲಿ ಪಾರ್ಟಿಯ ಜಾಲಂಧರ್ ಜಿಲ್ಲಾ ಸಂಘಟನೆಯ ಮುಖ್ಯಸ್ಥರಾಗುವ ಮಟ್ಟಕ್ಕೆ ಏರಿದ್ದರು. ಆ ದಿನಗಳಲ್ಲಿ 500 ಅಕಾಲಿ ಸ್ವಯಂಸೇವಕರ ತಂಡಗಳು ಬ್ರಿಟಿಷ್ ಅಧಿಕಾರಿಗಳ ತೀವ್ರ ದಮನವನ್ನು ಎದುರಿಸಿ ಬಂಧನಕ್ಕೊಳಗಾಗುತ್ತಿದ್ದರು. ನನ್ನ ತಾಯಿ ನಿರಕ್ಷರಿಯಾಗಿದ್ದು ಸಿಖ್ ಅಲ್ಲದ ಕುಟುಂಬದಿಂದ ಬಂದವರು. ಆದರೂ ಆಕೆ ಅಕಾಲಿ ಪಕ್ಷ ಸೇರಿ ಸ್ವಯಂ ಸೇವಕರಾಗಿ ತಂದೆಯವರಿಗೆ ನೆರವಾದರು. ಈ ಕುಟುಂಬದಲ್ಲಿ ಮಾರ್ಚ್ 23, 1916ರಂದು ನಾನು ಹುಟ್ಟಿದೆ.

ನಾನು ಎಳೆಯ ವರ್ಷದವನಾಗಿದ್ದಾಗ ನನ್ನ ತಾಯಿ ಜಾಥಾಗಳಿಗೆ ಆಹಾರದ ವ್ಯವಸ್ಥೆ ಮಾಡುವಾಗ ಜತೆಗೆ ಕರೆದೊಯ್ಯುತ್ತಿದ್ದರು. ಈ ಜಾಥಾಗಳು ಅಮೃತಸರದಿಂದ ಆರಂಭವಾಗಿ ಜೈತೋದಲ್ಲಿ ನಡೆಯುವ ಮೋರ್ಚಾದಲ್ಲಿ ಭಾಗವಹಿಸಲು ಹಳ್ಳಿಯಿಂದ ಹಳ್ಳಿಯಿಂದ ಹೋಗುತ್ತಿದ್ದವು. ಹಳ್ಳಿಗರು ಈ ಜಾಥಾಗಳಿಗೆ ಆಹಾರ, ನೀರು ಕೊಡಲು ಬ್ರಿಟಿಷರು ಕೆಲವೊಮ್ಮೆ ಬಿಡುತ್ತಿರಲಿಲ್ಲ. ಇಂತಹ ಸಂದರ್ಭಗಳಲ್ಲಿ ಹತ್ತಿರದ ಹಳ್ಳಿಗಳಿಗೆ ಆಹಾರ ತಂದು ಸ್ವಯಂಸೇವಕರಿಗೆ ಕೊಡಲಾಗುತ್ತಿತ್ತು.

1924ರಲ್ಲಿ ಒಂದು ದಿನ ನಾನು ಆಟವಾಡುತ್ತಿದ್ದಾಗ ಪೋಲೀಸರ ಒಂದು ದೊಡ್ಡ ಪಡೆ ಬಂದು ನನ್ನ ತಂದೆಯವರನ್ನು ಬಂಧಿಸಿತು. ಆಗ ಇಡೀ ಹಳ್ಳಿ ಅವರೊಂದಿಗೆ ಪೋಲೀಸ್ ಸ್ಟೇಷನ್ನಿಗೆ ಹೋಯಿತು. ಕ್ರಿಮಿನಲ್ ಪ್ರೊಸೀಜರ್ ಕೋಡಿನ 124(a) ಸೆಕ್ಷನ್ ಪ್ರಕಾರ ಅವರ ಮೇಲೆ ಮೊಕದ್ದಮೆ ನಡೆಸಿ ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಆಗ ನನ್ನ ತಾಯಿ ತೋರಿದ ಧೈರ್ಯ ಹಾಗೂ ಗ್ರಾಮಸ್ಥರು ನೀಡಿದ ಪ್ರೋತ್ಸಾಹ ನನ್ನ ತಂದೆಯವರಿಗೆ ಒಂದು ಹೊಸ ಹುಮ್ಮಸ್ಸು ಮತ್ತು ದೃಢತೆಯನ್ನು ಕೊಟ್ಟಿತು.

● **ನಿಮ್ಮ ತಂದೆಯ ಬಂಧನವಲ್ಲದೆ ಬೇರಾವ ರಾಜಕೀಯ ಘಟನೆಗಳು ಒಬ್ಬ ಬಾಲಕನಾಗಿ ನಿಮ್ಮನ್ನು ತಟ್ಟಿದವು?**




ನನ್ನ ಹಳ್ಳಿಯಿಂದ ಮೂರು ಮೈಲು ದೂರದ ಒಂದು ಹಳ್ಳಿ ರೂರ್ಕಾ ಕಲಾನ್ ಸ್ವಾತಂತ್ರ್ಯ ಘೋಷಿಸಿತ್ತು. ಒಂದು ಪಂಚಾಯತು ಚುನಾಯಿಸಲ್ಪಟ್ಟಿತ್ತು. ಬಚಿತ್ ಸಿಂಗ್ ಅದರ ಮುಖ್ಯಸ್ಥರಾಗಿದ್ದರು. ಅವರು ಹಲವು ದಿನಗಳವರೆಗೆ ಪೋಲೀಸರಾಗಲೀ, ಸಶಸ್ತ್ರ ಪಡೆಗಳಾಗಲೀ ತನ್ನ ಹಳ್ಳಿಯನ್ನು ಪ್ರವೇಶಿಸಲು ಬಿಟ್ಟಿರಲಿಲ್ಲ. ಇದು ಆ ಪ್ರದೇಶದಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ಒಂದು ಹೊಸ ಚಾಲನೆ ನೀಡಿತು. ಬಹಳ ಕಷ್ಟದಿಂದ ಅವರನ್ನು ಬಂಧಿಸಿದಾಗ ಅವರನ್ನು ಜನ ರೂರ್ಕಾದ ರಾಜ ಎಂದು ಕರೆದರು. ಅವರ ಬಂಧನವನ್ನು ಪ್ರತಿಭಟಿಸಿ ಒಂದು ದೊಡ್ಡ ಸಾರ್ವಜನಿಕ ಸಭೆ ನಡೆಯಿತು. ಮಾಸ್ಟರ್ ಮೋಟಾಸಿಂಗ್ ಇದನ್ನುದ್ದೇಶಿಸಿ ಮಾತನಾಡಿದರು. ಇವರನ್ನು ಬ್ರಿಟಿಷರು ತಲೆಮರೆಸಿಕೊಂಡವರು ಎಂದು ಸಾರಿದ್ದರೂ ಭಯದಿಂದಾಗಿ ಬಂಧಿಸಿರಲಿಲ್ಲ. ನಾನು ತಾಯಿಯೊಂದಿಗೆ ಈ ಸಭೆಯಲ್ಲಿ ಭಾಗವಹಿಸಿದ್ದೆ. ಅದು ನನಗೊಂದು ದೊಡ್ಡ ಸ್ಫೂರ್ತಿಯ ಮೂಲವಾಯಿತು.

ಆ ವೇಳೆಗೆ ನಮ್ಮ ಮನೆ ಅಕಾಲಿಗಳು, ಕಾಂಗ್ರೆಸ್ಸಿಗರು ಹಾಗೂ ಖಿಲಾಫತಿಗಳ ಚಟುವಟಿಕೆಗಳ ಕೇಂದ್ರವಾಗಿ ಬಿಟ್ಟಿತ್ತು. ಹಲವು ರಾಜ್ಯ ಮಟ್ಟದ ಉನ್ನತ ಮುಖಂಡರು ನಮ್ಮ ಮನೆಗೆ ಬರುತ್ತಿದ್ದರು. ನನ್ನ ತಂದೆಯವರನ್ನು ಮತ್ತೆ ಬಂಧಿಸಿ ಆರು ತಿಂಗಳು ಜೈಲಿಗೆ ಕಳಿಸಿದರು. ತೀವ್ರಗಾಮಿ ಅಭಿಪ್ರಾಯಗಳನ್ನು ಪ್ರತಿಪಾದಿಸುವ ಹಲವು ಪತ್ರಿಕೆಗಳು ಮತ್ತು ನಿಯತಕಾಲಿಕಗಳವರು ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ತಂದೆ ಕಿರ್ತಿ(ಕಾರ್ಮಿಕ), ಅಕಾಲಿ, ಸಂಕಿತ್ ಮುಂತಾದ ಪತ್ರಿಕೆಗಳನ್ನು ಓದುತ್ತಿದ್ದರು. ನನಗೂ ಅವನ್ನು ಓದುವ ಅವಕಾಶ ದೊರೆಯುತ್ತಿತ್ತು. ನೌಜವಾನ್ ಭಾರತ್ ಸಭಾ ಸ್ಥಾಪನೆಯಾದಾಗ ನಾನು ಅದನ್ನು ಸೇರಿದ್ದೆ. ನನಗಾಗ 15 ವರ್ಷ.

ನಮಗೆ ಸಣ್ಣ ತುಂಡು ಜಮೀನಲ್ಲದೆ ಬೇರಾವ ಜೀವನೋಪಾಯ ಇರಲಿಲ್ಲ. ಅದರಿಂದಾಗಿ ಬಹಳಷ್ಟು ಹಣಕಾಸು ತೊಂದರೆಗಳನ್ನು ಎದುರಿಸಬೇಕಾಗಿತ್ತು. ಬಂಧನದಿಂದ ಹೊರಬಂದಾಗ ಇಂತಹ ಕಷ್ಟಗಳಿಂದಾಗಿ ತಂದೆಯವರು ಜಮೀನನ್ನು ಅಡಮಾನ ಹಾಕಿ ಹೇಗೋ ಕಾನೂನುಬಾಹಿರವಾಗಿ ಪಾಸ್ ಪೋರ್ಟ್ ಪಡೆದು 1929ರಲ್ಲಿ ಅಮೇರಿಕಾಕ್ಕೆ ಹೋದರು. ಐದು ವರ್ಷಗಳವರೆಗೆ ಯಾವುದೇ ಹಣ ಕಳಿಸಲು ಅವರಿಗಾಗಲಿಲ್ಲ. ಅದು ನನ್ನ ತಾಯಿಗೆ ಬಹಳ ಯಾತನೆಯ ದಿನಗಳಾಗಿದ್ದವು. ಆಕೆ ಬಹಳ ಕಷ್ಟಪಡಬೇಕಾಯಿತು. ಅವರ ತಂದೆ-ತಾಯಿಯಿಂದಲೂ ಸ್ವಲ್ಪ ಸಹಾಯ ಸಿಕ್ಕಿತು.

● **ನಿಮ್ಮ ಮೊದಲ ರಾಜಕೀಯ ಚಟುವಟಿಕೆ ಯಾವುದು?**



ಮೇರಠ್ ವಿಚಾರಣೆ ಆರಂಭವಾಗಿತ್ತು. ಪಂಜಾಬಿನಲ್ಲಿ "ಕಾರ್ಮಿಕ-ರೈತ ಪಕ್ಷ (Workers and Peasants Party - ಅದು ಆಗ ನಿಷೇಧಿತವಾಗಿತ್ತು)ದ ಬಾಬಾ ಕರಮ್ ಸಿಂಗ್ ಚೀಮಾ ಹಾಗೂ ಭಾಘ್ ಸಿಂಗ್ ಕನೇಡಿಯನ್ ನನ್ನ ತಂದೆಯ ನಿಕಟ ಮಿತ್ರರಾಗಿದ್ದರು. 1930ರಲ್ಲಿ ಒಂದು ದಿನ ನಾನು ಶಾಲೆಯಿಂದ ಹಿಂದಿರುಗಿದಾಗ ನನಗಾಗಿ ಅವರು ಕಾದಿದ್ದರು. ಈ ಕಾನೂನುಬಾಹಿರ ಪಕ್ಷದ ಸಾರ್ವಜನಿಕ ಸಭೆಯ ವ್ಯವಸ್ಥೆ ಮಾಡಬೇಕು ಎಂದು ನನಗೆ ಹೇಳಿದರು. ನಾನು ಗಂಟೆ ಬಾರಿಸುತ್ತಾ ಜನರನ್ನು ಆಕರ್ಷಿಸಿ ಸಭೆಯ ಬಗ್ಗೆ ಹೇಳುತ್ತಾ ಹೋದೆ. ಒಂದು ಮೇಜು, ಒಂದು ಕುರ್ಚಿ ಎಲ್ಲಿಂದಲೋ ವ್ಯವಸ್ಥೆ ಮಾಡಿದೆ. ಜನಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಈ ಮುಖಂಡರ ಮಾತುಗಳನ್ನು ಕೇಳಿದರು. ಸಭೆ ಯಶಸ್ವಿಯಾಗಿ ನಡೆಯಿತು.

ಮರುದಿನ ನಾನು ಶಾಲೆಗೆ ಹೋದಾಗ, ಪೋಲೀಸರು ಹೆಡ್ ಮಾಸ್ತರರ ಕೋಣೆಯಲ್ಲಿ ಕೂತಿದ್ದರು. ನನ್ನನ್ನು ಬಂಧಿಸಲು ಅವರು ಬಂದಿದ್ದರು. ತಂದೆಯವರೊಂದಿಗೆ ಉತ್ತಮ ಸಂಬಂಧವಿದ್ದ ಹೆಡ್ ಮಾಸ್ತರ್ ಚಿಕ್ಕ ವಯಸ್ಸಿನ ಕಾರಣ ನನ್ನನ್ನು ಬಂಧಿಸಬಾರದು ಎಂದು ಪೋಲೀಸರಿಗೆ ಮನವಿ ಮಾಡುತ್ತಿದ್ದರು. ಒಂದು ರಾಜಿಯ ಮಾತುಕತೆ ನಡೆಸಿದ್ದರು. ನಾನು ಕ್ಷಮೆ ಕೇಳಬೇಕೆಂದು ರಾಜಿ ಸೂತ್ರವಾಗಿತ್ತು., ಅಸಹಾಯಕರಾಗಿದ್ದ ಹೆಡ್ ಮಾಸ್ತರರು ನನ್ನನ್ನು ಕರೆಸಿ "ಕ್ಷಮೆ ಕೇಳು, ನಿನ್ನ ಓದು ಮುಂದುವರೆಸಲು ಇದೊಂದೇ ದಾರಿ" ಎಂದು ಸಲಹೆ ಮಾಡಿದರು. ನನ್ನ ತಂದೆಯವರು ಹಳ್ಳಿ ಬಿಟ್ಟು ಹೋಗುವಾಗ ನಾನು ಉನ್ನತ ಶಿಕ್ಷಣ ಪಡೆಯಬೇಕು, ಅದಕ್ಕೆ ಏನು ಬೇಕಾದರೂ ತಾನು ಮಾಡುವುದಾಗಿ ಈ ಹೆಡ್ ಮಾಸ್ತರರಿಗೆ ಹೇಳಿ ಹೋಗಿದ್ದರಂತೆ. ನಾನು ಈ ಪ್ರಸ್ತಾಪವನ್ನು ಒಪ್ಪಲಿಲ್ಲ. ನಾನೇನು ಪಾಪ ಮಾಡಿಲ್ಲವಲ್ಲ ಎಂದೆ. ಕೊನೆಗೆ ಭಾರವಾದ ಹೃದಯದಿಂದ ಅವರು ನನ್ನನ್ನು ಆ ಶಾಲೆಯಿಂದ ತೆಗೆದು ಹಾಕುವ ನಿರ್ಣಯಕ್ಕೆ ಬರಬೇಕಾಯಿತು. ನನಗೇನೂ ಪಶ್ಚಾತ್ತಾಪವಿರಲಿಲ್ಲ. ತಾಯಿಗೆ ಅದನ್ನು ಹೇಳಿದೆ. ಬೇರೆ ಯಾವುದಾದರೂ ಶಾಲೆಗೆ ಸೇರು ಎಂದರಾಕೆ. ಹತ್ತಿರದ ಯಾವುದೇ ಬೇರೆ ಶಾಲೆ ನನ್ನನ್ನು ಸೇರಿಸಿಕೊಳ್ಳಲು ಸಿದ್ಧವಿರದ್ದರಿಂದ ಒಬ್ಬ ಕಾಂಗ್ರೆಸ್ ಮುಖಂಡ ಹರಿಸಿಂಗ್ ಜಾಲಂಧರ್ ರವರ ಸಹಾಯದಿಂದ ಜಾಲಂಧರ್ ಖಾಲ್ಸಾ ಶಾಲೆಗೆ ಸೇರಿದೆ. ಶಾಲೆಗೆ, ವಸತಿಗೆ ಒಟ್ಟು 10 ರೂ. ತಿಂಗಳ ಖರ್ಚು. ಫೀ ಮತ್ತು ಆಹಾರಕ್ಕೆ ತಲಾ 4 ರೂ, ಹಾಲಿಗೆ 2 ರೂ. ಈ ಹಣ ಹೇಗೆ ಹೊಂದಿಸುವುದು ಎಂದು ತಾಯಿಯೊಂದಿಗೆ ಚರ್ಚಿಸಿದೆ. ಆಗ ನಮ್ಮ ಬಳಿ ಒಂದು ಎಮ್ಮೆಯಿತ್ತು. ಅದರ ಹಾಲಿನಿಂದ ತಾಯಿ ತುಪ್ಪ ತಯಾರಿಸುತ್ತಿದ್ದರು. ಆಕೆ ಒಳ್ಳೆ ಗುಣಮಟ್ಟದ ನೂಲನ್ನೂ ತೆಗೆಯುತ್ತಿದ್ದಳು. ಹೇಗಾದರೂ ತಿಂಗಳಿಗೆ 10 ರೂ. ಕಳಿಸುತ್ತೇನೆ ಬಿಡು ಎಂದರು. ಈ ಶ್ರಮದ ಹಣದಿಂದ ಮತ್ತೆ ನಾನು ಶಾಲೆಗೆ ಹೋಗಲಾರಂಭಿಸಿದೆ.

● **ನಿಮ್ಮ ತಂದೆಯವರಲ್ಲದೆ, ಯುವಕರಾಗಿದ್ದಾಗ ನಿಮ್ಮ ಮೇಲೆ ಬೇರೆ ಯಾರು ಪ್ರಭಾವ ಬೀರಿದರು?**

ಭಗತ್ ಸಿಂಗ್ ರನ್ನು 1931ರಲ್ಲಿ ನೇಣಿಗೇ



ರಿಸಲಾಯಿತು. ಅವರು ಹುತಾತ್ಮರಾದದ್ದು ಯುವಜನರಲ್ಲಿ ಹೊಸ ಹುಮ್ಮಸ್ಸು ಮೂಡಿಸಿತು. ಅವರು ಯಾವ ತ್ಯಾಗ-ಬಲಿದಾನಕ್ಕೂ ಸಿದ್ಧರಾಗಿದ್ದರು. ಈ ಮೊದಲೇ ಭಗತ್ ಸಿಂಗ್ ನನಗೆ ಸ್ಫೂರ್ತಿಯಾಗಿದ್ದರು. ಅವರು ಸ್ಥಾಪಿಸಿದ್ದ "ನೌಜವಾನ್ ಭಾರತ್ ಸಭಾ"ದ ಸದಸ್ಯನಾಗಿದ್ದೆ. ಜಾಲಂಧರ್ ಆಗ ರಾಜಕೀಯ ಚಟುವಟಿಕೆಗಳಿಂದ ತುಂಬಿ ತುಳುಕಾಡುತ್ತಿತ್ತು. 1930ರ ದಶಕದಲ್ಲಿ ಆರ್ಥಿಕ ಬಿಕ್ಕಟ್ಟು ಆಳವಾಗಿತ್ತು. ಎಲ್ಲೆಲ್ಲೂ ರೈತರಲ್ಲಿ ಅಸಂತೃಪ್ತಿ ಎದ್ದು ಕಾಣುತ್ತಿತ್ತು. ರಾಷ್ಟ್ರೀಯ ಆಂದೋಲನದ ಹಲವು ದೊಡ್ಡ ಮುಖಂಡರು ಜಾಲಂಧರ್ ಗೆ ಬರುತ್ತಿದ್ದರು, ಸಭೆಗಳಲ್ಲಿ ಮಾತನಾಡುತ್ತಿದ್ದರು. ಶಾಲೆಯ ಅಧಿಕಾರಿಗಳ ಸೂಚನೆಗಳನ್ನು ಲೆಕ್ಕಿಸದೆ ನಾನು ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದೆ. ಬಬ್ಬರ್ ಅಕಾಲಿಗಳ ಮುಖಂಡ ಮಾಸ್ಟರ್ ಮೋಟಾಸಿಂಗ್ ಹಾಗೂ ಇನ್ನೊಬ್ಬ ಮುಖಂಡ ಡಾ.ಸೈಫುದ್ದೀನ್ ಕಿಚ್ಲೂರವರ ಪ್ರಜ್ವಲ ಭಾಷಣಗಳ ಬಗ್ಗೆ ನನಗೆ ವಿಶೇಷ ಆಕರ್ಷಣೆಯಿತ್ತು. ನಾನು ರಾಷ್ಟ್ರೀಯ ಆಂದೋಲನದಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳುತ್ತಿದ್ದೆ. ಇವರಲ್ಲಿ ಹೆಚ್ಚಿನವರು ನನ್ನ ತಂದೆಯವರ ಗೆಳೆಯರಾದುದರಿಂದ ನನ್ನ ಬಗ್ಗೆ ವಿಶೇಷ ಮಮತೆ ತೋರುತ್ತಿದ್ದರು.

● **ನೀವು ಮೊದಲು ಜೈಲಿಗೆ ಹೋದದ್ದು ಯಾವಾಗ? ಏಕೆ?**



ನಾನು ಮೊದಲು ಜೈಲಿಗೆ ಹೋದದ್ದು 1932ರಲ್ಲಿ. ಬ್ರಿಟಿಶ್ ಬಾವುಟ ಇಳಿಸಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದಕ್ಕಾಗಿ. ಆಗ ಮ್ಯಾಟ್ರಿಕ್ಯುಲೇಶನ್ ನ ಲಿಖಿತ ಪರೀಕ್ಷೆಗಳನ್ನು ಮುಗಿಸಿದ್ದೆನಷ್ಟೆ. ವಿಜ್ಞಾನದ ಪ್ರಯೋಗ ಪರೀಕ್ಷೆಗಳು ಉಳಿದಿದ್ದವು. ಈ ನಡುವೆ ಭಗತ್ ಸಿಂಗ್ ರವರು ಹುತಾತ್ಮರಾದ ದಿನದ ಮೊದಲ ವಾರ್ಷಿಕವನ್ನು ಆಚರಿಸುವ ಯೋಜನೆಗಳು ರೂಪುಗೊಂಡವು. ಆ ದಿನ ಗವರ್ನರ್ 25 ಮೈಲಿ ದೂರದ ಹೋಶಿಯಾರ್ ಪುರ್‌ಗೆ ಭೇಟಿ ಕೊಡುವವನಿದ್ದ. ಆ ಸಂದರ್ಭದಲ್ಲಿ ಜಿಲ್ಲಾ ಕೋರ್ಟಿನ ಕಟ್ಟಡವಲ್ಲಿ ಯೂನಿಯನ್ ಜಾಕ್ ಇಳಿಸಿ ತ್ರಿವರ್ಣ ಬಾವುಟ ಏರಿಸುವುದಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಕಟಿಸಿತು. ಇಂತಹ ಯಾವುದೇ ಪ್ರಯತ್ನವನ್ನು ವಿಫಲಗೊಳಿಸಲು ಜಿಲ್ಲಾ ಕಲೆಕ್ಟರ್ ನಿರ್ಧರಿಸಿದ್ದ. ಇಂತಹ ಪ್ರಯತ್ನ ಮಾಡುವ ಯಾರನ್ನೇ ಆದರೂ ಗುಂಡಿಟ್ಟು ಕೊಲ್ಲುವುದಾಗಿ ಸಾರಿದ. ನಾನು ಹೋಶಿಯಾರ್ ಪುರ್‌ಗೆ ಹೋದೆ. ಕಾಂಗ್ರೆಸ್ ಸಮಿತಿ ಕಚೇರಿಗೆ ಹೋದಾಗ ಕಲೆಕ್ಟರ್ ಕಟ್ಟಡ ಸೇನೆಯ ಜಮಾವಣೆ ಮಾಡಿದ್ದರಿಂದ ಕಾಂಗ್ರೆಸ್ ಸಮಿತಿ ಈ ಕಾರ್ಯಕ್ರಮವನ್ನು ಕೈ ಬಿಟ್ಟಿದೆ ಎಂದು ತಿಳಿದು ಬೇಸರವಾಯಿತು. ನಾನು ಕಚೇರಿ ಕಾರ್ಯದರ್ಶಿ ಹನುಮಾನ್ ರವರಿಂದ ಇಂತಹ ನಿರ್ಣಯವನ್ನು ಏಕೆ ಕೈಗೊಳ್ಳಲಾಯಿತು ಎಂದು ವಿಚಾರಿಸಿದೆ. ರೇಗಿ ಹೋದ ಆತ ಕೇಳಿದ -ಕಲೆಕ್ಟರ್ ಪ್ರಕಟಣೆ ನಿನಗೆ ಗೊತ್ತಿಲ್ಲವೇ? ನಾನು ತಕ್ಷಣ ಪ್ರತಿ ಪ್ರಶ್ನೆ ಹಾಕಿದೆ - "ಗುಂಡು ಹಾರಿಸುತ್ತಾರೆ ಎಂಬ ಬೆದರಿಕೆ ಮಾತ್ರಕ್ಕೇ ನೀವು ಕೈ ಚೆಲ್ಲಿ ಬಿಟ್ಟಿರೋ. ಇದು ದೇಶಕ್ಕೇ ಅವಮಾನ" ಎಂದೆ. ಆತ ನನಗೆ ಸವಾಲು ಹಾಕುವಂತೆ ಕೇಳಿದ - "ನಿನಗೆ ಅಷ್ಟು ಧೈರ್ಯವಿದ್ದರೆ ನೀನೇ ಮಾಡಬಹುದಲ್ಲಾ?"

ಬಾವುಟ ಹಾರಿಸಲು ನಿಗದಿ ಪಡಿಸಿದ್ದ ಸಮಯ ಆಗಲೇ ಮೀರಿ ಹೋಗಿತ್ತು. ಆದರೂ ಒಂದು ಸಣ್ಣ ಕೋಲಿಗೆ ಒಂದು ಬಾವುಟ ಸಿಗಿಸಿ ಹೊರಟೆ-ಆಗ ಸಾಮ್ರಾಜ್ಯಶಾಹಿ ಆಳ್ವಿಕೆಯ ಪ್ರತೀಕವಾಗಿದ್ದ ಕೋರ್ಟ್ ಕಟ್ಟಡದತ್ತ. ನಿಗದಿತ ಸಮಯ ಮೀರಿ ಹೋಗಿದ್ದರಿಂದ ಸೇನಾ ಸಿಬ್ಬಂದಿ ಸಡಿಲವಾಗಿದ್ದರು. ನಾನು ಸರಸರನೆ ಮೆಟ್ಟಲು ಹತ್ತಿ

ಪುಟ 5 ನೋಡಿ

# "ಹಣವಿದೆಯೇ ನಿಮ್ಮಲ್ಲಿ? ಸ್ವಾತಂತ್ರ್ಯ ಕೊಂಡುಕೊಳ್ಳಿ, ನಮ್ಮ ಲಾಭ ಮಾತ್ರ ನಮಗೆ ಸಾಕು"

ಭಾರತಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗುತ್ತಿವೆ. ಆದರೆ ಎಲ್ಲವೂ ಮಾರುಕಟ್ಟೆಮಯವಾಗಿರುವಾಗ ನಿಮಗೆ ಸ್ವಾತಂತ್ರ್ಯವೂ ಮಾರುಕಟ್ಟೆಯಲ್ಲಿ ಸಿಗುವುದು. ಭಾರತದ ಸ್ವಾತಂತ್ರ್ಯದ ಸುವರ್ಣ ಜಯಂತಿಯ ಹೆಸರಿನಲ್ಲಿ ತಮ್ಮ ತಮ್ಮ ಉತ್ಪನ್ನಗಳನ್ನು ಮಾರಿ ಲಾಭ ಗಳಿಸಿ ಕೊಳ್ಳುತ್ತಿದ್ದಾರೆ ಬಂಡವಾಳಿಗರು. 'ಸ್ವಾತಂತ್ರ್ಯ ಸುವರ್ಣ ಜಯಂತಿ' ಎಂಬ ವಿಚಾರವೂ ಹೀಗೆ ಬಂಡವಾಳಿಗರಿಗೆ ಒಂದು ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳುವ ಆ ಮೂಲಕ ತಮ್ಮ ಲಾಭ ಹೆಚ್ಚಿಸಿಕೊಳ್ಳುವ ಹಾದಿ.

ಕೆಲವು ಉದಾಹರಣೆಗಳನ್ನು ನೋಡಿ. ಸ್ವಿಟ್ಜರ್‌ಲ್ಯಾಂಡಿನ ಕೋರಮ್ ಎಂಬ ವಾಚು ಉತ್ಪಾದಿಸುವ ಕಂಪನಿ 18 ಕ್ಯಾರೆಟ್ ಚಿನ್ನದ ವಾಚನ್ನು ತಯಾರಿಸಿ ತಾಜ್‌ಮಹಲಿನ ಚಿತ್ರ ಕೊರೆದು 'ಸುವರ್ಣ ಜಯಂತಿ' ಎಂದು ಬರೆದು ಮಾರುಕಟ್ಟೆಗೆ ಬಿಟ್ಟಿದೆ. ಒಂದು ವಾಚಿನ ಬೆಲೆ ಏನು ಎಂದು ಕೇಳಿ. ಬರೀ 3.90 ಲಕ್ಷ ರೂಪಾಯಿಗಳು.

ಮಹಿಂದ್ರಾ ಅಂಡ್ ಮಹಿಂದ್ರಾ ಮತ್ತು ಫೋರ್ಡ್ ಎಂಬ ವಿದೇಶೀ ಕಂಪನಿ ಒಟ್ಟಿಗೆ ಸೇರಿ 'ಫೋರ್ಡ್ ಎಸ್ಕೋರ್ಟ್ ಸ್ವಾತಂತ್ರ್ಯ' ಎಂಬ ಕಾರನ್ನೇ ತಯಾರಿಸಿ ಮಾರುಕಟ್ಟೆಗೆ ಬಿಟ್ಟಿವೆ. ಈ ಕಾರಿನ ವಿಶೇಷತೆ ನಮ್ಮ ರಾಷ್ಟ್ರ ಧ್ವಜದಲ್ಲಿನ ಬಣ್ಣಗಳು, ಸ್ವಾತಂತ್ರ್ಯದ ಚಿಹ್ನೆ(?) ಮತ್ತು ಸ್ವಾತಂತ್ರ್ಯದ ಗುರುತಿನ ಸಂಖ್ಯೆ(?).

ಟಿವಿ ಚಾನೆಲ್ಲುಗಳು ತಮ್ಮ ಕಾರ್ಯಕ್ರಮಗಳನ್ನು ತ್ರಿವರ್ಣಮಯಗೊಳಿಸಿವೆ. ಸುವರ್ಣ ಜಯಂತಿಯ ಬಗ್ಗೆ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಪ್ರಚಾರಗಳಿಂದಾಗಿ ರಾಶಿ ರಾಶಿ ಹಣವನ್ನು ಬಾಚಿಕೊಳ್ಳುತ್ತಿವೆ.

ಹೀಗೆ ವಿವಿಧ ಕಂಪನಿಗಳು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ಆ ಮೂಲಕ ಲಾಭ ಬಾಚಿಕೊಳ್ಳುವುದಕ್ಕಾಗಿ ಈ ಸಂದರ್ಭವನ್ನು ಬಳಸಿಕೊಳ್ಳುತ್ತಿದ್ದಾರೆ. ದೇಶದ ಜನಸಾಮಾನ್ಯರ ಪರಿಸ್ಥಿತಿ, ಅದನ್ನು ಉತ್ತಮಪಡಿಸುವ ಬಗ್ಗೆಯಾಗಲಿ ಇವರಿಗೆ ಯಾವುದೇ ಕಾಳಜಿಯಿಲ್ಲ. 'ಎಲ್ಲಿ ಲಾಭವಿದೆಯೋ ಅಲ್ಲಿ ಮಾತ್ರ ಅವರ ಕಾಳಜಿ", ಬಂಡವಾಳದ ಬಂಡವಾಳಿಗರ ಲಕ್ಷಣವಲ್ಲವೆ ಅದು?

ನಮಗೆ ಎಂತಹ ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಯಿತೆಂದು ಕೇಳೋಣವೇ?

ಟೈಂಸ್ ಆಫ್ ಇಂಡಿಯಾದಲ್ಲಿ ಪೊನ್ನಪ್ಪನವರ ವ್ಯಂಗ್ಯ




## ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

## 'ಗೆದ್ದರೆ ಉದಾರೀಕರಣ ಸೋತರೆ ಸಮಾಜೀಕರಣ'

ಇದು ಯಾರ ನೀತಿ ಎಂಬುದು ಗೊತ್ತಾಯಿತಲ್ಲವೆ? ಅಧಿಕಾರದಲ್ಲಿದ್ದಾಗ ಉದಾರೀಕರಣವನ್ನು ದೊಡ್ಡದಾಗಿ ಜಾರಿಗೆ ತಂದ ಕಾಂಗ್ರೆಸ್‌ನ ನೀತಿಯಿದು. ಉದಾರೀಕರಣದ ರೂವಾರಿ ಎಂದು ಹೆಸರು ಪಡೆದು ಸಾಮ್ರಾಜ್ಯಶಾಹಿಗಳ ಶಹಬಾಸ್‌ಗಿರಿ ಪಡೆದ ಅರ್ಥಶಾಸ್ತ್ರಜ್ಞ ಡಾ.ಮನಮೋಹನ ಸಿಂಗ್‌ರೇ ಇಂದು ಉದಾರೀಕರಣವನ್ನು ತಡೆಯಿಲ್ಲದೆ ತರಬಾರದು ಎನ್ನುತ್ತಾರೆ.

ಕಲ್ಕತ್ತದಲ್ಲಿ ನಡೆದ ಅಧಿವೇಶನದಲ್ಲಿ ಇಂತಹ ಮಾತುಗಳುಳ್ಳ ಗೊತ್ತುವಳಿಯನ್ನು ಈ ಮಾಜಿ ಅರ್ಥ ಮಂತ್ರಿಮಹೋದಯರು ರೂಪಿಸಿ ಪಾಸು ಮಾಡಿಸಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿನ ಬಡತನ ಹೋಗಲಾಡಿಸಲು ಹೆಚ್ಚಿನ ಸಂಪನ್ಮೂಲಗಳ ಅವಶ್ಯಕತೆಯಿದೆ, ಗ್ರಾಮೀಣ ಬಡತನ ಕಡಿಮೆ ಮಾಡಲು ನೆರವಾಗುವುದಾದಲ್ಲಿ ಮಾತ್ರ ಹಾನಿ ಮಾಡುವ ಸರಕಾರಿ ಉದ್ದಿಮೆಗಳ ಮಾರಾಟ ಮಾಡಬೇಕು ಇತ್ಯಾದಿ ವಿಚಾರಗಳನ್ನೆಲ್ಲಾ ಈ ಗೊತ್ತುವಳಿಯಲ್ಲಿ ಅಭಿವ್ಯಕ್ತಿಸಲಾಗಿದೆ.

ಕಾಂಗ್ರೆಸ್ಸಿನ ದಿವಾಳಿಖೋರತನದ ನಿದರ್ಶನವಲ್ಲವೆ ಇದು?

# ಶೇ. 26ರಷ್ಟು ಬೆಳೆ ಮಣ್ಣುಪಾಲು

ಇದು ಬೆಳೆ ಮಣ್ಣಿಗೆ ಬಿದ್ದು ಮಣ್ಣಿನ ಪಾಲಾಗುವ ಕತೆಯಲ್ಲ. ಇದು ಮಣ್ಣಿನ ಸವಕಳಿಯಿಂದಾಗಿ ಬೆಳೆ ಹಾಳಾಗಿ ಹೋಗುವ ಕತೆ. ಇಂದು ಮಣ್ಣಿಗೆ ಸಂರಕ್ಷಣೆ ಇಲ್ಲದ್ದರಿಂದ ಮಣ್ಣು ಸವಕಳಿಯಾಗಿ ಫಲವತ್ತತೆ ಕಡಿಮೆಯಾಗುವುದರಿಂದ ಆಗುವ ಹಾನಿ ಇದು.

ರೈತ ಬೆವರು ಸುರಿಸಿ ದುಡಿದರೆ ಮಾತ್ರ ಉತ್ತಮ ಬೆಳೆ ಬಾರದು. ಜೊತೆಗೆ ಉತ್ತಮ ಬೀಜ, ಉತ್ತಮ ಗೊಬ್ಬರ ಬೇಕು. ಇವೆಲ್ಲಕ್ಕೂ ಮಿಗಿಲಾಗಿ ಉತ್ತಮ ಮಣ್ಣು ಇರಬೇಕು. ಆದ್ದರಿಂದಲೇ ಮಣ್ಣಿನ ಸಂರಕ್ಷಣೆ ಬಹುಮುಖ್ಯವಾಗುವುದು. ಕೃಷಿಯೇ ಪ್ರಧಾನವಾದ ಭಾರತದಂತಹ ದೇಶದಲ್ಲಿ ಎರಡನೇ ದೊಡ್ಡ ಜನಸಂಖ್ಯೆಯಿರುವ ದೇಶದಲ್ಲಿ ನೂರು ಕೋಟಿಯಷ್ಟು ಜನರಿಗೆ ಆಹಾರ/ಬಟ್ಟೆ ಒದಗಿಸಬೇಕಾಗಿರುವಾಗ ಉತ್ತಮ ಬೆಳೆ ಬೆಳೆಯುವುದು ಅತ್ಯವಶ್ಯಕ.

ಇದನ್ನು ಸಾಧಿಸಲು ಬೇಕಾದ ಮಣ್ಣೇ ಇಲ್ಲದೆ ಹೋದರೆ? ಟಾಟಾ ಶಕ್ತಿ ಸಂಶೋಧನಾ ಸಂಸ್ಥೆಯ ಅಧ್ಯಯನ ವೊಂದರ ಪ್ರಕಾರ ದೇಶದ ಒಟ್ಟು ಪ್ರದೇಶದ ಶೇ. 36ರಷ್ಟು ಅಂದರೆ 1180 ಲಕ್ಷ ಹೆಕ್ಟೇರುಗಳಷ್ಟು ಭೂಮಿಯ ಮಣ್ಣು ಸವಕಳಿ ಯಾಗಿ ಹೋಗಿದೆ. ಇಷ್ಟೇ ಅಲ್ಲ ಸರಿಯಾದ ನಿರ್ವಹಣೆ ಇಲ್ಲದೆ ಇನ್ನೂ 700 ಲಕ್ಷ ಹೆಕ್ಟೇರುಗಳಷ್ಟು ಭೂಮಿ ಹದಗೆಟ್ಟು ಹೋಗಿದೆ.

ಈ ಭೂ ಸವಕಳಿಯಿಂದಾಗಿರುವ ಒಟ್ಟು ಹಾನಿಯೆಷ್ಟು ಗೊತ್ತೆ? 23200 ಕೋಟಿ ರೂಪಾಯಿಗಳು!

ಸವಕಳಿಯಾದ ಮಣ್ಣಿನ ಒಟ್ಟು ಶೇ. 29ರಷ್ಟು ಸಮುದ್ರಗಳಿಗೆ ಸೇರಿ ಹೋದರೆ ಶೇ. 10 ರಷ್ಟು ಕೆರೆ ಕಟ್ಟೆಗಳಲ್ಲಿ ಹೂಳಾಗಿ ಸೇರಿ ಹಲವು ಸಮಸ್ಯೆಗಳನ್ನು ಉಂಟು ಮಾಡುತ್ತದೆ.

ಇದಕ್ಕೆ ಪರಿಹಾರವೇನು? ಖಂಡಿತವಾಗಿ ಒಬ್ಬೊಬ್ಬ ರೈತ ತಾನಾಗಿ ಈ ಸವಕಳಿ ತಡೆಯುವಂತೆ ಮಾಡುವುದು ಸಾಧ್ಯವಿಲ್ಲ. ತನ್ನ ಜಮೀನಿನಲ್ಲಿ ಅಲ್ಪಸ್ವಲ್ಪ ಮಾಡ ಬಹುದು. ಅಲ್ಲದೆ ಸಾಗುವಳಿಯಾಗುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿನಲ್ಲಿ ಅಷ್ಟು ಹೆಚ್ಚಿನ ಸವಕಳಿಯಾಗುವುದಿಲ್ಲ. ಶ್ರೀಮಂತರ ರೈತ ಮತ್ತು ಜಮೀನುದಾರರ ಜಮೀನಿನಲ್ಲೇ ಇದು ಹೆಚ್ಚಾಗಿ ಆಗುವುದು.

ಒಟ್ಟಾರೆಯಾಗಿ ಕಾರ್ಷಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಎಳೆ ಎಳೆಯಾಗಿ ಬಿಡಿಸುತ್ತಾ ಹೋದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗಬಹುದು. ಅಂದರೆ ಭೂ ಸುಧಾರಣೆ ಆಗಬೇಕು. ಕೃಷಿಗೆ ಬೇಕಾಗುವ ಅಂತರ್ರಚನಾ ಸೌಲಭ್ಯಗಳು ಸೃಷ್ಟಿಯಾಗಬೇಕು. ನೀರಾವರಿ ಸೌಲಭ್ಯಗಳ ಸೃಷ್ಟಿಯಾಗಬೇಕು, ಇತ್ಯಾದಿ.

ಉದಾರೀಕರಣದ ಹೆಸರಿನಲ್ಲಿ ಸರಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಕಡಿಮೆ ವೆಚ್ಚ ಮಾಡುತ್ತಿರುವಾಗ ಈ ಸಮಸ್ಯೆಗೆ ಪರಿಹಾರ ದೊರೆಯುವಂತೆ ಕಾಣುವುದಿಲ್ಲ.

ಉದಾರೀಕರಣದ ಜೊಳ್ಳುತನವೂ ಇಲ್ಲೇ ಗೊತ್ತಾಗುತ್ತದೆ. ಕೃಷಿ ಉತ್ಪಾದನೆ ಹೆಚ್ಚಿಸುವುದು ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಅನಿವಾರ್ಯ. ಉತ್ಪಾದನೆ ಹೆಚ್ಚಿಸಲು ಉತ್ತಮ ಮಣ್ಣು ಬೇಕು. ಆ ಮಣ್ಣಿನ ಆರೋಗ್ಯ ಸಂರಕ್ಷಿಸಲು ಉದಾರೀಕರಣ ದಿಂದ ಸಾಧ್ಯವಿಲ್ಲ. ಬದಲಿಗೆ ಅವರ ಆರೋಗ್ಯವನ್ನು ಹಾಳುಗೆಡವುತ್ತದೆ.

ಮಣ್ಣು ಸವಕಳಿಯಾಗಿ ಸಮುದ್ರ ಸೇರುತ್ತದೆ. ಕೆರೆ ಕಟ್ಟೆ ಸೇರುತ್ತದೆ. ದೇಶದ ಭವಿಷ್ಯವೂ ಈ ಕಳೆದುಹೋಗುವ ಮಣ್ಣಿನ ಪಾಲಾಗುತ್ತದೆ.

# ಬೆಳವಣಿಗೆ ದರ ದೂರ

ಇದು ಅವರೇ ಹೇಳಿದ ದರ. ಅವರೇ ನಿರೀಕ್ಷಿಸಿದ ದರ. ಈಗ ಅವರೇ ಹೇಳುತ್ತಾರೆ ಈ ದರ ದೂರ ಎಂದು.

1996-97ನೇ ಸಾಲಿನಲ್ಲಿ ಒಟ್ಟುತ್ಪಾದನೆಯು ಶೇ. 6.8ರಷ್ಟು ಬೆಳವಣಿಗೆ ಆಗುತ್ತದೆ ಎಂದು ಭಾರತೀಯ ರಿಸರ್ವ್ ಬ್ಯಾಂಕು ಹೇಳಿತ್ತು. ಕೇಂದ್ರ ಸರಕಾರದ ಹಣಕಾಸು ಮಂತ್ರಾಲಯವೂ ಇದನ್ನೇ ಹೇಳಿಕೊಂಡು ಬಂದಿತ್ತು. ಈಗ ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಸಿ.ರಂಗರಾಜನ್ ಪ್ರಕಾರ ಬೆಳವಣಿಗೆ ದರ ಇಷ್ಟಿರುವುದಿಲ್ಲ, ಕಡಿಮೆ ಇರುತ್ತದೆ.

ಇದಕ್ಕೆ ಮುಖ್ಯ ಕಾರಣ ಔದ್ಯಮಿಕ ಉತ್ಪಾದನೆಯು ಕಡಿಮೆಯಾದದ್ದು. ಗಣಿಗಾರಿಕೆ, ವಿದ್ಯುತ್, ರಫ್ತು ವಲಯಗಳಲ್ಲೆಲ್ಲ ಹಿಂಜರಿತ ಇದ್ದುದರ ಪರಿಣಾಮವಾಗಿ ಔದ್ಯಮಿಕ ಬೆಳವಣಿಗೆ ನಿರೀಕ್ಷಿಸಿದ ಪ್ರಮಾಣದಲ್ಲಿ ಆಗಲಿಲ್ಲ. ಆದ್ದರಿಂದಲೇ ಒಟ್ಟುತ್ಪಾದನೆಯ ದರವೂ ನಿರೀಕ್ಷಿಸಿದಷ್ಟಾಗುವುದಿಲ್ಲ, ಇದು ಅವರ ವಿವರಣೆ.

ಉದಾರೀಕರಣವಾದಿಗಳು ಅದರಿಂದ ಆಗುತ್ತದೆ ಎಂದು ಹೇಳಿಕೊಂಡ ಯಾವುದೇ ಒಳ್ಳೆಯ ಪರಿಣಾಮ ಆರ್ಥಿಕದ ಮೇಲೆ ಆಗಿಲ್ಲ. ಬದಲಿಗೆ ಉದಾರೀಕರಣದ ವೈಫಲ್ಯಗಳ ಬಗೆಗೆ ವಿವರಣೆಗಳೇ ಹೆಚ್ಚೆಚ್ಚಾಗಿ ಬರುತ್ತಿವೆ.

ಉದಾರೀಕರಣ ಒಳ್ಳೆಯ ದಿನಗಳನ್ನು ತರುತ್ತದೆ ಎಂಬುದು ಪೂರ್ತಿ ಸುಳ್ಳು ಎನ್ನುವುದು ಇದರಿಂದಲೇ ಸ್ಪಷ್ಟವಾಗುತ್ತದೆ ಅಲ್ಲವೇ?


# "ಹಿಂದಿರುಗಿ ನೋಡಿದಾಗ ......................"

ಪುಟ 4 ರಿಂದ

ಯೂನಿಯನ್ ಜಾಕ್ ಇಳಿಸಿ ತ್ರಿವರ್ಣ ಬಾವುಟವನ್ನು ಹಾರಿಸಿದೆ. ಎರಡು ಗುಂಡುಗಳನ್ನು ಹಾರಿಸಿದರು. ಯಾವುದೂ ನನಗೆ ತಾಕಲಿಲ್ಲ. ಡೆಪ್ಯುಟಿ ಕಮೀಷನರ್ ಭಾಕ್ಲೆ ಹೊರಗೆ ಬಂದ. ಆಗ ಭಾರತೀಯ ಡೆಪ್ಯುಟಿ ಕಮೀಷನರ್‌ಗಳಿದ್ದದ್ದು ಬೆರಳೆಣಿಕೆಯಷ್ಟು. ಮಹಾರಾಷ್ಟ್ರದ ಈ ವ್ಯಕ್ತಿ ಒಬ್ಬ ಚಿಕ್ಕ ಬಾಲಕನನ್ನು ನೋಡಿ ಗುಂಡು ಹಾರಿಸುವುದನ್ನು ನಿಲ್ಲಿಸಲು ಆಜ್ಞೆ ಮಾಡಿದ. ನಾನು ಬ್ರಿಟಿಷರನ್ನು ಬೈಯ್ಯಲಾರಂಭಿಸಿದೆ. ನನ್ನ ಬಳಿ ಯಾವುದೇ ಅಸ್ತ್ರವಿಲ್ಲವೆಂದು ತಿಳಿದಾಗ ಕೆಲವು ಸೈನಿಕರು ಮೆಟ್ಟಲು ಹತ್ತಿ ಬಂದು ನನ್ನನ್ನು ಹಿಡಿದುಕೊಂಡರು. ನನ್ನನ್ನು ಸಬ್ ಜೈಲಿಗೆ ಕಳಿಸಿ ಒಂದು ಕಿಟ್ಟ ಸೆಲ್‌ನಲ್ಲಿ ಹಾಕಿದರು. ಮರು ದಿನವೇ ವಿಚಾರಣೆ ನಡೆಯಿತು. ಮ್ಯಾಜಿಸ್ಟ್ರೇಟರು ನನ್ನ ಹೆಸರು ಕೇಳಿದಾಗ "ಲಂಡನ್ ತೋಡೇ ಸಿಂಗ್"(ಲಂಡನ್ ಮುರುಕ ಸಿಂಗ್) ಎಂದೆ. ನನ್ನ ನಿಜ ಹೆಸರು ಹೇಳಿಸಲು ಅವನಿಗಾಗಲಿಲ್ಲ. ನಾನು ಮಾಡಿದ್ದನ್ನು ಒಪ್ಪಿಕೊಂಡು ಭಗತ್ ಸಿಂಗ್‌ರನ್ನು ಹಾಡಿ ಹೊಗಳಿದೆ. ನನಗೆ ಒಂದು ವರ್ಷದ ಕಠಿಣ ಶಿಕ್ಷೆ ಕೊಡಲಾಯಿತು. ನಾನು ಕೋರ್ಟನ್ನು ಕೇಳಿದೆ - "ಕೇವಲ ಒಂದು ವರ್ಷನಾ?". ಮ್ಯಾಜಿಸ್ಟ್ರೇಟ್ ಅದನ್ನು ನಾಲ್ಕು ವರ್ಷಗಳಿಗೇರಿಸಿದ. ನಾನು ಮತ್ತೆ ಕೇಳಿದೆ - "ಕೇವಲ ನಾಲ್ಕೇ ವರ್ಷನಾ?". ಈ ನಿರ್ದಿಷ್ಟ ಸೆಕ್ಷನ್ ಪ್ರಕಾರ ಇದಕ್ಕಿಂತ ದೀರ್ಘ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ ಎಂದ ಮ್ಯಾಜಿಸ್ಟ್ರೇಟ್.

ಆ ವೇಳೆಗೆ ಇಡೀ ಪಟ್ಟಣಕ್ಕೆ ಈ ಘಟನೆಯ ಸುದ್ದಿ ಹರಡಿತು. ತಂದೆಯವರಿಗೆ ನಿಕಟವಾಗಿದ್ದ ಹಲವು ಮುಖಂಡರು ನನ್ನನ್ನು ನೋಡಲು ಜೈಲಿಗೆ ಬಂದರು. ನನ್ನನ್ನು ಹೊಗಳಿ, ಅಪಾರ ಧೈರ್ಯ ತೋರಿಸಿದ್ದಿಯಾ ಎಂದರು. ಕೆಲವೇ ದಿನಗಳಲ್ಲಿ ಪತ್ರಿಕೆಗಳ ಮೂಲಕ ಅಧಿಕಾರಿಗಳಿಗೆ ನನ್ನ ನಿಜ ಗುರುತು ತಿಳಿಯಿತು. ನಾನು ಅಪ್ರಾಪ್ತ ವಯಸ್ಕನಾಗಿದ್ದರಿಂದ ದಿಲ್ಲಿ ಸುಧಾರಣಾ ಜೈಲಿಗೆ ಕಳಿಸಿದರು. ಆದರೆ 10-15 ದಿನಗಳಲ್ಲೇ ನಾನು ಗಲಭೆಕೋರ ಎಂದು ಹೇಳಿ ಲಾಹೋರಿನ ಬೋರ್ಸ್ಟಲ್ ಜೈಲಿಗೆ ಕಳಿಸಿದರು. ಯುವಜನರು, ಭಗತ್ ಸಿಂಗ್‌ರ ಬಹಳಷ್ಟು ಸಂಗಾತಿಗಳನ್ನು ಈ ಜೈಲಿನಲ್ಲಿಡಲಾಗಿತ್ತು. ಈ ಜೈಲಿನಲ್ಲಿ ನನಗೆ ಎಲ್ಲಾ ನೀತಿ-ನಿಯಮಗಳನ್ನು ಮುರಿದು ತೀವ್ರ ಶಿಕ್ಷೆ ಕೊಡಲಾಯಿತು. ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯುವಾಗ ಕಾಲಿಗೆ ಕಬ್ಬಿಣದ ಸಲಾಕೆಗಳನ್ನು ಕಟ್ಟುತ್ತಿದ್ದರು.

**● ನಿಮ್ಮ ಕುಟುಂಬದ ಪ್ರತಿಕ್ರಿಯೆ ಹೇಗಿತ್ತು?**



ಸವಿನಯ ಕಾನೂನು ಭಂಗ ಚಳುವಳಿ ನಡೆದಿತ್ತು. ಹಲವು ರಾಜಕೀಯ ಬಂಧಿಗಳು ಜೈಲಿನಲ್ಲಿದ್ದರು. ನಾನು ಅವರಲ್ಲಿ ಹಲವರನ್ನು ಸಂಪರ್ಕಿಸಿದೆ. ನನ್ನ ತಂದೆಯವರು ನನಗೆ ಬರೆದ ಪತ್ರವನ್ನು ಒಬ್ಬ ಜೈಲ್ ವಾರ್ಡನ್ ಮೂಲಕ ಗುಪ್ತವಾಗಿ ತಲುಪಿಸಲಾಯಿತು. ಆ ಪತ್ರದಲ್ಲಿ ಅವರು ನಾನು ಉನ್ನತ ಶಿಕ್ಷಣ ಪಡೆದು ದೇಶಕ್ಕೆ ನನ್ನ ಕರ್ತವ್ಯವನ್ನು ಸಲ್ಲಿಸಬೇಕೆಂದು ತಾನು ಬಯಸಿದ್ದರೂ ಈಗ ನಾನು ಆರಿಸಿದ ದಾರಿಯಿಂದ ಹಿಂದೆ ಸರಿಯುವುದು ಬೇಡ ಎಂದಿದ್ದರು. ಈ ಪತ್ರ ನನಗೆ ಅಪಾರ ಪ್ರೋತ್ಸಾಹ ಕೊಟ್ಟಿತು. ನನ್ನನ್ನು ಜೈಲಿನಲ್ಲಿ ಭೇಟಿ ಮಾಡಲು ಬರುತ್ತಿದ್ದ ತಾಯಿ ಸ್ವಲ್ಪವೂ ಸಿಟ್ಟು ಅಥವಾ ದುಃಖವನ್ನು ತೋರಿಸದೆ ಧೈರ್ಯವಾಗಿರು, ಜೈಲಿನಲ್ಲಿ ಕೊಡುತ್ತಿರುವ ತೀವ್ರ ಶಿಕ್ಷೆಯಿಂದ ಹತಾಶನಾಗಬೇಡ ಎಂದು ಧೈರ್ಯ ತುಂಬುತ್ತಿದ್ದರು. ಜೈಲಿನಲ್ಲಿನ ವಾತಾವರಣ ಹೇಗಿತ್ತೆಂದರೆ ಬೇಗನೇ ನಾನು ಎಲ್ಲರ ಪ್ರೀತಿಗೆ ಪಾತ್ರನಾದೆ. ಈ ಮುಖಂಡರಲ್ಲಿ ಹಲವರಿಗೆ ನನ್ನ ತಂದೆಯವರು ಪರಿಚಿತರಾಗಿದ್ದುದು ಒಂದು ಕಾರಣ.

ನನ್ನ ತಂದೆಯವರ ಪತ್ರವನ್ನು ಓದಿದ ಮೇಲೆ ನಾನು ಸ್ವಾತಂತ್ರ್ಯ ಸಾಧನೆಗೆ ನನ್ನನ್ನು ಅರ್ಪಿಸಿಕೊಳ್ಳಲು ನಿರ್ಧರಿಸಿದೆ. ನಾನು ಹೋಶಿಯಾರ್‌ಪುರ್ ಕೋರ್ಟಿನ ತುದಿಯಲ್ಲಿ ತ್ರಿವರ್ಣ ಬಾವುಟ ಹಾರಿಸಿದ ದಿನ ನನ್ನ ಜೀವನದಲ್ಲಿ ಒಂದು ಪರಿವರ್ತನೆ ಬಂದಿತ್ತು. ನನ್ನ ಮುಂದಿನ ದಾರಿ ಆಗ ರೂಪುಗೊಳ್ಳುತ್ತಿತ್ತು. ಆಗ ತ್ರಿವರ್ಣ ಭಾವುಟವೆಂದರೆ ಮಧ್ಯದಲ್ಲಿ ಚಕ್ರವಿದ್ದ ಕಾಂಗ್ರೆಸ್ ಬಾವುಟ. ನಂತರ ಚರಕಾದ ಬದಲು ಅಶೋಕ ಚಕ್ರ ಹಾಕಿ ಇದನ್ನು ರಾಷ್ಟ್ರೀಯ ಧ್ವಜವಾಗಿ ಅಂಗೀಕರಿಸಲಾಯಿತು. ನಾನು ಎದುರಿಸುತ್ತಿದ್ದ ಅಪಾರ ಹಣಕಾಸು ಕಷ್ಟ-ನಷ್ಟಗಳ ಪ್ರಭಾವ ನಾನು ಕಾರ್ಮಿಕ ವರ್ಗದ ತತ್ವಗಳು ಹಾಗೂ ಕ್ರಾಂತಿಯೊಂದಿಗೆ ನನ್ನನ್ನು ಗುರುತಿಸಿಕೊಳ್ಳಲು ಸಹಾಯ ಮಾಡಿತು. ನಾನು ಇಂದು ಹಿಂದಿರುಗಿ ನೋಡಿದಾಗ, ಆ ದಿನ ನಾನು ಮಾಡಿದ ಕೆಲಸದ ಬಗ್ಗೆ ಹೆಮ್ಮೆ ಪಡುತ್ತೇನೆ.

**ದೇಶದೊಳಗೆ**




# ಜಮ್ಮು-ಕಾಶ್ಮೀರದಲ್ಲಿ ಕಾರ್ಮಿಕರ ಕೊಲೆ; ಅತ್ಯಾಚಾರ

ಹಲವು ಕಾರ್ಮಿಕರ ಕೊಲೆ, ಮಹಿಳಾ ಕಾರ್ಮಿಕರ ಮೇಲೆ ಅತ್ಯಾಚಾರ; ಹೊಡೆತ ಮುಂತಾದ ಅಮಾನವೀಯ ಕೃತ್ಯಗಳ ಪ್ರಕರಣವೊಂದು ಜಮ್ಮು ಮತ್ತು ಕಾಶ್ಮೀರದಿಂದ ವರದಿಯಾಗಿದೆ.

ಬಿರ್ಲಾ ಮಾಲಿಕತ್ವದ ಕಥುವಾ ಟೆಕ್ಸ್‌ಟೈಲ್ಸ್ ಮಿಲ್ ನಲ್ಲಿ ಮಾಲಿಕರು ಗೂಂಡಾಗಳು ಮತ್ತು ರಾಜ್ಯದ ಪೋಲೀಸರು ದುಡಿಯುವ ಜನರ ಮೇಲೆ ಘೋರ ದಬ್ಬಾಳಿಕೆ ನಡೆಸಿದ್ದಾರೆ.

ಸಿಪಿಐ(ಎಂ)ನ ಸಂಸತ್ ಸದಸ್ಯರುಳ್ಳ ನಿಯೋಗವೊಂದು ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾರನ್ನು ಭೇಟಿ ಮಾಡಿ ದೌರ್ಜನ್ಯದ ವಿರುದ್ಧ ಮನವಿ ಪತ್ರವೊಂದನ್ನು ಸಲ್ಲಿಸಿತು. ಜುಲೈ 30ರಂದು ನಡೆದ ದೌರ್ಜನ್ಯದ ಬಗ್ಗೆ ಮನವಿಯಲ್ಲಿ ವಿವರಿಸಲಾಗಿದೆ. ಬಸುದೇವ ಆಚಾರ್ಯ, ಜೀವನ್ ರಾಯ್ ಮತ್ತು ವಿಪ್ಲವ್ ದಾಸ್ ಗುಪ್ತಾ ನಿಯೋಗದಲ್ಲಿದ್ದರು.

ಪ್ರಕರಣದ ಬಗ್ಗೆ ತನಿಖೆ ನಡೆಸುವ ಆಶ್ವಾಸನೆ ನೀಡಿದ ಮುಖ್ಯಮಂತ್ರಿ, ಅಗತ್ಯ ಬಿದ್ದರೆ ತಾವೇ ಖುದ್ದಾಗಿ ಖುದ್ದು ಭೇಟಿ ನೀಡುವುದಾಗಿ ಹೇಳಿದರು.

ಪ್ರತ್ಯಕ್ಷದರ್ಶಿಗಳು ಹೇಳುವ ಪ್ರಕಾರ ಘಟನೆ ನಡೆದದ್ದು ಹೀಗೆ. ಮಿಲ್ ಮಾಲಿಕರು ಸ್ಥಳೀಯ ಕುಖ್ಯಾತ ಗೂಂಡಾಗಳ ನೇತೃತ್ವದಲ್ಲಿ ಪೋಲೀಸ್ ಪಡೆ ಕಾರ್ಮಿಕರು ಮತ್ತು ಅವರ ಕುಟುಂಬಗಳನ್ನು ಸುತ್ತುವರಿಯಿತು ಹಾಗೂ ಪೋಲೀಸರು ಅಮಾನುಷವಾಗಿ ಥಳಿಸಿದರು. ಆಗಲೇ ಇಬ್ಬರು ಕಾರ್ಮಿಕರನ್ನು ಹೊಡೆದು ಕೊಂದು ಹಾಕಲಾಗಿತ್ತು. 200ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಇಷ್ಟರಿಂದಲೇ ತೃಪ್ತಿಗೊಳ್ಳದ ದುರುಳರು ಕುಟುಂಬ ಸದಸ್ಯರ ಮುಂದೆಯೇ 13 ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಅತ್ಯಾಚಾರದಲ್ಲಿ ಗೂಂಡಾಗಳೂ ಪೋಲೀಸರೂ ಪಾಲ್ಗೊಂಡಿದ್ದರು.

ದುಡಿಯುವ ಜನರ ಮೇಲೆ ಅಪ್ರಚೋದಿತರಾಗಿ ಈ ಆಕ್ರಮಣ ನಡೆಸಲಾಗಿದೆ ಎಂದು ನಿಯೋಗ ಹೇಳಿದೆ. ಈ ಮಿಲ್ಲಿನ ಕಾರ್ಮಿಕರು ಬಹುತೇಕ ಹಂಗಾಮಿ ಕಾರ್ಮಿಕರು. ಅವರು ವಸ್ತುಶಃ ಗುಲಾಮಿ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಮೊದಲು ಸ್ವತಂತ್ರ ಕಾರ್ಮಿಕ ಸಂಘಟನೆಯಿತ್ತು. ಅದೀಗ ಸಿಐಟಿಯುಗೆ ಸೇರಿದೆ.

ತೀರಾ ಅಸಹನೀಯ ಕೆಲಸದ ಪರಿಸ್ಥಿತಿಯ ವಿರುದ್ಧ ಕಾರ್ಮಿಕರು ಮತ್ತು ಸಂಘ ಹೋರಾಟ ಸಂಘಟಿಸುವುದನ್ನು ತಪ್ಪಿಸಲೋಸುಗ ಎನ್ನುವಂತೆ ಬಿರ್ಲಾ ಗುಂಪಿನ ಆಡಳಿತ ವರ್ಗ ಪೋಲೀಸರ ನೆರವಿನಿಂದ ಇಂಥ ಹೇಯ ಕೃತ್ಯಕ್ಕೆ ಇಳಿದಿರುವಂತೆ ಕಾಣುತ್ತದೆ. ಸ್ಥಳೀಯ ಪೋಲಸರು ಹೇಗೆ ಮಿಲ್ ಮಾಲಿಕರ ತೊತ್ತುಗಳಾಗಿದ್ದಾರೆ ಎನ್ನುವುದನ್ನು ಇದೇ ಪ್ರಕರಣ ತೋರಿಸಿಕೊಡುತ್ತದೆ ಎಂದು ಮನವಿ ಹೇಳಿದೆ.

ಕೈಗಾರಿಕಾ ಸಂಬಂಧಗಳ ಸಮಸ್ಯೆ ಪರಿಣಾಮವಾಗಿರುವುದರಿಂದ ಈ ವಿಚಾರದಲ್ಲಿ ಸ್ವತಃ ಮಧ್ಯಪ್ರವೇಶ ಮಾಡುವಂತೆ ಸಿಪಿಐ(ಎಂ) ಸಂಸತ್ಸ ಸದಸ್ಯರು ಫಾರೂಕ್ ಅಬ್ದುಲ್ಲಾರನ್ನು ಒತ್ತಾಯಿಸಿದರು.

ಬಿರ್ಲಾಗಳು ಕಾರ್ಮಿಕ ಕಾನೂನುಗಳನ್ನು ಮುರಿಯದಂತೆ ಖಾತರಿಪಡಿಸಲು ರಾಜ್ಯ ಕಾರ್ಮಿಕ ಇಲಾಖೆಯನ್ನು ಜಾಗ್ರತಗೊಳಿಸಬೇಕು ಎಂದು ಆಗ್ರಹಪಡಿಸಿದರು.

ಪೋಲೀಸರು ದೌರ್ಜನ್ಯ ನಡೆಸಿರುವುದೇ ಅಲ್ಲದೇ ಸುಮಾರು 300 ಕಾರ್ಮಿಕರನ್ನು ಬಂಧಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಿಐಟಿಯು ಕಾರ್ಯದರ್ಶಿ ಓಂ ಪ್ರಕಾಶ್ ಸೇರಿದಂತೆ ಹಲವು ನಾಯಕರೂ ಬಂಧಿತರಾಗಿದ್ದಾರೆ.

## ಸರಕಾರವನ್ನು ಸರಿದಾರಿಗೆ ತರಲು ಹೋರಾಟವೇ ಅಸ್ತ್ರ

ಸಂಯುಕ್ತ ರಂಗ ಸರಕಾರ ಸರಿಯಾದ ಹಾದಿಯಲ್ಲಿ ನಡೆಯುವಂತೆ ದೇಶದ ಜನತೆ ಸತತ ಹೋರಾಟ ನಡೆಸಬೇಕಾಗಿದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ ಯೆಚೂರಿಯವರು ಕರೆ ಕೊಟ್ಟಿದ್ದಾರೆ.

ಪಕ್ಷದ ರಾಷ್ಟ್ರೀಯ ಆಂದೋಲನದ ಅಂಗವಾಗಿ ಜುಲೈ 31ರಂದು ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಅವರು ಮಾತನಾಡುತ್ತಿದ್ದರು. ಕಳೆದ ವರ್ಷಗಳಲ್ಲಿ ನಡೆದ ಭಾರೀ ರ್‍ಯಾಲಿಗಳಲ್ಲಿ ಇದು ಒಂದಾಗಿತ್ತು.

ಉಪ ಮುಖ್ಯಮಂತ್ರಿ ಹಾಗೂ ಕೇಂದ್ರ ಸಮಿತಿ ಸದಸ್ಯ ವೈದ್ಯನಾಥ ಮಜುಂದಾರ್ ಅಧ್ಯಕ್ಷತೆ ವಹಿಸಿದ್ದ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ದಶರಥ್ ದೇವ್ ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಅವರೂ ಮಾತನಾಡಿದರು.

ಈ ಬೃಹತ್ ರ್‍ಯಾಲಿ ಬುಡಕಟ್ಟು-ಬುಡಕಟ್ಟೇತರ, ಹಿಂದೂ-ಮುಸ್ಲಿಂ ಜನರ ಅಪೂರ್ವ ಸಂಗಮವಾಗಿತ್ತು. ಜೀವನದ ಎಲ್ಲಾ ರಂಗಗಳ ಜನರು ಪಾಲ್ಗೊಂಡಿದ್ದರು.

ದೇಶ ಈ ವರ್ಷ ಸ್ವಾತಂತ್ರ್ಯದ ಸ್ವರ್ಣ ಜಯಂತಿಯನ್ನು ಆಚರಿಸುತ್ತಿದೆ. ಆದರೆ, ಸ್ವಾತಂತ್ರ್ಯದ ಮೂಲಕ ಭವ್ಯ ಭವಿಷ್ಯವನ್ನು ಕಾಣುವ ಆಶೋತ್ತರಗಳನ್ನಿಟ್ಟುಕೊಂಡಿದ್ದ ಜನತೆಯ ನಿರೀಕ್ಷೆ ಹುಸಿಯಾಗಿದೆ ಎಂದು ಯೆಚೂರಿ ಹೇಳಿದರು. ಬಹುತೇಕ ಅವಧಿ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷವೇ ದೇಶದ ದುಸ್ಥಿತಿಗೆ ಕಾರಣ ಎಂದು ಅವರು ಹೇಳಿದರು.

ಒಗ್ಗಟ್ಟಾಗಿ ಇಲ್ಲದಿದ್ದರೆ ಹಾಗೂ ಕನಿಷ್ಠ ಸಾಮಾನ್ಯ ಕಾರ್ಯಕ್ರಮಕ್ಕೆ ಬದ್ಧರಾಗದಿದ್ದರೆ ಸಂಯುಕ್ತ ರಂಗ ಸರಕಾರಕ್ಕೂ ಕಾಂಗ್ರೆಸ್ ಗತಿಯೇ ಬರಲಿದೆ ಎಂದು ಎಚ್ಚರಿಕೆ ನೀಡಿದರು.

ತ್ರಿಪುರಾ ಸಹಿತ ಈಶಾನ್ಯ ರಾಜ್ಯಗಳತ್ತ ರಂಗ ಸರಕಾರ ತಳೆದಿರುವ ಧೋರಣೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಸ್ವಾಗತಿಸಿದರು.

**ಅಧಿಕಾರ ದಾಹವಿಲ್ಲ**

ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬೇಕೆಂದು ಪ್ರತಿಪಕ್ಷಗಳ ಬೇಡಿಕೆಯನ್ನು ಪ್ರಸ್ತಾಪಿಸಿದ ಸರ್ಕಾರ್, ಎಡರಂಗ ಅಧಿಕಾರದಾಹಿಯಲ್ಲ ಎಂದು ಘೋಷಿಸಿದರು.

ಜನತೆ ನೀಡಿದ ಅಧಿಕಾರಾವಧಿ ಮುಗಿದ ನಂತರ ಒಂದು ನಿಮಿಷವೂ ಅದು ಅಧಿಕಾರದಲ್ಲಿ ಉಳಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ಅಷ್ಟರವರೆಗೆ ಕಾಯುವ ತಾಳ್ಮೆ ಪ್ರತಿಪಕ್ಷಗಳಿಗೆ ಇಲ್ಲ ಎಂದು ಸರ್ಕಾರ್ ಛೇಡಿಸಿದರು. ಜನರನ್ನು ಎದುರಿಸುವ ಧೈರ್ಯವೂ ಅವುಗಳಿಗಿಲ್ಲ. ಆದ್ದರಿಂದ ಅವು ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರಲು ಕಾತರದಿಂದಿವೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಶಾಂತಿ ಮತ್ತು ಜನಾಂಗ ಸೌಹಾರ್ದತೆಯನ್ನು ಉಳಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ದಶರಥ್ ದೇವ್ ಮನವಿ ಮಾಡಿದರು.

---

ಶಾಸನ ಸಭೆಗಳಲ್ಲಿ ಮಹಿಳೆಯರಿಗಾಗಿ ಶೇ. 33 ಮೀಸಲಾತಿಯ ಮಸೂದೆಯ ಅಂಗೀಕಾರದಲ್ಲಾಗುತ್ತಿರುವ ಅಸಗತ್ಯ ವಿಳಂಬವನ್ನು ವಿರೋಧಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಸಂಘ ಎಐಡಿಡಬ್ಲ್ಯುಎ ಕರೆಯ ಮೇರೆಗೆ ದಿಲ್ಲಿ ಹಾಗೂ ರಾಜ್ಯಗಳ ರಾಜಧಾನಿಗಳಲ್ಲಿ ಆಗಸ್ಟ್ 4 ರಂದು ಅಖಿಲ ಭಾರತ ಬೇಡಿಕೆ ದಿನ ಆಚರಿಸಲಾಯಿತು. ಲಕ್ನೌನಲ್ಲಿ ನಡೆದ ಮತ ಪ್ರದರ್ಶನದ ಒಂದು ಚಿತ್ರ ಇದು. ಎಐಡಿಡಬ್ಲ್ಯುಎಯ ಜಂಟಿ ಕಾರ್ಯದರ್ಶಿ ಸುಭಾಷಿಣಿ ಅಲಿ ಇದರ ನೇತೃತ್ವ ವಹಿಸಿದ್ದರು.

▼



# ಲೂಧಿಯಾನದಲ್ಲಿ ಕೆಂಪು ಸಾಗರ

ರಾಷ್ಟ್ರೀಯ ಪ್ರಚಾರಾಂದೋಲನದ ಅಂತ್ಯದಲ್ಲಿ ಜುಲೈ 30ರಂದು ಲೂಧಿಯಾನದಲ್ಲಿ ಅತ್ಯಂತ ಪ್ರಭಾವಶಾಲಿ ರ್‍ಯಾಲಿ ನಡೆಯಿತು. 25 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದು ಈ ಕೆಂಪು ಸಾಗರ ರಾಜ್ಯದ ಜನತೆಯಲ್ಲಿ ಉತ್ಸಾಹದ ಚಿಲುಮೆಯನ್ನು ಉಕ್ಕಿಸಿತು.

ವಿಶೇಷವಾಗಿ ಬಡವರು ಮತ್ತು ಕಾರ್ಮಿಕರಿಗೆ ಸಂಬಂಧಿಸಿದಂತೆ ಸಿಎಂಪಿ(ಕನಿಷ್ಟ ಸಾಮಾನ್ಯ ಕಾರ್ಯಕ್ರಮ) ಆಶ್ವಾಸನೆಗಳನ್ನು ಈಡೇರಿಸುವಂತೆ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಸಂಯುಕ್ತ ರಂಗ ಸರಕಾರಕ್ಕೆ ಕರೆ ನೀಡಿದರು.

ಪಂಜಾಬಿನಲ್ಲಿ ಆಡಳಿತ ನಡೆಸುತ್ತಿರುವ ಅಕಾಲಿದಳ-ಬಿಜೆಪಿ ಕೂಟವನ್ನು ಸುರ್ಜಿತ್ ತರಾಟೆಗೆ ತೆಗೆದುಕೊಂಡರು. ಈ ಕೋಮುವಾದಿ ಕೂಟ ಶ್ರೀಮಂತ ರೈತರು, ಭೂಮಾಲಕರು ಮತ್ತು ಕೈಗಾರಿಕೋದ್ಯಮಿಗಳ ಹಿತರಕ್ಷಣೆ ಮಾಡುತ್ತಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ಭಯೋತ್ಪಾದನೆ ಮತ್ತೆ ತಲೆ ಎತ್ತುತ್ತಿರುವುದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಬಾದಲ್ ಸರಕಾರವನ್ನು ಒತ್ತಾಯಿಸಿದರು.

ಚಂಡೀಗಢ ವರ್ಗಾವಣೆ, ನದಿ ನೀರು ಮುಂತಾದ ಸಮಸ್ಯೆ ಪರಿಹಾರಕ್ಕೆ ಬಿಜೆಪಿ ಧೋರಣೆಯೇ ಅಡ್ಡಗಾಲು ಆಗಿದೆ. ಆದ್ದರಿಂದ ಅದರೊಂದಿಗಿನ ಸಂಬಂಧವನ್ನು ಕಡಿದುಕೊಳ್ಳುವುದು ಒಳಿತು. ಇದರಿಂದ ರಾಜ್ಯಕ್ಕೂ ಅದರ ಜನತೆಗೂ ಒಳ್ಳೆಯದಾಗುತ್ತದೆ ಎಂದು ಅಕಾಲಿದಳಕ್ಕೆ ಸುರ್ಜಿತ್ ಕಿವಿ ಮಾತು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಗತ್ ರಾಮ್ ಪಾಸ್ಲಾ, ಕೇಂದ್ರ ಸಮಿತಿ ಸದಸ್ಯ ಹರ್ಕನ್ ವಾಲ್ ಸಿಂಗ್, ರಘ್ಬಾಲ್ ಸಿಂಗ್, ಚಾಂದ್ ಸಿಂಗ್ ಚೋಪ್ರಾ ಮತ್ತು ಚರಣ್ ಸಿಂಗ್ ವರ್ಮಾ(ಎಲ್ಲರೂ ಕಾರ್ಯದರ್ಶಿ ಮಂಡಳಿ ಸದಸ್ಯರು) ರ್‍ಯಾಲಿಯಲ್ಲಿ ಮಾತನಾಡಿದರು.

## ಇತಿಹಾಸಕಾರರಿಂದ ಕಿಸಾನ್ ಸಭಾ ಗೋಷ್ಠಿ ಉದ್ಘಾಟನೆ

ಪಾಟ್ನಾ: ಅಖಿಲ ಭಾರತಕಿಸಾನ್ ಸಭಾದ 60ನೇ ವಾರ್ಷಿಕೋತ್ಸವದ ಅಂಗವಾಗಿ ಬಿಹಾರ ರಾಜಧಾನಿ ಪಾಟ್ನಾದಲ್ಲಿ ಸಂಘಟನೆಯ ರಾಜ್ಯ ಘಟಕ ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಿತ್ತು. 'ಬಿಹಾರದಲ್ಲಿ ರೈತ ಚಳುವಳಿ, ಸಮಸ್ಯೆಗಳು ಮತ್ತು ಮುಂದಿನ ದೃಷ್ಟಿಕೋನ' ಇದು ಸಂಕಿರಣದ ವಿಷಯವಾಗಿತ್ತು.

ಖ್ಯಾತ ಇತಿಹಾಸಕಾರ ಪ್ರೊಫೆಸರ್ ರಾಮಶರಣ ಶರ್ಮಾ ಗೋಷ್ಠಿಯನ್ನು ಉದ್ಘಾಟಿಸಿದರು.

ಗತ ದಿನಗಳ ಮೆಲುಕು ಹಾಕಿದ ಪ್ರೊ. ಶರ್ಮಾ, ಭೂ ಸುಧಾರಣೆಗಳ ವಿರುದ್ಧ ಆಳುವ ವರ್ಗ ಒಡ್ಡಿರುವ ಸವಾಲುಗಳನ್ನು ದಿಟ್ಟತನದಿಂದ ಎದುರಿಸುವಂತೆ ಎಡ ಚಳುವಳಿಯ ಇಂದಿನ ತಲೆಮಾರಿಗೆ ಕರ ನೀಡಿದರು.

ವಿಷಯ ಭಾಷಣ ಮಾಡಿದ ಪ್ರೊ. ವಿಜಯಕುಮಾರ ತಾಲೂಕ್ ದಾರ್ ಬಿಹಾರದಲ್ಲಿ ಪಾಳೆಗಾರಿ ಪದ್ಧತಿ ಬೆಳೆದು ಬಂದ ಬಗೆಯನ್ನು ವಿವರಿಸಿದರು. ಪಶ್ಚಿಮ ಬಂಗಾಳದ ಭೂ ಕಂದಾಯ ಮತ್ತು ಪಂಚಾಯತ್ ಸಚಿವ ಸೂರ್ಯಕಾಂತ ಮಿಶ್ರಾ, ಬಿಹಾರ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿ ಪ್ರೊ.ಎಸ್.ಕೆ.ಬೋಸ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಂಗೇಶ ಶಂಕರ ವಿದ್ಯಾರ್ಥಿ, ಸಿಪಿಐ ನಾಯಕ ಜಗನ್ನಾಥ್ ಸರ್ಕಾರ್, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಎಸ್.ರಾಮಚಂದ್ರನ್ ಪಿಳ್ಳೆ ಮೊದಲಾದವರು ವಿಚಾರ ಸಂಕಿರಣದಲ್ಲಿ ಮಾತನಾಡಿ, ಚರ್ಚೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಅರ್ಥಪೂರ್ಣವಾಗುವಂತೆ ಮಾಡಿದರು.

## ದೆಹಲಿ ಮುಖ್ಯಮಂತ್ರಿ ಪ್ರತಿಕೃತಿ ದಹನ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಬಿಜೆಪಿ ಸರಕಾರ ಎಲ್ಲಾ ರಂಗಗಳಲ್ಲಿ ವಿಫಲವಾಗಿರುವುದನ್ನು ವಿರೋಧಿಸಿ ಸಾವಿರಾರು ಜನರು ಈಚೆಗೆ ಮತ ಪ್ರದರ್ಶನ ನಡೆಸಿದರು. ಸಿಪಿಐ(ಎಂ), ಸಿಐಟಿಯು, ಜನವಾದಿ ಮಹಿಳಾ ಸಮಿತಿ, ಡಿವೈಎಫ್ಐ ಮತ್ತು ಎಸ್ಎಫ್ಐನ 1500ಕ್ಕೂ ಹೆಚ್ಚು ಕಾರ್ಯಕರ್ತರು ಇದರಲ್ಲಿ ಪಾಲ್ಗೊಂಡಿದ್ದರು.

ಭಿತ್ತಿ ಪತ್ರಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಿದ್ದ ಕಾರ್ಯಕರ್ತರು ಬಿಜೆಪಿ ಸರಕಾರದ ವೈಫಲ್ಯಕ್ಕೆ ಸಾಂಕೇತಿಕ ಪ್ರತಿಭಟನೆಯಾಗಿ ದೆಹಲಿ ಮುಖ್ಯಮಂತ್ರಿಯವರ ಪ್ರತಿಕೃತಿಯನ್ನು ಸುಟ್ಟು ಹಾಕಿದರು.

ಪ್ರದರ್ಶನ ನಡೆದ ಸ್ಥಳದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಂಘಟನೆಗಳ ರಾಜ್ಯ ಮುಖಂಡರು ಮಾತನಾಡಿದರು.

## ಪೋರ್ಟ್ ಬ್ಲೇರ್‌ನಲ್ಲಿ ಟ್ರೇಡ್ ಯೂನಿಯನ್ ಸಮಾವೇಶ

ಪೋರ್ಟ್ ಬ್ಲೇರ್: ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ ಪೋರ್ಟ್ ಬ್ಲೇರ್ ನಲ್ಲಿ ಇತ್ತೀಚೆಗೆ 'ಕೇಂದ್ರ ಸರಕಾರದ ಆರ್ಥಿಕ ನೀತಿಗಳು' ಕುರಿತು ಟ್ರೇಡ್ ಯೂನಿಯನ್ ಸಮಾವೇಶ ನಡೆಯಿತು. ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷ ಸಮರ್ ಮುಖರ್ಜಿ ಉದ್ಘಾಟಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಬಿ.ಚಂದ್ರ ಚೂಡ್ ಅವರೂ ಮಾತನಾಡಿದರು.

# 'ಶಿಸ್ತಿನ ಪಕ್ಷ' ಬಿಜೆಪಿಯಲ್ಲಿ ಬಂಡಾಯದ ಬಾವುಟ

ದೇಶದಲ್ಲಿ, ಅಷ್ಟೇ ಏಕೆ ಇಡೀ ಜಗತ್ತಿನಲ್ಲಿ ತಾನು ಮಾತ್ರವೇ ಶಿಸ್ತಿನ ಪಕ್ಷ ಎಂದು ಬಡಾಯಿ ಕೊಚ್ಚಿಕೊಳ್ಳುವ ಭಾರತೀಯ ಜನತಾ ಪಕ್ಷದಲ್ಲಿ ಬಂಡಾಯದ ಬಾವುಟ ಹಾರಲು ಆರಂಭವಾಗಿದೆ. ಪಕ್ಷದ ಉಪಾಧ್ಯಕ್ಷ ಮದನ್ ಲಾಲ್ ಖುರಾನಾ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ಹೈಕಮಾಂಡ್ ವರ್ತನೆಗೆ ರೇಗಿ ಅವರು ಹೀಗೆ ಮಾಡಿದ್ದಾರೆ.

ಖುರಾನಾ ಹಿಂದೆ ದೆಹಲಿಯ ಮುಖ್ಯಮಂತ್ರಿ ಆಗಿದ್ದರು. ಹವಾಲಾ ಹಗರಣದಲ್ಲಿ ಇವರೂ ಆರೋಪಿಯಾಗಿದ್ದಾರೆ ಎಂದು ಪ್ರಸ್ತಾಪವಾಗಿದ್ದರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ಆಗ ಸಾಹಿಬ್ ಸಿಂಗ್ ವರ್ಮಾ ಹೊಸ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು.

ಆರೋಪದಿಂದ ದೋಷಮುಕ್ತವಾದರೆ ಖುರಾನಾ ಪುನಃ ಮುಖ್ಯಮಂತ್ರಿ ಆಗಬಹುದು ಎಂದು ಬಿಜೆಪಿ ನಾಯಕರು ಹೇಳಿದ್ದರು. ಖುರಾನಾರ ಅಪರಾಧ ಸಾಬೀತಾ ಗುವುದಿಲ್ಲ ಎಂದು ನ್ಯಾಯಾಲಯವೊಂದು ಹೇಳಿದೆ. ಜೈನ್ ಡೈರಿಗಳನ್ನು ಪುರಾವೆಯ ನ್ನಾಗಿ ಪರಿಗಣಿಸಲು ಆಗದು ಎಂದು ನ್ಯಾಯಾಲಯ ನೀಡಿರುವ ಕಾರಣವನ್ನು ಒಪ್ಪಲು ಸಾಧ್ಯವಿಲ್ಲ ಎನ್ನುವುದು ಬೇರೆ ಮಾತು.

ತನ್ನನ್ನು 'ಆರೋಪಮುಕ್ತಗೊಳಿಸಿ' ಕೋರ್ಟ್ ತೀರ್ಪು ಕೊಟ್ಟಿರುವುದನ್ನು ಮುಖ್ಯಮಂತ್ರಿ ಸ್ಥಾನವನ್ನು ಪುನಃ ತಮಗೆ ಕೊಡಬೇಕೆಂದು ಖುರಾನಾ ಪಕ್ಷದ ನಾಯಕತ್ವಕ್ಕೆ ಮೊರೆಯಿಟ್ಟಿದ್ದರು. ಇದನ್ನು ಹೈಕಮಾಂಡ್ ಸಾಹಿಬ್ ಸಿಂಗ್ ವರ್ಮಾ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದಿತ್ತು.

ಇದರಿಂದ ಸಿಟ್ಟಿಗೆದ್ದ ಖುರಾನಾ ಉಪಾಧ್ಯಕ್ಷ ಸ್ಥಾನಕ್ಕೂ ವಿಧಾನಸಭೆ ಸದಸ್ಯತ್ವಕ್ಕೂ ರಾಜಿನಾಮೆ ಕೊಟ್ಟಿದ್ದಾರೆ. ಪ್ರಾಥಮಿಕ ಸದಸ್ಯತ್ವವನ್ನು ಮಾತ್ರ ಉಳಿಸಿಕೊಂಡಿದ್ದಾರೆ.

ಪಾಪ! ಈ ಪಕ್ಷ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪಕ್ಷವಲ್ಲ ಎನ್ನುವುದು ಈಗ ಅರಿವಿಗೆ ಬಂತೇ ಮಾನ್ಯ ಖುರಾನಾ ಸಾಹೇಬರೇ? ಬಾಬರಿ ಮಸೀದಿ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನ ಆದೇಶವನ್ನು ಪಾಲಿಸುವುದಾಗಿ ನ್ಯಾಯಾಲಯಕ್ಕೆ ಕೊಟ್ಟಿದ್ದ ವಚನವನ್ನು ಮುರಿದು ಮಸೀದಿಯನ್ನು ಉರುಳಿಸಿದ ಪಕ್ಷ ನಿಮ್ಮದೇ ಎನ್ನುವುದು ನೆನಪಿಗೆ ಬರುತ್ತದೆಯೇ ನಿಮಗೆ? ಮಾತಿಗೆ ತಪ್ಪುವ ಪಕ್ಷ ಎನ್ನುವುದರ ಜೊತೆ ಜೊತೆಯಲ್ಲೇ ಈ ಪಕ್ಷದಲ್ಲಿರುವವರು ಎಲ್ಲರೂ ತ್ಯಾಗಜೀವಿಗಳೇ, ಅಧಿಕಾರದಾಹಿಗಳಲ್ಲ ಎನ್ನುವ ಮಾತೂ ಈ ಪ್ರಕರಣದಿಂದ ಹುಸಿಯಾಗಿದೆ.

# ಪ್ಯಾಲಿಸ್ತೇನ್ ಇಂತಿಫದಾಕ್ಕೆ ಮರಳುತ್ತಿದೆಯೋ?




ಈ ಪ್ರಶ್ನೆ ಈಗ ಮಧ್ಯ ಏಶ್ಯಾದಲ್ಲಿ ಎಲ್ಲರನ್ನೂ ಕಾಡುತ್ತಿದೆ. ಇತ್ತೀಚಿನ ಪಶ್ಚಿಮ ಜೆರೂಸಲೆಮ್ ಮಾರ್ಕೆಟ್ ನಲ್ಲಿ ಪ್ಯಾಲೆಸ್ತೇನ್ ಯುವಕರಿಬ್ಬರು ಆತ್ಮಹತ್ಯಾ ಬಾಂಬರ್ ಗಳಾಗಿ ಸಿಡಿದು 12ಕ್ಕೂ ಹೆಚ್ಚು ಇಸ್ರೇಲಿಗಳ ಮರಣ ಹಾಗೂ 170ಕ್ಕೂ ಹೆಚ್ಚು ಜನರು ಗಾಯಗೊಂಡ ಪ್ರಕರಣದ ನಂತರ ಪ್ಯಾಲೆಸ್ತೇನ್-ಇಸ್ರೇಲಿ ಶಾಂತಿಯ ಸಾಧ್ಯತೆಗಳು ಇನ್ನಷ್ಟು ಹಿಂಜರಿದಿವೆ. ಹಲವು ತಿಂಗಳುಗಳಿಂದ ನೆನೆಗುದಿಗೆ ಬಿದ್ದಿರುವ ಪ್ಯಾಲೆಸ್ತೇನ್ ಆಡಳಿತ ಪ್ರದೇಶಗಳಲ್ಲಿ ಇಸ್ರೇಲಿಗಳು ಕಾಲೋನಿಗಳನ್ನು ನಿರ್ಮಿಸುವ ವಿಚಾರದ ಬಗ್ಗೆ ವಿವಾದ ಹತ್ತಿ ಉರಿಯುವ ಸಾಧ್ಯತೆ ಕಂಡು ಬಂದಿದೆ.

ಪ್ಯಾಲೆಸ್ತೇನ್ ಪ್ರದೇಶಗಳಲ್ಲಿ ಇಸ್ರೇಲಿ ಕಾಲೋನಿ ನಿರ್ಮಾಣ ಇಲ್ಲದೆ ಎಲ್ಲಾ ಶಾಂತಿ ಮಾತುಕತೆ, ಅದರ ಜಾರಿ ನಿಲ್ಲಿಸಬೇಕೆಂದು ಪ್ಯಾಲೆಸ್ತೇನ್ ಅಧ್ಯಕ್ಷ ಅರಾಫತ್ ಮೇಲೆ ಆತನ ಪಕ್ಷ, ಫತೆಹ್ ಚಳುವಳಿಯ ಉಚ್ಛ ಸಮಿತಿ, ಹಾಗೂ ಪ್ಯಾಲೆಸ್ತೇನ್ ಪಾರ್ಲಿಮೆಂಟ್ ವಿಧಿಸಿದೆ. ಕಾಲೋನಿ ನಿರ್ಮಾಣ ನಿಲ್ಲಿಸದೆ, ಅದರ ಬಗ್ಗೆ ಯಾವುದೇ ಆಶ್ವಾಸನೆ ನೀಡದೆ ಶಾಂತಿ ಮಾತುಕತೆ ಮುಂದುವರೆಸಲು ಇಸ್ರೇಲಿ ಮತ್ತು ಅಮೇರಿಕಾಗಳು ಒತ್ತಡ ಹಾಕುತ್ತಿವೆ. ಇಸ್ರೇಲಿಗಳ ಮೇಲೆ ಪ್ಯಾಲೆಸ್ತೇನ್ ಉಗ್ರಗಾಮಿಗಳು ಎಸಗುತ್ತಿರುವ ಕಾರ್ಯಾಚರಣೆಗಳನ್ನು ನಿಲ್ಲಿಸಲು ಕಠಿಣ ಕ್ರಮ ಕೈಗೊಳ್ಳದೆ ಇಸ್ರೇಲ್ ಶಾಂತಿ ಒಪ್ಪಂದದಲ್ಲಿ ತನ್ನ ಪಾಲಿನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದು ಪ್ರತಿ ಸವಾಲು ಹಾಕುತ್ತಿವೆ. ಇದು ಆಗುವವರೆಗೆ ಇಸ್ರೇಲಿ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಪ್ಯಾಲೆಸ್ತೇನರ ಮೇಲೆ ನಿರ್ಬಂಧ ಹಾಕಲಾಗಿದೆ. ಪ್ಯಾಲೆಸ್ತೇನ್ ಆಡಳಿತ ಪ್ರದೇಶಗಳಿಗೆ ಸರಕುಗಳ ಸಾಗಾಣಿಕೆ ಮೇಲೆ ಸಹ ಇಸ್ರೇಲ್ ನಿರ್ಬಂಧ ಹೇರಿದ್ದು, ಅವು ಸರಕುಗಳ ಕೊರತೆ ಎದುರಿಸುತ್ತಿವೆ. ಇಸ್ರೇಲ್ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದ ಪ್ಯಾಲೆಸ್ತೇನರ ನಿರುದ್ಯೋಗ, ಸರಕುಗಳ ಕೊರತೆ ಇವೆಲ್ಲದರ ಜತೆ ಇಸ್ರೇಲ್ ಹೇರುತ್ತಿರುವ ರಾಷ್ಟ್ರೀಯ ಅಪಮಾನ ಉಗ್ರಗಾಮಿ 'ಭಯೋತ್ಪಾದಕ ಕೃತ್ಯ'ಗಳಿಗೆ ಎಡೆ ಮಾಡಿ ಕೊಟ್ಟಿದೆ. ಇದೇ ರೀತಿ ಮುಂದುವರೆದರೆ, ಸಶಸ್ತ್ರ ಹೋರಾಟ ಅಥವಾ ಇಂತಫದಾ(ಜನರ ಗೆರಿಲ್ಲಾ ಹೋರಾಟ)ಕ್ಕೆ ಕರೆ ಕೊಡಬೇಕಾಗಬಹುದು. ಇಲ್ಲವೆ ಜನ ಅರಾಫತ್‌ರನ್ನೂ ಲೆಕ್ಕಿಸದೆ ಈ ಕ್ರಮ ಕೈಗೊಳ್ಳಬಹುದು.

## ಪಾಕಿಸ್ತಾನದಲ್ಲಿ ಮತ್ತೆ ಜನಾಂಗೀಯ ಕಲಹ-70 ಸಾವು

ಪಾಕಿಸ್ತಾನದ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳ ಕರಾಚಿ ವಿಭಾಗದಲ್ಲಿ ಮತ್ತೆ ಜನಾಂಗೀಯ ಕಲಹಗಳು ಪ್ರಾರಂಭವಾಗಿದ್ದು ಕಳೆದ ಕೆಲವು ದಿನಗಳಲ್ಲಿ 70 ಜನ ಸತ್ತಿದ್ದಾರೆ. ಶಿಯಾ ಮತ್ತು ಸುನ್ನಿ ಪಂಥಗಳ ಉಗ್ರಗಾಮಿಗಳ ನಡುವೆ ಭಾರತದಿಂದ ವಲಸೆ ಹೋದ ಮೊಹಜೀರ್ ಚಳುವಳಿಯ ಹಲವು ಉಗ್ರಗಾಮಿ ವಿಭಾಗಗಳ ನಡುವೆ ಹಾಗೂ ಸರಕಾರಿ ಪಡೆಗಳ ನಡುವೆ ಸಶಸ್ತ್ರ ಕಲಹಗಳು ನಡೆದಿವೆ.

ಕಲಹಗಳಲ್ಲಿ ಮಸೀದಿ, ಮದರಸಾ(ಧಾರ್ಮಿಕ ಶಿಕ್ಷಣ ಕೇಂದ್ರಗಳು)ಗಳ ಮೇಲೆ ಗುಂಡಿನ ಧಾಳಿ, ಲಾಯರ್, ಜಡ್ಜ್, ಸರಕಾರಿ ಅಧಿಕಾರಿ, ಪತ್ರಕರ್ತರ ಮೇಲೆ ಮಾರಕ ಧಾಳಿ, ವಿರೋಧಿ ಸಶಸ್ತ್ರ ಗುಂಪಿನ ನಡುವೆ ಕಾಳಗ, ವಿರೋಧಿ ಗುಂಪಿನ ವ್ಯಕ್ತಿಗಳ ಮನೆಗೆ ಹೋಗಿ ಕೊಲೆ ಇತ್ಯಾದಿ ಭೀಕರ ಕೃತ್ಯಗಳು ಸೇರಿವೆ. ಸಿಂಧ್ ನಲ್ಲಿ ಮುಖ್ಯವಾಗಿ ಮೊಹಜೀರ್ ಗುಂಪುಗಳ ನಡುವೆ ಮೊಹಜೀರ್ ಗುಂಪು ಮತ್ತು ಸರಕಾರಿ ಪಡೆಗಳ ನಡುವೆ ಕಲಹಗಳು ನಡೆದಿವೆ. ಪಂಜಾಬ್ ನಲ್ಲಿ ಸುನ್ನಿ ಹಾಗೂ ಶಿಯಾ ಪಂಥಗಳ ನಡುವೆ ಕಲಹಗಳು ನಡೆದಿವೆ.

## ದಕ್ಷಿಣ ಕೊರಿಯಾದ ವಿಮಾನ ಅಪಘಾತ-281 ಜನ ಸತ್ತಿರುವ ಶಂಕೆ

ದಕ್ಷಿಣ ಕೊರಿಯಾದ ಬೋಯಿಂಗ್ ಜಂಬೋ ಜೆಟ್ ಗುವಮ್ ಎಂಬ ದ್ವೀಪದಲ್ಲಿ ಅಪಘಾತಕ್ಕೀಡಾಗಿ, 281 ಜನ ಸತ್ತಿರುವ ಶಂಕೆ ಇದೆ. ಅಪಘಾತಕ್ಕೀಡಾದ ವಿಮಾನ ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್ ನಿಂದ ಹೊರಟು, ಗುವಮ್ ಎಂಬ ಅಮೇರಿಕದ ನಿಯಂತ್ರಣದಲ್ಲಿರುವ ಮಿಲಿಟರಿ ನೆಲೆ ಇರುವ ದ್ವೀಪಕ್ಕೆ ಹೋಗುತ್ತಿತ್ತು. ಶಾಂತ ಸಾಗರದಲ್ಲಿರುವ ಈ ದ್ವೀಪ ಪ್ರವಾಸಿಗಳು ಹೋಗಿ ಬರುವ ತಾಣವಾಗಿದ್ದು, ಹೆಚ್ಚಿನ ಪ್ರಯಾಣಿಕರು ದಕ್ಷಿಣ ಕೊರಿಯಾದ ಪ್ರವಾಸಿಗಳಾಗಿದ್ದರು. ಅದರಲ್ಲಿ ಹೆಚ್ಚಿನವರು ಮಧುಚಂದ್ರಕ್ಕೆ ಹೊರಟ ನವ ವಿವಾಹಿತರು ಎನ್ನಲಾಗಿದೆ.

ಆಗಾನಾ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಿಂದ 5 ಕಿ.ಮೀ.ದೂರದಲ್ಲಿರುವ ಮಬ್ಬು ಕವಿದ ವಾತಾವರಣದಲ್ಲಿ ಹತ್ತಿರದ ಅರಣ್ಯದಲ್ಲಿ ವಿಮಾನ ಅಪಘಾತವಾಗಿ ಬಿದ್ದಿತು ಎನ್ನಲಾಗಿದೆ. 20 ರಿಂದ 30 ಪ್ರಯಾಣಿಕರು ಬದುಕಿ ಉಳಿದಿದ್ದಾರೆ. ಬದುಕಿ ಉಳಿದಿರಬಹುದಾದ ಇತರ ಪ್ರಯಾಣಿಕರಿಗೆ ಹುಡುಕಾಟ ಮುಂದುವರೆದಿದೆ.

ಗುವಮ್ ದ್ವೀಪದ ಜನಸಂಖ್ಯೆ ಸುಮಾರು ಒಂದೂವರೆ ಲಕ್ಷವಾಗಿದ್ದು, ಅದರಲ್ಲಿ ಮೂರನೇ ಒಂದರಷ್ಟು ಅಮೇರಿಕದ ಮಿಲಿಟರಿ ನೆಲೆಗೆ ಸೇರಿದವರು. ಅಮೇರಿಕದ ರಾಷ್ಟ್ರೀಯ ಸುರಕ್ಷತಾ ಬೋರ್ಡ್ ಈ ವಿಮಾನ ಅಪಘಾತದ ಬಗ್ಗೆ ತನಿಖೆ ನಡೆಸುವುದು.

## ಕಾಂಬೋಡಿಯಾದಲ್ಲಿ ಹನ್-ಸೆನ್ ಪರಿಸ್ಥಿತಿ ಇನ್ನೂ ಗಟ್ಟಿ

ಕಾಂಬೋಡಿಯಾದಲ್ಲಿ ಎರಡನೇ ಪ್ರಧಾನ ಮಂತ್ರಿ ಹನ್ ಸೆನ್ ರ ಕಾಂಬೋಡಿಯನ್ ಪೀಪಲ್ಸ್ ಪಾರ್ಟಿಯ(ಸಿಪಿಪಿ) ನೆಲೆ ಇನ್ನು ಗಟ್ಟಿಯಾಗಿದೆ. ರಾಜಕುಮಾರ ರಣರಿಥ್, ಕುಖ್ಯಾತ ಪೊಲ್ ಪೊಟ್ ನ ಖೆಮರ್ ರೋಜ್ ಹಾಗೂ ಪ್ರಥಮ ಪ್ರಧಾನಮಂತ್ರಿ ಗೆರಿಲ್ಲಾಗಳ ಜತೆ ಸೇರಿ, ಹನ್ ಸೆನ್ ಮತ್ತು ಸಿಪಿಪಿಯನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಹೂಡಿದ ಸಂಚು ಹಾಗೂ ಮಿಲಿಟರಿ ಕ್ಷಿಪ್ರ ಕ್ರಾಂತಿ ವಿಫಲಗೊಂಡಾಗ ರಾಜಕುಮಾರ ರಣರಿಥ್ ದೇಶಾಂತರ ಹೋಗಿದ್ದಾನೆ. ಆತ ಅಮೇರಿಕಾ, ಯುರೋಪಿಯನ್ ದೇಶಗಳು ಹಾಗೂ ಆಸಿಯನ್(ದಕ್ಷಿಣ ಪೂರ್ವ ಏಶ್ಯಾದ ಒಂಭತ್ತು ದೇಶಗಳ ಪ್ರಾದೇಶಿಕ ಕೂಟ) ಬೆಂಬಲದಿಂದ ಪುನಃ ದೇಶಕ್ಕೆ ವಾಪಸಾಗುವ, ಪ್ರಧಾನ ಮಂತ್ರಿಯಾಗುವ ಪ್ರಯತ್ನಕ್ಕೆ ತೀವ್ರ ಹಿಂಜರಿತ ಉಂಟಾಗಿದೆ. ಅಮೇರಿಕಾ ಹಾಗೂ ಯುರೋಪಿಯನ್ ದೇಶಗಳು ಬಾಯ್ದೆರೆ ಬೆಂಬಲಕ್ಕಿಂತ ಮುಂದೆ ಹೋಗಿಲ್ಲ. ಕಾಂಬೋಡಿಯಾ ರಾಜಧಾನಿಗೆ ಭೇಟಿ ನೀಡಿದ್ದ ಆಸಿಯನ್ ವಿದೇಶ ಮಂತ್ರಿಗಳ ಪ್ರತಿನಿಧಿ ಮಂಡಲ, ಈಗ ರಣರಿಥ್ ರನ್ನು ಪುನಃ ಪ್ರಧಾನಮಂತ್ರಿ ಮಾಡುವ ಒತ್ತಾಯ ಬಿಟ್ಟುಕೊಟ್ಟಿದೆ. ರಾಜರ ಪಕ್ಷ ಫುನ್ ಸಿನ್ ಪೆಕ್ ಹಿಂದಿನ ವಿದೇಶ ಮಂತ್ರಿಯನ್ನು ತಮ್ಮ ಪ್ರತಿನಿಧಿ ಹಾಗೂ ಪ್ರಥಮ ಪ್ರಧಾನಮಂತ್ರಿಯಾಗಿ ಆರಿಸಿದ್ದು, ಪಾರ್ಲಿಮೆಂಟು ಅದನ್ನು ಅಂಗೀಕರಿಸಿದೆ. ಇದನ್ನು ಆಸಿಯನ್ ಪ್ರತಿನಿಧಿ ಮಂಡಲ ಒಪ್ಪಿಕೊಂಡಿದೆ. ಪಾರ್ಲಿಮೆಂಟು ಮಾಜಿ ಪ್ರಧಾನಮಂತ್ರಿ ರಣರಿಥ್ ಗೆ ಪ್ರಧಾನಮಂತ್ರಿಯಾಗಿ ರಹಸ್ಯವಾಗಿ ದೇಶದ್ರೋಹದ ಆಪಾದನೆಯಿಂದ ಇತರ ಕಾನೂನು ಕ್ರಮಗಳಿಂದ ರಿಯಾಯಿತಿಯನ್ನು ರದ್ದುಗೊಳಿಸಿದೆ.

ಈ ರೀತಿ ತಾನೇ ಮಿಲಿಟರಿ ಕ್ಷಿಪ್ರ ಕ್ರಾಂತಿ ನಡೆಸುವ ಯತ್ನ ನಡೆಸಿ, ಅದು ವಿಫಲವಾದಾಗ ತಾನೇ ಮಿಲಿಟರಿ ಕ್ಷಿಪ್ರ ಕ್ರಾಂತಿಯ ಬಲಿಪಶು ಎಂದು ಅಂತರ್‌ರಾಷ್ಟ್ರೀಯ ಪ್ರಚಾರ ಮಾಡುವ ರಾಜಕುಮಾರ ರಣರಿಥ್ ನ ಬೊಗಳೆ ಬಯಲಾಗಿದೆ. ಅಮೇರಿಕ ಹಾಗೂ ಯುರೋಪಿಯನ್ ಒಕ್ಕೂಟ ಒಂದಿಷ್ಟು ಗಲಾಟೆ ಇಬ್ಬಿಸಿದರೂ, ಮಧ್ಯಪ್ರವೇಶ ಮಾಡಲು ಹಿಂಜರಿಯುತ್ತಿವೆ. ○

## ಶ್ರೀಲಂಕಾ ಸೈನ್ಯ-ಎಲ್‌ಟಿಟಿಇ ನಡುವೆ ಭೀಷಣ ಕಾಳಗ

ಶ್ರೀಲಂಕಾದ ತಮಿಳು ಸಮಸ್ಯೆ ಪುನಃ ಉಲ್ಬಣಗೊಂಡಿದ್ದು ಶಾಂತಿಯ ಯಾವುದೇ ಸಾಧ್ಯತೆ ಇಲ್ಲದಂತಹ ವಾತಾವರಣ ಉಂಟಾಗಿದೆ. ಮೇ ನಲ್ಲಿ ಶ್ರೀಲಂಕಾದ ಸೈನ್ಯ ಆರಂಭಿಸಿದ 'ಜಯ ಸಿಕುರು'(ನಿಶ್ಚಯ ಜಯ) ಕಾರ್ಯಾಚರಣೆಗೆ ಎಲ್‌ಟಿಟಿಇನಿಂದ ತೀವ್ರ ಪ್ರತಿರೋಧ ಕಂಡು ಬಂದಿದೆ. ಕಿಲಿನೊಚ್ಚಿಯಿಂದ ವಾವುನಿಯಾಕ್ಕಿರುವ 69 ಕಿ.ಮೀ.ನ ಹೆದ್ದಾರಿಯನ್ನು ಸರಕಾರದ ನಿಯಂತ್ರಣಕ್ಕೊಳಪಡಿಸುವುದು 'ಜಯ ಸಿಕುರು' ಕಾರ್ಯಾಚರಣೆಯ ಉದ್ದೇಶ. ಇನ್ನೂ 21 ಕಿ.ಮೀ. ಕ್ರಮಿಸುವಾಗಲೇ ಶ್ರೀಲಂಕಾದ ಸೈನ್ಯ ನಾಲ್ಕು ನೂರಕ್ಕೂ ಹೆಚ್ಚು ಸೈನಿಕರನ್ನು ಕಳೆದುಕೊಂಡಿದೆ. ಸಾವಿರಾರು ಸೈನಿಕರು ಯುದ್ಧ ಬಿಟ್ಟು ಓಡಿ ಹೋಗಿದ್ದಾರಂತೆ. ಯುದ್ಧ ಬಿಟ್ಟು ಸೈನಿಕರು ಓಡಿ ಹೋಗುವ ಸಮಸ್ಯೆ ಎಷ್ಟು ತೀವ್ರವಾಗಿತ್ತೆಂದರೆ, ಸೈನ್ಯ ಇಂತಹ ಸೈನಿಕರು ವಾಪಸು ಬಂದರೆ ತೆಗೆದುಕೊಳ್ಳಲಾಗುವುದೆಂದು ಸಾರ್ವತ್ರಿಕ ಕ್ಷಮಾಪಣೆ ಕೊಡಬೇಕಾಯಿತು. ಸುಮಾರು ನಾಲ್ಕು ಸಾವಿರ ಸೈನಿಕರು ಈ ಕ್ಷಮಾಪಣೆಗೆ ಮನ್ನಿಸಿ ವಾಪಸು ಬಂದರೆ, ಇನ್ನೂ ಬಹಳ ದೊಡ್ಡ ಸಂಖ್ಯೆಯ ಸೈನಿಕರು ತಲೆಮರೆಸಿಕೊಂಡಿದ್ದಾರೆ ಎನ್ನಲಾಗಿದೆ. ಈ ಬಾರಿಯ ಕಾಳಗದಲ್ಲಿ ಎಲ್‌ಟಿಟಿಇ ಸಹ ಸಾಕಷ್ಟು ಹಾನಿ ಅನುಭವಿಸಿದೆ. ಆದರೂ ಸೈನಿಕರ ನೈತಿಕ ಬಲ ಮುರಿಯುವಷ್ಟು ಪ್ರತಿರೋಧ ತೋರಿಸಲು ಸಾಧ್ಯವಾಗಿದೆ.

ಈ ಮುಂದುವರೆದ ಕಲಹ ತಮಿಳು ಸಮಸ್ಯೆಗೆ ಶಾಂತಿಯುತ ಪರಿಹಾರ ದೂರ ಹೋಗುವಂತೆ ಮಾಡಿದೆ. ತಮಿಳು ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸುವ ಜನಾದೇಶದಿಂದ ಬಂದ ಚಂದ್ರಿಕಾರವರ ಸರಕಾರ ತಮಿಳು ಸ್ವಾಯತ್ತತೆ ಬಗೆಗಿನ ಪರಿಹಾರ ಸೂತ್ರದ ಬಗ್ಗೆ ಗಂಭೀರ ಪ್ರಯತ್ನಗಳನ್ನು ಮಾಡುತ್ತಿಲ್ಲ. ಈ ಬಗ್ಗೆ ನೇಮಿಸಿದ ಪಾರ್ಲಿಮೆಂಟ್ ಜಂಟಿ ಸಮಿತಿಯ ಕೆಲಸ ಯಾರಲ್ಲೂ ಭರವಸೆ ಹುಟ್ಟಿಸುತ್ತಿಲ್ಲ. ಇಂತಹ ರಾಜಕೀಯ ಪರಿಹಾರವಿಲ್ಲದೆ ತಮಿಳು ಸಮಸ್ಯೆಗೆ ಮಿಲಿಟರಿ ಪರಿಹಾರ ಹುಡುಕುವುದು ಸಾಧ್ಯವಿಲ್ಲ. ಶ್ರೀಲಂಕಾದಲ್ಲಿ ಸ್ಪಷ್ಟವಾದ ಚಾರಿತ್ರಿಕ ಅನುಭವ. ಎಲ್‌ಟಿಟಿಇ ಎಷ್ಟೇ ತಮಿಳರ ಬೆಂಬಲ ಅನುಕಂಪ ಕಳೆದುಕೊಂಡಿರಲಿ, ತಮಿಳು ಸಮಸ್ಯೆ ನಿಜವಾದ ರಾಜಕೀಯ ಪರಿಹಾರ ಹುಡುಕುವವರೆಗೆ ಎಲ್‌ಟಿಟಿಇನ ನೆಲೆ ಭದ್ರವಾಗಿರುತ್ತದೆ. ಮಿಲಿಟರಿಯಾಗಿ ಅವನ್ನು ಪರಿಹರಿಸುವುದು ಸಾಧ್ಯವಿಲ್ಲ.

## 'ನಾನು ನನ್ನ ಮಗನನ್ನು ಜೆಹಾದ್‌ಗೆ ಬಲಿ ಕೊಡಲಾರೆ'

ಇದು ಫರೂಕ್ ಅಹಮದ್ ಹಾಗೂ ಇತರ ನೂರಾರು ಹದಿ ಹರೆಯದ ಹುಡುಗರ ಪಾಲಕರ ಕೂಗು. ಪಾಕಿಸ್ತಾನದಲ್ಲಿ 'ಮದರಸಾ'(ಧಾರ್ಮಿಕ ಶಿಕ್ಷಣ ಕೇಂದ್ರ)ಗಳಲ್ಲಿ ಓದುತ್ತಿರುವ ಹುಡುಗರನ್ನು ಅಫಘಾನಿಸ್ತಾನ, ಕಾಶ್ಮೀರಗಳಲ್ಲಿ ಜೆಹಾದ್(ಧರ್ಮಯುದ್ಧ)ದ ಹೆಸರಿನಲ್ಲಿ ಬಾಡಿಗೆ ಸೈನಿಕರಾಗಿ ಕಳಿಸುವುದನ್ನು, ಪಾಕಿಸ್ತಾನದ ಸರಕಾರ ಹಾಗೂ ಐಎಸ್ಐ ಎಂಬ ಬೇಹುಗಾರಿಕೆ ಸಂಸ್ಥೆ ವ್ಯವಸ್ಥಿತವಾಗಿ ನಡೆಸುತ್ತಿದೆ. ಈ ಬಗ್ಗೆ ಎಷ್ಟು ಕೂಗಿದರೂ ಪರಿಹಾರ ಸಿಗದಾದಾಗ, ಇಂತಹ ನೂರಾರು ಪಾಲಕರು ಕೋರ್ಟಿನ ಮೊರೆಹೊಕ್ಕಿದ್ದಾರೆ. ಅಫಘಾನಿಸ್ತಾನದಲ್ಲಿ 'ತಾಲಿಬಾನ್' ಪಡೆಗಳು ಹೆಚ್ಚಾಗಿ ಇಂತಹ ಹದಿಹರೆಯದ ಬಾಡಿಗೆ ಸೈನಿಕರಿಂದ ರಚಿಸಿದ್ದು. ಕಾಬೂಲ್ ಬಳಿ ಭೀಷಣ ಕಾಳಗದಲ್ಲಿ ಇಂತಹ ತಾಲಿಬಾನ್ ಪಡೆಗಳು ದೊಡ್ಡ ಸಂಖ್ಯೆಯಲ್ಲಿ ಬಲಿಯಾಗಿದ್ದು, ಅವರ ಬದಲಿಗೆ ಪಾಕಿಸ್ತಾನದ 'ಮದರಸಾ'ಗಳಲ್ಲಿ ಜೋರಾಗಿ 'ಜೆಹಾದ್'ಗೆ ಹುಡುಗರನ್ನು ಕರೆದೊಯ್ಯುವ ಪ್ರಯತ್ನ ನಡೆಯುತ್ತಿದೆ. ಇದರ ವಿರುದ್ಧ ಪಾಲಕರು ಕೋರ್ಟಿನ ಮೊರೆ ಹೋಗಿದ್ದಾರೆ.

ತಾಲಿಬಾನ್ ಹಿಂಜರಿತದಿಂದ, ಕಾಬೂಲನ್ನು ತಾಲಿಬಾನ್ ವಿರೋಧಿ ಕೂಟ ಪುನಃ ವಶಪಡಿಸಿಕೊಳ್ಳುವ ಸಾಧ್ಯತೆಯಿಂದ ಮುಖಭಂಗ ಹೊಂದಿರುವ, ಕಂಗಾಲಾಗಿರುವ ಪಾಕಿಸ್ತಾನದ ಸರಕಾರಕ್ಕೆ ಇದು ಪ್ರಮುಖ ಆಂತರಿಕ ಸವಾಲಾಗಿ ಬಂದಿದೆ. ತಾಲಿಬಾನ್ ಹಾಗೂ ತಾಲಿಬಾನ್ ವಿರೋಧಿ ಕೂಟದ ನಡುವೆ ಶಾಂತಿ ಮಾತುಕತೆ ನಡೆಸಿ ಜಂಟಿ ಸರಕಾರ ರಚಿಸುವ ಬಗ್ಗೆ ಪಾಕಿಸ್ತಾನ, ಇರಾನಿನ ಸಹಕಾರ ಕೋರಿ ಭಾರಿ ಪ್ರಯತ್ನ ಮಾಡುತ್ತಿದೆ. ಆದರೆ ಈ ಪ್ರಯತ್ನಕ್ಕೆ ಯಾವುದೇ ಫಲ ಸಿಗುವ ಸೂಚನೆಯಿಲ್ಲ.

## ಹೋರಾಟ ನಿರತ ಕಾರ್ಮಿಕರಿಗೆ ಸೌಹಾರ್ದ ಬೆಂಬಲ

ಉತ್ತರ ಕನ್ನಡ: ಹೊನ್ನಾವರ ತಾಲ್ಲೂಕಿನ ಅನಂತವಾಡಿಯ ಪೃಥ್ವಿ ಟೈಲ್ ಕಾರ್ಮಿಕರು ಕಳೆದ 4 ತಿಂಗಳುಗಳಿಂದ ಸತತವಾಗಿ ಸಮರಧೀರ ಹೋರಾಟ ನಡೆಸುತ್ತಿದ್ದು, ತಮ್ಮ ಕನಿಷ್ಟ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಹೋರಾಟ ನಿರತ ಕಾರ್ಮಿಕರಿಗೆ ಸ್ಫೂರ್ತಿ ನೀಡುವಂತೆ ಉತ್ತರ ಕನ್ನಡ ಸಿಐಟಿಯು ಸದಸ್ಯರುಗಳಿಂದ ತಲಾ 25 ರೂ. ಗಳಂತೆ ಸಂಗ್ರಹಿಸಿ ಧರಣಿ ನಿರತ ಕಾರ್ಮಿಕರಿಗೆ ಜಿಲ್ಲೆಯ ಇತರರ ಕಾರ್ಮಿಕರು ಸೌಹಾರ್ದ ಬೆಂಬಲದ ಜೊತೆಗೆ ಧನ ಸಹಾಯವನ್ನು ನೀಡುತ್ತಿದ್ದಾರೆ.

ಕೇವಲ ಹಂಚು ಕಾರ್ಮಿಕರಷ್ಟೆ ಅಲ್ಲದೆ ದೂರದ ದಾಂಡೇಲಿಯ ಪೇಪರ್ ಮಿಲ್ ಕಾರ್ಮಿಕರು ಹತ್ತು ಸಾವಿರ ರೂಪಾಯಿಯನ್ನು ಮೊದಲ ಕಂತಿನಲ್ಲಿ ಸಹಾಯ ಮಾಡಿ ಸೌಹಾರ್ದತೆ ಮೆರೆದಿದ್ದಾರೆ. ಹುಬ್ಬಳ್ಳಿ ಸಹಾಯಕ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಜಂಟಿ ಸಂಧಾನ ಸಭೆ ನಡೆಯುತ್ತಿದ್ದರೆ ಮತ್ತೊಂದೆಡೆ ಕೆಂಬಾವುಟದ ಅಡಿಯಲ್ಲಿ ಹೋರಾಟ ನಡೆಸಲು ಅಣಿಯಾಗಿದ್ದಾರೆ. ಸಂಘದ ಜಿಲ್ಲಾ ಸಮಿತಿ ಕರಪತ್ರಗಳನ್ನು ಮುದ್ರಿಸಿ ಸುತ್ತಮುತ್ತಲ ಪ್ರದೇಶಗಳಲ್ಲಿ ಹಂಚಿ ಕಾರ್ಮಿಕರ ಕಷ್ಟಕಾರ್ಪಣ್ಯಗಳನ್ನು ಇತರ ಜನತೆಗೆ ವಿವರಿಸಿ ಅವರ ಸಹಕಾರವನ್ನು ಪಡೆಯುತ್ತಿದೆ. ಜಿಲ್ಲೆಯ ರಾಜಕೀಯ ಪಕ್ಷಗಳು ಬಿಜೆಪಿ ಹೊರತುಪಡಿಸಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಆದರೆ ಬಿಜೆಪಿ ಶಾಸಕ ಶಿವಾನಂದ ನಾಯ್ಕ ಕಾರ್ಮಿಕ ವಿರೋಧಿ ನೀತಿ ತಾಳಿ ಮಾಲಿಕರ ಪರ ವಹಿಸಿದ್ದಾರೆ. ಈ ಹೋರಾಟ ಉತ್ತರ ಕನ್ನಡ ಜಿಲ್ಲೆಯ ದುಡಿಯುವ ಜನತೆಯ ಹೋರಾಟದ ಇತಿಹಾಸವಾಗಲಿದೆ.

## ಪುರಸಭಾಧ್ಯಕ್ಷರಿಗೆ ಸಿಪಿಐ(ಎಂ) ಘೆರಾವ್

ಸಿಂಧನೂರು: ಸಿಂಧನೂರು ಪಟ್ಟಣ ಕುಡಿಯುವ ನೀರಿನ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದ್ದು, ಅದರ ಪರಿಹಾರಕ್ಕಾಗಿ ಪುರಸಭೆಯ ಸಭೆಯನ್ನು ತುರ್ತಾಗಿ ಕರೆಯಲಾಗಿತ್ತು. ಆದರೆ ಚರ್ಚೆ ವಿಷಯುಗಳಲ್ಲಿ ನೀರಿನ ಸಮಸ್ಯೆಯನ್ನೇ ಸೇರಿಸಿಲ್ಲದ ಕಾರಣದಿಂದಾಗಿ ಸಿಪಿಐ(ಎಂ)ನ ಪುರಸಭಾ ಸದಸ್ಯರಾದ ಶೇಕ್ಷಾಖಾದ್ರಿ ಮತ್ತು ಗಂಗೂಬಾಯಿ ಇದರ ಬಗ್ಗೆ ಪ್ರಸ್ತಾಪಿಸಿದರು. ಪುರಸಭಾಧ್ಯಕ್ಷರು ತಮ್ಮ ಪಕ್ಷದ ಸದಸ್ಯರುಗಳಿಗೆ ಹೊರ ಹೋಗಲು ಗೌಪ್ಯವಾಗಿ ತಿಳಿಸಿ, ಅವರು ಸಭೆಯಿಂದ ಹೊರ ಹೋದಾಗ ಬಹುತೇಕ ಸದಸ್ಯರು ಗೈರು ಹಾಜರಿರುವುದರಿಂದ ಸಭೆ ನಡೆಸಲು ಸಾಧ್ಯವಿಲ್ಲವೆಂದಾಗ ಸಿಪಿಐ(ಎಂ) ಸದಸ್ಯರು ಮತ್ತು ಕಾಂಗ್ರೆಸ್ ಸದಸ್ಯರು ಅಧ್ಯಕ್ಷರ ಹಾಗೂ ಮುಖ್ಯಾಧಿಕಾರಿಗಳ ಈ ನಿಲುವನ್ನು ಪ್ರತಿಭಟಿಸಿ 3 ಗಂಟೆಗಳ ಕಾಲ ಅಧ್ಯಕ್ಷರಿಗೆ ಮತ್ತು ಮುಖ್ಯಾಧಿಕಾರಿಗಳಿಗೆ ಘೆರಾವ್ ಮಾಡಿದರು. ನಂತರ ಸಭೆ ಕರೆದು ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆಯನ್ನು ಅಧ್ಯಕ್ಷರು ನೀಡಿದರು.

# ಕ್ಯೂಬಾದಲ್ಲಿ ವರ್ಣಮಯ ವಿಶ್ವ ಯುವಜನೋತ್ಸವ

14th World Festival of Youth and Students

July 28 - Aug 5

ಕ್ಯೂಬಾದ ರಾಜಧಾನಿ ಹವಾನ ಜುಲೈ 28 ರಂದು ವಿಶ್ವದ ಯುವಜನರ ಸಾಗರವಾಗಿತ್ತು. 156 ದೇಶಗಳ 18 ಸಾವಿರಕ್ಕೂ ಹೆಚ್ಚು ಯುವಜನರು ಸೇರಿ ಮಾನವಕುಲದ ಮೇಲೆ ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ಅವರ ಪಡೆಗಳು ಎಸಗುತ್ತಿರುವ ಜಘನ್ಯ ಅಪರಾಧಗಳನ್ನು ಖಂಡಿಸಿದರು. ಈ 18 ಸಾವಿರ ಯುವಜನರಲ್ಲಿ ಸ್ವತಃ ಅಮೇರಿಕಾ ಸಂಯುಕ್ತಸಂಸ್ಥಾನಗಳ ವಿವಿಧೆಡೆಗಳಿಂದ 771 ವಿದ್ಯಾರ್ಥಿ-ಯುವಜನರು ಬಂದಿದ್ದರು.

ಬೃಹತ್ ಮಾಲೆಕಾನ್ ವಿಹಾರಧಾಮದಲ್ಲಿ ವಿಶ್ವ ಯುವಜನ-ವಿದ್ಯಾರ್ಥಿ ಸಂಘಟನೆಯ ಮುಖಂಡರಾದ ವಿಕ್ಟೋರಿಯಾ ವೆಲಾರ್ಝುವೆಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಕ್ಯೂಬಾದ ಯುವಜನತೆ ಅಮೆರಿಕಾದ ಕ್ರಿಮಿನಲ್ ದಿಗ್ಬಂಧನದ ಹೊರೆಗಳನ್ನೆಲ್ಲಾ ಸಹಿಸಿ ಮುಂದುವರಿಯುತ್ತಿದ್ದಾರೆ ಎಂದರು. ಕ್ಯೂಬಾದಲ್ಲಿನ ಸಮಾಜವಾದೀ ರಚನೆ ಯುವಜನರಲ್ಲಿ ತುಂಬಿದ ಸ್ಫೂರ್ತಿ ಉತ್ಸಾಹವೇ ಇದಕ್ಕೆ ಕಾರಣ ಎಂದರು.

250 ಮಕ್ಕಳ ಇಂಪಾದ ಸಮೂಹಗಾನಗಳಲ್ಲಿ ನೆರೆದ ಸಾವಿರಾರು ಯುವಜನರೂ ದನಿಗೂಡಿಸಿದ್ದು ಮಾನವಕುಲದ ಭವಿಷ್ಯದ ಬಗ್ಗೆ ಚಿಂತನೆ ಮಾಡುವವರನ್ನೆಲ್ಲಾ ರೋಮಾಂಚನಗೊಳಿಸಿದ ದೃಶ್ಯ. ನಂತರ ಕ್ಯೂಬಾದ ಯುವ ಪ್ರತಿನಿಧಿಗಳ ಹಾಡುಗಳ ಕಾರ್ಯಕ್ರಮವಿತ್ತು.

ಈ ಉದ್ಘಾಟನಾ ಸಮಾರಂಭದ ನಂತರ ಪ್ರತಿನಿಧಿಗಳನ್ನೆಲ್ಲಾ ಲೆನಿನ್ ಸ್ಕೂಲಿಗೆ ಕರೆದುಕೊಂಡು ಹೋಗಿ ಅವರಿಗೆ ಆತಿಥೇಯ ಕ್ಯೂಬನ್ನರನ್ನು ಪರಿಚಯಿಸಲಾಯಿತು. ಬೇರೆ ಬೇರೆ ದೇಶಗಳಿಂದ ಬಂದ ಪ್ರತಿನಿಧಿಗಳಿಗೆ ಯುವಜನೋತ್ಸವದ ಅವಧಿಯಲ್ಲಿ ಊಟ-ವಸತಿಗಳನ್ನೆಲ್ಲಾ ಕ್ಯೂಬನ್ನರ ಮನೆಗಳಲ್ಲೇ. ಪ್ರತಿಯೊಬ್ಬ ಪ್ರತಿನಿಧಿಗೆ ಒಬ್ಬ ಕ್ಯೂಬನ್ ಕುಟುಂಬದಲ್ಲಿ ಆತಿಥ್ಯ. ಉದ್ಘಾಟನಾ ಸಮಾರಂಭದ ಸ್ಥಳದಿಂದ ಲೆನಿನ್ ಸ್ಕೂಲಿಗೆ ಪ್ರತಿನಿಧಿಗಳನ್ನೆಲ್ಲಾ ಒಯ್ಯುವ ರಸ್ತೆಯ ಎರಡೂ ಬದಿ ನಿಂತು ಸ್ವಾಗತಿಸುತ್ತಿದ್ದ ದೃಶ್ಯವನ್ನು ನೋಡಿದರೆ ಇಡೀ ಹವಾನಾ ನಗರವೇ ಅದೇಕೆ ಇಡೀ ಕ್ಯೂಬಾವೇ ಪ್ರತಿನಿಧಿಗಳ ಸ್ವಾಗತಕ್ಕೆ ಬಂದಂತಿತ್ತು.

ವಿಶ್ವದ ಏಳು ಪ್ರದೇಶಗಳನ್ನು ಪ್ರತಿನಿಧಿಸುವ ಏಳು ಕ್ಲಬ್‌ಗಳನ್ನು ಅಥವಾ ಪ್ರಾದೇಶಿಕ ಕೇಂದ್ರಗಳನ್ನು ಸಮ್ಮೇಳನದ ಆವರಣದಲ್ಲಿ ನಿರ್ಮಿಸಲಾಗಿತ್ತು- ಏಶ್ಯಾ-ಓಸಿಯಾನಾ, ಆಫ್ರಿಕಾ, ಮಧ್ಯಪೂರ್ವ, ಕೆರೇಬಿಯನ್, ಕ್ಯೂಬಾ, ಅಮೆರಿಕಾ ಮತ್ತು ಯುರೋಪ್. ವಿಚಾರಸಂಕಿರಣಗಳು, ಬಹಿರಂಗ ವೇದಿಕೆಗಳು, ಚರ್ಚೆಗಳು, ಸಾಂಸ್ಕೃತಿಕ ಕಾರ್ಯಗಳನ್ನು ಈ ಕೇಂದ್ರಗಳಲ್ಲಿ ಏರ್ಪಡಿಸಲಾಗಿತ್ತು.

ಏಶ್ಯಾ-ಓಸಿಯಾನಾ ಕೇಂದ್ರದಲ್ಲಿ ಭಾರತದ ಪ್ರತಿನಿಧಿಗಳು ಭಾಗವಹಿಸಿದರು. '21ನೇ ಶತಮಾನದಲ್ಲಿ ಯುವಜನರ ಸಮಸ್ಯೆಗಳು' ಇಲ್ಲಿ ನಡೆದ ಒಂದು ವಿಚಾರಗೋಷ್ಠಿಯ ವಿಷಯ. ಭಾರತದ ಸೋನಿ ಥಂಗನ್ ಇದರ ಅಧ್ಯಕ್ಷತೆ ವಹಿಸಿದ್ದರು. ಉತ್ತರ ಕೋರಿಯಾ, ವಿಯೆಟ್ನಾಂ, ಲಾವೋಸ್ ಪ್ರತಿನಿಧಿಗಳು ಭಾಗವಹಿಸಿದರು. ಸಾಮ್ರಾಜ್ಯಶಾಹಿ ಶಕ್ತಿಗಳು ಜೀವನವನ್ನು ಕ್ಷುಲ್ಲಕಗೊಳಿಸುತ್ತಿರುವುದನ್ನು ತಡೆಯಲು ಪ್ರಾದೇಶಿಕವಾಗಿ ಯುವಜನರು ಒಂದುಗೂಡಿ ಜಾಲಗಳನ್ನು ಏರ್ಪಡಿಸಿಕೊಳ್ಳಬೇಕು ಎಂಬುದು ಈ ವಿಚಾರಗೋಷ್ಠಿಯಲ್ಲಿ ಮೂಡಿಬಂದ ಒಮ್ಮತ.

ಅಂತರ್ರಾಷ್ಟ್ರೀಯ ಕೇಂದ್ರದಲ್ಲಿ ಭಾರತದ ಸ್ವಾತಂತ್ರ್ಯದ 50 ವರ್ಷಗಳ ಬಗ್ಗೆ ವಿಶೇಷ ಕಾರ್ಯಕ್ರಮವಿತ್ತು. ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ ಈ ಕಾರ್ಯಕ್ರಮದಲ್ಲಿ ಯುವಜನರನ್ನುದ್ದೇಶಿಸಿ ಮಾತನಾಡಿದರು. ಭಾರತದಲ್ಲಿ ಕ್ಯೂಬಾ ಸೌಹಾರ್ದ ಸಮಿತಿಯ ಕಾರ್ಯದರ್ಶಿ ಎಂ.ಎ.ಬೇಬಿ ಹೆಚ್ಚುತ್ತಿರುವ ನವ-ವಸಾಹತುಶಾಹಿಯ ಬಗ್ಗೆ ಎಚ್ಚರಿಸಿದರು. ಶಮಿಕ್ ಲಹರಿ ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಕ್ಯೂಬಾದ ಜನತೆ ಅಮೆರಿಕನ್ ಆಳರಸರು ತಮ್ಮ ಸಾರ್ವಭೌಮತೆಯನ್ನು ಕಿತ್ತುಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳ ವಿರುದ್ಧ ನಡೆಸುತ್ತಿರುವ ಹೋರಾಟ- ಇವೆರಡರ ನಡುವೆ ಸಾಮ್ಯತೆಗಳ ಬಗ್ಗೆ ಮಾತನಾಡಿದರು. ತಾನು ಕಲ್ಕತ್ತಾಗೆ ಇತ್ತೀಚೆಗೆ ಭೇಟಿ ನೀಡಿದಾಗ ಅಮೇರಿಕಾದ ಪ್ರತಿನಿಧಿ ಕಚೇರಿಯಿರುವ ರಸ್ತೆಗೆ ಹೊಚಿಮಿನ್‌ರ ಹೆಸರಿಟ್ಟದ್ದನ್ನು ಗಮನಿಸಿದರೆ ಎಂದು ವಿಯೆಟ್ನಾಮಿನ ಪ್ರತಿನಿಧಿ ಹೇಳಿದಾಗ ಸಭೆಯಲ್ಲಿ ದೀರ್ಘ ಕರತಾಡನವಾಯಿತು.

ಅರ್ಜಂಟೀನಾದ ಮಹಿಳಾ ಪ್ರತಿನಿಧಿಗಳು ಕ್ರಾಂತಿಚೌಕ್‌ನಲ್ಲಿ ಅರ್ಜಂಟೀನಾದ ನಿರಂಕುಶ ಆಡಳಿತಗಳಿಗೆ ಬಲಿಯಾದ 30 ಸಾವಿರ ಅರ್ಜೆಂಟೀನಾದ ಯುವಜನರಿಗೆ ಅಶ್ರುತರ್ಪಣ ಮಾಡಿದರು, ಮಿಲಿಟರಿ ಪ್ರಭುತ್ವದಲ್ಲಿ ನರಳುತ್ತಿರುವ ಅರ್ಜಂಟೀನಾದಲ್ಲಿ ಮತ್ತೆ ಪ್ರಜಾಪ್ರಭುತ್ವವನ್ನು ತರುವ ಪ್ರತಿಜ್ಞೆಗೈದರು. ಇಡೀ ಲ್ಯಾಟಿನ್ ಅಮೆರಿಕಾದ ಪ್ರತಿನಿಧಿಗಳು "ಅರ್ಜೆಂಟೀನಾದ ತಾಯಂದಿರೊಂದಿಗೆ ನಾವಿದ್ದೇವೆ" ಎಂದು ಸೌಹಾರ್ದತೆಯನ್ನು ಸಾರಿದರು.

ಕ್ಯೂಬನ್ನರಿಗೆ ಮಾನವ ಹಕ್ಕುಗಳು ಎಂಬುದು ಮಾನವ ಘನತೆಯ ಒಂದು ಸೂಚಕ. ಸಾಮಾಜಿಕ ನ್ಯಾಯಕ್ಕೆ ಪೂರ್ಣ ಅವಕಾಶವಿದ್ದಲ್ಲಿ ಮಾತ್ರವೇ ಮಾನವ ಘನತೆಯೆಂಬುದು ನನಸಾಗುತ್ತದೆ. ಮಾನವಹಕ್ಕುಗಳ ಬಗ್ಗೆ ಒದರಾಡುವ ಅಮೆರಿಕಾ ಮತ್ತಿತರ ದೇಶಗಳಲ್ಲಂತೂ ಈ ಅವಕಾಶ ಇಲ್ಲವೇ ಇಲ್ಲ ಎಂದರು ಕ್ಯೂಬಾದ ವಿದೇಶಾಂಗ ಮಂತ್ರಿ ರೋಬರ್ಟೋ ರೊಬೈನಾ - ಅವರು ಅಂತರ್ರಾಷ್ಟ್ರೀಯ ಯುವ ಭ್ರಾತೃತ್ವದ ಸಭೆಯಲ್ಲಿ ಮಾತನಾಡುತ್ತಿದ್ದರು.

(ಐಪಿಎಸ್ ಎನ್)

ಯುವಜನೋತ್ಸವದಲ್ಲಿ ಭಾಗವಹಿಸಲು ಬಂದ ಪ್ರತಿನಿಧಿಗಳು ಕ್ಯಾಸ್ಟ್ರೋರೊಂದಿಗೆ



## ಪದಬಂಧ-1 ಕ್ಕ ಉತ್ತರ - ವಿಶ್ವ

| | | | | | | | | | |
|---|---|---|---|---|---|---|---|---|---|
| ಕಾ | ರ್ಮಿ | ಕ | ವ | ರ್ಗ | ಸಂ | ಘ | ರ್ಷ | | ಮಂ |
| ರ್ಲ್ | | | ನಿ | ರಂ | ಕು | ಶ | ಸಂ | | ಗ |
| ಮಾ | ನ | ವ | ತಾ | ವಾ | ದ | | ಕ | | ನಿಂ |
| ರ್ಕ್ಸ್ | ವ | | ವಾ | ರ್ಲಿ | ಹೋ | ರಾ | ಟ | | ದ |
| | ವ | ರ | ಣ | | | ಷ್ಟ್ರೀ | | | ಮಾ |
| ಬಂ | ಸಾ | ಮ್ಯ | ವಾ | ದ | | ಯ | | | ನ |
| ಡಾ | ಹ | ವಾ | | | | ವ | | | ವ |
| ಯ | ತು | ದ | | | | ಕ | | ಅ | |
| ಗಾ | ಶಾ | | | | | ತೆ | | ಮೂ | |
| ರ | ಹಿ | | ಹೆ | ಚ್ಚು | ವ | ರಿ | ಮೌ | ಲ್ಯ | |

ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಐಕ್ಯರಂಗ ಪದಬಂಧ-1 ರ ಉತ್ತರಗಳು ಹೀಗಿವೆ

# ಟ್ರೇಡ್ ಯೂನಿಯನ್ ಕಾನೂನಿನ ಸೆಕ್ಷನ್ 22 ರ ತಿದ್ದುಪಡಿ ಕಾರ್ಮಿಕ ಮಂತ್ರಿಗಳಿಗೆ ಜೀವನ್ ರಾಯ್ ಪತ್ರ

ಕಾರ್ಮಿಕ ಸಂಘ ಕಾನೂನಿನ 22 ನೇ ಸೆಕ್ಷನ್‌ಗೆ ತರಬೇಕೆಂದಿರುವ ತಿದ್ದುಪಡಿಯನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಸಿ.ಪಿ.ಐ(ಎಂ) ಸಂಸತ್ ಸದಸ್ಯ ಜೀವನ್ ರಾಯ್ ಕೇಂದ್ರ ಕಾರ್ಮಿಕ ಮಂತ್ರಿಗಳಿಗೆ ಬರೆದ ಪತ್ರವೊಂದರಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಟ್ರೇಡ್ ಯೂನಿಯನ್ ಕಾನೂನು, 1926 ಇದಕ್ಕೆ ಪ್ರಸ್ತಾಪಿತ ತಿದ್ದುಪಡಿಗಳನ್ನು ಇತ್ತೀಚೆಗೆ ಕೇಂದ್ರ ಸಂಪುಟ ಮಂಜೂರು ಮಾಡಿದ್ದು ಅದನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದು. ಇವುಗಳಲ್ಲಿ ಹೆಚ್ಚಿನ ತಿದ್ದುಪಡಿಗಳು ಕಾರ್ಮಿಕ ಸಂಘಗಳಿಗೆ ಒಪ್ಪಿಗೆಯಾದರೂ ಸಂಘದ 'ಹೊರಗಿನವರು' 5ಕ್ಕಿಂತ ಹೆಚ್ಚು ಇರಬಾರದು ಎಂದು ಮಿತಿ ಹಾಕುವ ಈ ಕಾನೂನಿನ ಸೆಕ್ಷನ್ 22 ರ ಬಗ್ಗೆ ಜೀವನ್ ರಾಯ್ ಆತಂಕ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕ ಮಂತ್ರಿ ವೀರೇಂದ್ರ ಕುಮಾರ್‌ರವರಿಗೆ ಈ ಬಗ್ಗೆ ಬರೆದ ಪತ್ರದಲ್ಲಿ ಅವರು 'ಕಾರ್ಮಿಕರ ನಡುವೆ ಮುಖಂಡತ್ವದ ಬೆಳವಣಿಗೆ ನಿಧಾನವಾಗಿ ಸಾಗಿರುವ ಬಗ್ಗೆ ಕಾರ್ಮಿಕ ಆಂದೋಲನಕ್ಕೆ ಆತಂಕವಿದೆ. ತನ್ನ ಸ್ವಂತ ಹಿತಾಸಕ್ತಿಯಿಂದಲೇ ಕಾರ್ಮಿಕ ಆಂದೋಲನ ಹೆಚ್ಚೆಚ್ಚು ಕಾರ್ಮಿಕರು ನಾಯಕತ್ವದ ಸ್ಥಾನಗಳಿಗೆ ಏರಬೇಕೆಂದು ಬಯಸುತ್ತದೆ. ಆದರೆ 'ಹೊರಗಿನವರ' ಸಂಖ್ಯೆಯನ್ನು ಐದಕ್ಕೆ ಮಿತಿಗೊಳಿಸುವುದನ್ನು ಕಾರ್ಮಿಕ ಆಂದೋಲನ ಒಪ್ಪಬೇಕಾದರೆ ವಜಾ ಮಾಡಲ್ಪಟ್ಟ, ಕೆಲಸದಿಂದ ತೆಗೆದು ಹಾಕಿದ ಅಥವಾ ಮುಷ್ಕರ ಇತ್ಯಾದಿಗಳ ಕಾರಣ ಬಲಿ ಹಾಕಲ್ಪಟ್ಟ ಕಾರ್ಮಿಕರನ್ನು ಹೊರಗಿನವರು ಎಂದು ಪರಿಗಣಿಸಬಾರದು" ಎಂದು ಹೇಳಿದ್ದಾರೆ.

ಈ ರಕ್ಷಣೆ ಒದಗಿಸದಿದ್ದರೆ ಈ ಸೆಕ್ಷನ್ ನೀತಿಗೆಟ್ಟ ಮಾಲಕರ ಕೈಗಳಲ್ಲಿ ಒಂದು ಕರಾಳ ಅಸ್ತ್ರವಾಗಿಬಿಡಬಹುದು. ಅಂತವರು ಕಾರ್ಮಿಕರಾಗಿರುವ ಪದಾಧಿಕಾರಿಗಳನ್ನು ವಜಾ ಮಾಡಿ ಕಾರ್ಮಿಕ ಸಂಘದ ರಿಜಿಸ್ಟ್ರೇಷನ್‌ನನ್ನು ರದ್ದು ಮಾಡಿಸಲು ಪ್ರಯತ್ನಿಸುತ್ತಾರೆ. ಈ ಮೂಲಕ ರಾತ್ರಿ ಬೆಳಗಾಗುವಷ್ಟರಲ್ಲಿ ನೂರಾರು ಸಂಘಗಳು ಈ ರೀತಿ ರಿಜಿಸ್ಟ್ರೇಷನ್ ಕಳಕೊಳ್ಳುವಂತೆ ಮಾಡಬಹುದು ಎಂದು ಜೀವನ್ ರಾಯ್ ಶಂಕೆ ವ್ಯಕ್ತಪಡಿಸಿದ್ದಾರೆ.

ಆದ್ದರಿಂದ ಒಂದೋ ವಜಾ ಮಾಡಲ್ಪಟ್ಟ, ಕೆಲಸದಿಂದ ತೆಗೆದು ಹಾಕಲ್ಪಟ್ಟ ಕಾರ್ಮಿಕರನ್ನು ಹೊರಗಿನವರೆಂದು ಪರಿಗಣಿಸಬಾರದು ಅಥವಾ ಸಂಘದ ಎಲ್ಲಾ ಪದಾಧಿಕಾರಿಗಳ ನೌಕರಿಗೆ ರಕ್ಷಣೆ ಕೊಡುವಂತೆ ಈ ಸೆಕ್ಷನ್ ಅನ್ನು ಮರು ನಿರೂಪಿಸಬೇಕು ಎಂದು ಜೀವನ್ ರಾಯ್ ಆಗ್ರಹಪಡಿಸಿದ್ದಾರೆ.

# ಹಿಂದಿನ ಸಂಪುಟ ನಿರ್ಣಯವನ್ನು ಮುರಿದು ರಸಗೊಬ್ಬರ ಕಾರ್ಖಾನೆಗಳ ಮುಚ್ಚಿಕೆ ಸಂಸತ್ ಸದಸ್ಯರ ಪ್ರತಿಭಟನೆ

ಪಕ್ಷ ಭೇದವಿಲ್ಲದೆ 59 ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ಎಫ್.ಸಿ.ಐ. ಹಾಗೂ ಹೆಚ್‌ಎಫ್.ಸಿ.ಯ ರೋಗಗ್ರಸ್ತ ರಸಗೊಬ್ಬರ ಘಟಕಗಳನ್ನು ಮುಚ್ಚುವ ಪ್ರಯತ್ನಗಳನ್ನು ಪ್ರತಿಭಟಿಸಿದ್ದಾರೆ.

ಹೆಚ್.ಎಫ್.ಸಿ.ಯ ದುರ್ಗಾಪುರ ಹಾಗೂ ಬರೌನಿ ಘಟಕಗಳನ್ನು ಹಾಗೂ ಹೆಚ್.ಎಫ್.ಸಿ.ಯ ತಲ್ಚೇರ್ ಹಾಗೂ ರಾಮಗುಂಡಂ ಘಟಕಗಳನ್ನು ಮುಚ್ಚುವ ಬಗ್ಗೆ ಕೇಂದ್ರ ಸಂಪುಟ ಶೀಘ್ರವೇ ನಿರ್ಣಯ ಕೈಗೊಳ್ಳಬೇಕೆಂಬ ಸುದ್ದಿಯ ಬಗ್ಗೆ ಈ ಎಂ.ಪಿಗಳು ಆಘಾತ ವ್ಯಕ್ತಪಡಿಸಿದರು. ಇತ್ಯರ್ಥವಾಗಿರುವ ಸಂಗತಿಗಳನ್ನು ಮತ್ತೆ ತೆರೆಯುತ್ತಿರುವುದು ಆತಂಕಕಾರಿ ಎಂದು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಏಪ್ರಿಲ್ 1915 ರಲ್ಲಿ ಈ ಹೆಚ್.ಎಫ್.ಸಿ. ಹಾಗೂ ಎಫ್.ಸಿ.ಐ. ಈ ಘಟಕಗಳನ್ನು ಹಾಗೂ ನಾಮರೂಪ್, ಸಿಂಧ್ರಿ ಘಟಕಗಳನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಒಂದು ಸಂಪುಟ ನಿರ್ಣಯವಾಗಿತ್ತು. ಮತ್ತೆ-ಮತ್ತೆ ಸರಕಾರ ಈ ನಿರ್ಣಯದ ಬಗ್ಗೆ ಎರಡೂ ಸದನಗಳಿಗೆ ಹಾಗೂ ಸಂಸದೀಯ ಸಮಿತಿಗಳಿಗೆ ತಿಳಿಸಿತ್ತು.


ಆದರೆ ಹಿಂದಿನ ಸಾಧ್ಯತಾ ಅಧ್ಯಯನ ವರದಿಗಳನ್ನು ಬದಿಗೊತ್ತಿ ಈ ಘಟಕಗಳ ಕಾರ್ಯಸಾಧ್ಯತೆಯನ್ನು ಒಂದು ಹಣಕಾಸು ಸಂಸ್ಥೆ ವರದಿಯ ಆಧಾರದ ಮೇಲೆ ಹೊಸದಾಗಿ ಪ್ರಸ್ತಾಪವೊಂದು ಸಂಪುಟದ ಮುಂದೆ ಹೋಗಿದೆಯಂತೆ. ಇದರ ಪ್ರಕಾರ ಅದರಲ್ಲಿ ನಾಲ್ಕು ಘಟಕಗಳನ್ನು ಮುಚ್ಚಲಾಗುವುದು.

ಮೂರು ಕಾರಣಗಳಿಂದಾಗಿ ಇದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ ಎಂದು ಈ ಎಂ.ಪಿ.ಗಳು ಹೇಳುತ್ತಾರೆ. ಒಂದನೆಯದಾಗಿ, ಈ ಯೂರಿಯಾ ಉತ್ಪಾದಿಸುವ ಘಟಕಗಳನ್ನು ಪುನರುಜ್ಜೀವನಗೊಳಿಸುವುದಾಗಿ ಸರಕಾರ ಮತ್ತೆ-ಮತ್ತೆ ಹೇಳುತ್ತಾ ಬಂದಿದೆ. ಎರಡನೆಯದಾಗಿ, ಯೂರಿಯಾವನ್ನು ಈಗ ಆಮದು ಮಾಡಲಾಗುತ್ತದೆ. ಹಾಗೂ ಮೂರನೆಯದಾಗಿ ಈ ಕ್ರಮದಿಂದ 10000 ಉದ್ಯೋಗಾವಕಾಶಗಳು ನಷ್ಟವಾಗುತ್ತವೆ.

ತಕ್ಷಣ ಮಧ್ಯಪ್ರವೇಶಿಸಿ ಕೇಂದ್ರ ಸಂಪುಟ ಈ ವಿನಾಶಕಾರಿ ನಿರ್ಣಯ ತಗೊಳ್ಳದಂತೆ ತಡೆಯಬೇಕು ಎಂದು ಕಾಂಗ್ರೆಸ್(ಐ), ಬಿಜೆಪಿ, ಜನತಾದಳ, ತೆಲುಗುದೇಶಂ, ಸಿಪಿಐ(ಎಂ) ಹಾಗೂ ಸಿಪಿಐ ಸಂಸತ್ ಸದಸ್ಯರು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

## ವಾರದ ವ್ಯಂಗ್ಯ ಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್




KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು